ರೇಂಜರ್‌ಗಳಿಗಾಗಿ

ಪ್ರೇರಣಾ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

Lord Baden Powell, Founder
Lady Baden Powell, World Chief Guide

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ

ರೇಂಜರ್‌ಗಳಿಗಾಗಿ

ಪ್ರೇರಣಾ

ಲೇಖಕರು:

ಶ್ರೀಮತಿ ಕಮಲಾಕ್ಷಿ ಹೆಗಡೆ

ಎಂ.ಎ., ಬಿ.ಇಡಿ, HWB (G)

ಸದಸ್ಯರು ಪ್ರಕಟಣಾ ಸಮಿತಿ

ಸಹಾಯಕ ಜಿಲ್ಲಾ ಆಯುಕ್ತರು, ಬೆಂಗಳೂರು ಉತ್ತರ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ – ಕರ್ನಾಟಕ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ನಂ.39, ಶಾಂತಿಗೃಹ, ಅರಮನೆ ರಸ್ತೆ

ಬೆಂಗಳೂರು – 560 001

ಪುಸ್ತಕದ ಹೆಸರು	:	ರೇಂಜರ್‌ಗಳಿಗಾಗಿ "ಪ್ರೇರಣಾ"
ಲೇಖಕರು	:	ಶ್ರೀಮತಿ ಕಮಲಾಕ್ಷಿ ಹೆಗಡೆ
ಪ್ರಕಾಶಕರು	:	ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ, ನಂ. 39, ಶಾಂತಿಗೃಹ ಅರಮನೆ ರಸ್ತೆ, ಬೆಂಗಳೂರು – 560 001.
ಮೊದಲ ಮುದ್ರಣ	:	
©	:	ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಬಳಸಿದ ಕಾಗದ	:	70 ಜಿ.ಎಸ್.ಎಂ. ಮ್ಯಾಪ್‌ಲಿಥೋ
ಪುಸ್ತಕದ ಅಳತೆ	:	1/8 ಡೆಮ್ಮಿ
ಪುಟಗಳು	:	80
ಬೆಲೆ	:	ರೂ. 100/–
ಡಿ.ಟಿ.ಪಿ.	:	ಕೆ.ವಿ. ರಾಘವೇಂದ್ರಕುಮಾರ್ ಪದ್ಮಶಾಲಿ
ಪುಟ ವಿನ್ಯಾಸ	:	ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.

Printed @

Sathyasri

Printers Pvt. Ltd.,

Mysuru Road, Bengaluru - 26

Tel: 080-26748811 Mob: 9342864761

ಅರ್ಪಣೆ

ದಿ|| ಎಸ್.ಕೆ. ಪ್ರಭಾರವರಿಗೆ

"ರೇಂಜರ್ಸ್ ಮುನ್ನುಡಿಗೆ ಇರಲಿ 'ಪ್ರೇರಣಾದ' ಉಸಿರು
ಅನುಭವದ ಜ್ಞಾನದಾಗರವು ಸ್ಫುರಿಸುತಿರಲಿ ಹಸಿರು
ಹೊಸ ಬುತ್ತಿ ಪಯಣದೊಳಗೆ ಬೆರೆತಿರಲಿ ಶ್ರಮದ ಬೆವರು
ಕಲೆತು, ಕಲಿತು, ಬಾಳಕಲೆಯನರಿತು ತುಳಿಯದಿರಲಿ ಕೆಸರು
ಪ್ರಗತಿಪಥದಲಿ ಸಾಗಿ ಉಳಿದಿರಲಿ ಸ್ಕೌಟ್ಸ್ ಗೈಡ್ಸ್‌ನ ಹೆಸರು"

ಎಂಬ ಆಶಯದೊಂದಿಗೆ ದಿ|| ಎಸ್.ಕೆ. ಪ್ರಭಾರವರಿಗೆ
'ಪ್ರೇರಣಾ' ಕರ್ತೃವಿಗೆ ನಮನ ಸಲ್ಲಿಸುತ್ತಾ,
ಸವಿನಯ ಅರ್ಪಣೆ

– ಶ್ರೀಮತಿ ಕಮಲಾಕ್ಷಿ ಹೆಗಡೆ
HWB(G), ADC(G)
ಪ್ರಕಟಣಾ ಸಮಿತಿ ಸದಸ್ಯರು
ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ
ಕರ್ನಾಟಕ

ಮುನ್ನುಡಿ

ಎಲ್ಲ ಕಾಲಘಟ್ಟದಲ್ಲಿ ಪ್ರತಿಯೊಂದು ಕ್ಷೇತ್ರಗಳಲ್ಲೂ ಮಹಿಳೆ ತಾನು 'ಅಬಲೆಯಲ್ಲ; ಸಬಲೆ' ಎಂಬುದನ್ನು ಸಾರಿದ್ದಾಳೆ. ಪುರುಷನಿಗೆ ಸರಿಸಮಾನವಾಗಿ ನಿಂತು ತನ್ನ ಸಾಮರ್ಥ್ಯದ ಅರಿವು ಮೂಡಿಸಿದ್ದಾಳೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದಿರುವ ನೂರಾರು ಮಹಿಳೆಯರು ಹಿಂದೆಯೂ, ಇದ್ದರು. ಈಗಲೂ ಇದ್ದಾರೆ. ಧೈರ್ಯಕ್ಕೆ ಹೆಸರಾದ ಝಾನ್ಸಿರಾಣಿ ಲಕ್ಷ್ಮಿಬಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಒನಕೆ ಓಬವ್ವ, ನೋಬೆಲ್ ಪ್ರಶಸ್ತಿ ಪುರಸ್ಕೃತೆ ಮಹಾಮಾನವತಾವಾದಿ ಮದರ್ ಥೆರೆಸ್ಸಾ, ಆಡಳಿತದಲ್ಲಿ ದಕ್ಷತೆಯನ್ನು ತೋರಿಸಿಕೊಟ್ಟ ಇಂದಿರಾಗಾಂಧಿ, ಯಶಸ್ವಿ ಉದ್ಯಮಿಯಾಗಿ ಡಾ॥ ಕಿರಣ್ ಮಜುಂದಾರ್ ಷಾ, ಬಾಹ್ಯಾಕಾಶವನ್ನು ಪ್ರವೇಶಿಸಿದ ಭಾರತೀಯ ಮೊಟ್ಟ ಮೊದಲನೆಯ ಮಹಿಳೆ ಕಲ್ಪನಾಚಾವ್ಲ, ಇಂತಹ ಅದೆಷ್ಟೋ ಸಾಧಕಿಯರ ಉದಾಹರಣೆಗಳು ನಮ್ಮ ಕಣ್ಣ ಮುಂದೆ ಇವೆ.

ಇಷ್ಟೆಲ್ಲದರ ನಡುವೆ ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿದ್ದರೂ ಹೆಣ್ಣು ಮಕ್ಕಳಿಗೆ ಸಮಾನ ಅವಕಾಶ ಸಿಗಬೇಕೆನ್ನುವ ಪ್ರಯತ್ನ ಮತ್ತು ಕೂಗು ಸಾಗುತ್ತಲೇ ಇದೆ. ಮಕ್ಕಳಲ್ಲಿ ಪರಿಸರ ಪ್ರಜ್ಞೆ, ಜಾತ್ಯತೀತ ಮನೋಭಾವ, ಮನೋಬಲವನ್ನು ಕಲಿಸಿ, ಬದುಕಿಗೆ ಅರ್ಥಪೂರ್ಣ ಪಾಠವನ್ನು ಕಲಿಸಿಕೊಡುವ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯನ್ನು ಹುಟ್ಟುಹಾಕಿದ ಲಾರ್ಡ್ ಬೇಡನ್ ಪಾವೆಲ್‌ರವರು ಮಹಿಳೆಯರ ಸಬಲೀಕರಣಕ್ಕೆ ಲಿಂಗ ಸಮಾನತೆಯ ಅವಶ್ಯಕತೆಯನ್ನು 100 ವರ್ಷಗಳ ಹಿಂದೆಯೇ ಅರಿತು, ಆಗಲೇ ಚಳವಳಿಯಲ್ಲಿ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ 'ಗೈಡ್ಸ್', 'ರೇಂಜರ್ಸ್' ಘಟಕಗಳನ್ನು ಪ್ರಾರಂಭಿಸಿದ್ದರು. ಅಂತಹ ದೂರದೃಷ್ಟಿ ಅವರಲ್ಲಿತ್ತು.

ಹೆಣ್ಣು ಋತುಚಕ್ರ, ಗರ್ಭಾವಸ್ಥೆ ಮತ್ತು ಪ್ರಸವ ವೇದನೆಯಂತಹ ತನ್ನ ನೈಸರ್ಗಿಕ ಕ್ರಿಯೆಗಳಲ್ಲಿ ಎಷ್ಟೋ ನೋವುಗಳನ್ನು ಅನುಭವಿಸಿದರೂ ಮುದ್ದಿನ ಮಗಳಾಗಿ, ಆದರ್ಶ ಮಡದಿಯಾಗಿ, ಮಮತೆ ತೋರುವ ತಾಯಿಯಾಗಿ, ಪ್ರೀತಿಯ ಅಜ್ಜಿಯಾಗಿ ತನ್ನ ಜವಾಬ್ದಾರಿಗಳನ್ನು ಜೀವನದುದ್ದಕ್ಕೂ ಯಶಸ್ವಿಯಾಗಿ ನಿರ್ವಹಿಸುವ ಪ್ರಯತ್ನದಲ್ಲಿ ತನ್ನೆಲ್ಲ ನೋವುಗಳನ್ನು ಮರೆಯುತ್ತಾಳೆ. ಇದು ಹೆಣ್ಣಿಗೆ ಪ್ರಕೃತಿ ನೀಡಿರುವ ವರ.

ಹೆಣ್ಣಿನ ಈ ಜೀವನ ಪಯಣದಲ್ಲಿ "ಋತುಚಕ್ರ"ವೆಂಬುದು ಪ್ರಮುಖ ನೈಸರ್ಗಿಕ ಕ್ರಿಯೆ. ಋತುಚಕ್ರಕ್ಕೆ ಸಂಬಂಧಪಟ್ಟಂತೆ ಈಗಲೂ ಕೆಲವು ಅಂಧ ನಂಬಿಕೆಗಳಿವೆ. ಕೆಲವೊಂದು ಕಡೆ ಇಂದಿಗೂ ತಪ್ಪು ಅಭಿಪ್ರಾಯಗಳು, ಮೂಢನಂಬಿಕೆಗಳ ಪಾಲನೆ ಆಗುತ್ತಿದೆ. ಜಗತ್ತು ಎಷ್ಟೇ ಮುಂದುವರೆದಿದ್ದರೂ, ಕೆಲವು ಜನರು ಇದರ ಬಗ್ಗೆ ಕೆಟ್ಟ ಆಚರಣೆಗಳನ್ನು ನಡೆಸಿಕೊಂಡು ಬರುತ್ತಿರುವುದು ವಿಪರ್ಯಾಸವೇ ಸರಿ.

ಈ ಹಿನ್ನೆಲೆಯಲ್ಲಿ, ಹಲವು ದಶಕಗಳ ಕಾಲ ಚಳವಳಿಗೆ ಮೌಲಿಕ ಸೇವೆ ಸಲ್ಲಿಸಿ, ನಮ್ಮನ್ನಗಲಿರುವ ಶ್ರೀಮತಿ ಎಸ್.ಕೆ. ಪ್ರಭಾರವರು ಚಳವಳಿಯ ಶಿಬಿರ ಮತ್ತು ಚಟುವಟಿಕೆಗಳಲ್ಲಿ ಭಾಗವಹಿಸುವ ಗೈಡ್‌ಗಳು, ರೇಂಜರ್‌ಗಳು ಋತುಸ್ರಾವಕ್ಕೆ ಒಳಗಾಗುವ ಸಂದರ್ಭಗಳಲ್ಲಿ ಅನುಭವಿಸುವ ಮುಜುಗರ ಮತ್ತು ಯಾತನೆಯನ್ನು ಗಮನಿಸಿ, ಈ ಬಗ್ಗೆ ಹೆಚ್ಚಿನ ವೈದ್ಯಕೀಯ ಅರಿವು ಮೂಡಿಸುವ ನಿಟ್ಟಿನಲ್ಲಿ "ಪ್ರೇರಣ" ಎಂಬ ಮಹತ್ತರವಾದ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ನಮ್ಮ ರಾಜ್ಯದಲ್ಲಿ 2015ರಲ್ಲಿ ಪ್ರಾರಂಭಗೊಂಡ ಈ ಕಾರ್ಯಕ್ರಮಕ್ಕೆ ಇಂದು ಇಷ್ಟೊಂದು ಮಹತ್ವ ಸಿಕ್ಕಿರುವುದು ಎಸ್.ಕೆ. ಪ್ರಭಾರವರ ಕನಸಿಗೆ ದೊರೆತ ಗೌರವವಾಗಿದೆ.

ಕೋವಿಡ್-19ರ ಹಿನ್ನೆಲೆಯಲ್ಲಿ ಈ ವರ್ಷ ರಾಜ್ಯಾದ್ಯಂತ ಎಲ್ಲಾ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ, ಸ್ಥಳೀಯವಾಗಿ ಲಭ್ಯವಿರುವ ಸಂಪನ್ಮೂಲ ವ್ಯಕ್ತಿಗಳ ನೆರವಿನೊಂದಿಗೆ "ಪ್ರೇರಣ" ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಯಶಸ್ವಿಯಾಗಿ ನಡೆಸಲಾಗುತ್ತಿದೆ, ಇದು ಸಂತೋಷದ ವಿಚಾರ.

"ಪ್ರೇರಣ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ, ನಮ್ಮ ಚಳವಳಿಯ ಮತ್ತೊಬ್ಬ ಮಹಿಳಾ ಮುಖಂಡರೂ, ಸ್ವತಃ ಸಾಹಿತಿ ಮತ್ತು ಶಿಕ್ಷಕಿಯೂ ಆಗಿರುವ ಶ್ರೀಮತಿ ಕಮಲಾಕ್ಷಿ ಹೆಗಡೆಯವರು ಪುಸ್ತಕವೊಂದನ್ನು ಹೊರತರುತ್ತಿರುವುದು ಸಂತೋಷದ ವಿಚಾರ. ಈ ಪುಸ್ತಕವನ್ನು ದಿವಂಗತ ಶ್ರೀಮತಿ ಎಸ್.ಕೆ. ಪ್ರಭಾರವರಿಗೆ ಸಮರ್ಪಿಸುವ ಅವರ ಆಲೋಚನೆಯನ್ನು ನಾನು ಗೌರವಿಸುತ್ತೇನೆ. ರೇಂಜರಿಂಗ್ ಶತಮಾನೋತ್ಸವ ಆಚರಣೆಯ ಈ ಸಂದರ್ಭದಲ್ಲಿಯೇ ಈ ಪುಸ್ತಕವನ್ನು ಹೊರತರುತ್ತಿರುವುದು ಸಂದರ್ಭೋಚಿತ ಮತ್ತು ಅರ್ಥಪೂರ್ಣವಾಗಿದೆ.

ಈ ಕೃತಿ ನಮ್ಮ ಎಲ್ಲಾ ಹೆಣ್ಣು ಮಕ್ಕಳಿಗೆ, ಮಹಿಳಾ ನಾಯಕಿಯರುಗಳಿಗೆ, ಮಹಿಳಾ ಶಿಕ್ಷಕರುಗಳಿಗೆ (ದಳ ನಾಯಕಿಯರುಗಳಿಗೆ), ಉಪಯೋಗವಾಗುವುದರಲ್ಲಿ ಸಂಶಯವಿಲ್ಲ. ಅವರ ಈ ಪ್ರಯತ್ನಕ್ಕೆ ಯಶಸ್ಸನ್ನು, ಶುಭವನ್ನು ಹಾರೈಸುತ್ತೇನೆ.

ಕರ್ನಾಟಕಕ್ಕೆ ಲಭಿಸಿರುವ ರೇಂಜರ್ಸ್ ಶತಮಾನೋತ್ಸವ ಆಚರಣೆಗೆ ಸಂಬಂಧಪಟ್ಟಂತೆ, ಶ್ರೀಮತಿ ಗೀತಾ ನಟರಾಜ್‌ರವರ, ರಾಜ್ಯ ಆಯುಕ್ತರು(ಗೈಡ್ಸ್) ನೇತೃತ್ವದಲ್ಲಿ ಶ್ಲಾಘನೀಯ ಕಾರ್ಯಕ್ರಮಗಳಾಗುತ್ತಿವೆ. "ಪ್ರೇರಣ" ಪುಸ್ತಕದ ಬಿಡುಗಡೆಯಲ್ಲೂ

ಶ್ರೀಮತಿ ಗೀತಾ ನಟರಾಜ್‌ರವರು ವಹಿಸಿರುವ ಆಸಕ್ತಿ ಮತ್ತು ಕಳಕಳಿ ಸ್ಮರಣೀಯವಾಗಿದೆ. ಈ ಮಹತ್ ಕಾರ್ಯಕ್ಕೆ ಪ್ರೋತ್ಸಾಹ ನೀಡಿರುವ ಶ್ರೀಮತಿ ಗೀತಾ ನಟರಾಜ್, ರಾಜ್ಯ ಆಯುಕ್ತರು (ಗೈಡ್ಸ್) ಅವರನ್ನೊಳಗೊಂಡಂತೆ, ಎಲ್ಲಾ ಮಹಿಳಾ ನಾಯಕಿಯರಿಗೆ, ಕೃತಿಗೆ ಬೇಕಾದ ಮಾಹಿತಿಗಳನ್ನು, ಸಹಕಾರವನ್ನು ನೀಡಿರುವ ಸಂಸ್ಥೆಯ ಎಲ್ಲಾ ಸಿಬ್ಬಂದಿಗಳಿಗೆ ಅಭಿನಂದನೆಗಳು.

ಬೆಂಗಳೂರು – 560 002
ದಿನಾಂಕ : 23.12.2020

(ಪಿ.ಜಿ.ಆರ್. ಸಿಂಧ್ಯ)
ಪ್ರಧಾನ ಕಾರ್ಯದರ್ಶಿ ಅಧ್ಯಕ್ಷರ ಪರಿಷತ್
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ರಾಷ್ಟ್ರೀಯ ಸಂಸ್ಥೆ, ನವದೆಹಲಿ
ರಾಜ್ಯ ಮುಖ್ಯ ಆಯುಕ್ತರು, ಕರ್ನಾಟಕ



ಅಧ್ಯಕ್ಷರ ನುಡಿ

ಒಂದು ಯಹೂದಿ ಗಾದೆ ಇದೆ. "ದೇವರು ಹೆಣ್ಣನ್ನು ತಲೆಯ ಭಾಗದಿಂದ ಸೃಷ್ಟಿಸಲಿಲ್ಲ. ಏಕೆಂದರೆ, ಆಕೆ ಪುರುಷನನ್ನು ಆಳದಿರಲಿ ಎಂದು. ಕಾಲಿನ ಭಾಗದಿಂದಲೂ ಸೃಷ್ಟಿಸಲಿಲ್ಲ. ಏಕೆಂದರೆ, ಆಕೆ ಅವನ ಆಳಾಗದಿರಲೆಂದು. ಅವಳನ್ನು ಆತನ ಪಕ್ಕದಿಂದ ಸೃಷ್ಟಿಸಿದ. ಏಕೆಂದರೆ, ಅವರಿಬ್ಬರ ಹೃದಯಗಳೂ ಜೊತೆ ಜೊತೆಯಲ್ಲೇ ಇರಬೇಕೆಂದು".

ಈ ಮಾತಿನಂತೆ ಸ್ತ್ರೀ-ಪುರುಷರಲ್ಲಿ ಯಾರೂ ಮೇಲಲ್ಲ; ಯಾರೂ ಕೀಳಲ್ಲ. ಇಬ್ಬರೂ ಸರಿಸಮಾನರು. ಆದರೆ ಜೈವಿಕ ಕಾರಣದಿಂದಾಗಿ ಕಾಲಾನುಕ್ರಮದಲ್ಲಿ ಮಾನವ ಸಮಾಜ ಪುರುಷ ಪ್ರಧಾನವಾಯಿತು. ಆದರೆ ಮಾನವ ಪ್ರಜ್ಞೆ ವಿಕಾಸವಾದಂತೆಲ್ಲ ಈ ಹೆಚ್ಚು ಕಡಿಮೆಗಳು ಹುಚ್ಚು ಕಲ್ಪನೆಗಳೆಂದು ಅರ್ಥವಾಯಿತು.

ಹನ್ನೆರಡನೆಯ ಶತಮಾನದ ವೈಚಾರಿಕ ಚಿಂತಕ ಜೇಡರ ದಾಸಿಮಯ್ಯ ಹೇಳಿರುವ ಒಂದು ವಚನವಿದೆ : "ಮೊಲೆ ಮುಡಿ ಬಂದಡೆ ಹೆಣ್ಣೆಂಬರು, ಗಡ್ಡಮೀಸೆ ಬಂದಡೆ ಗಂಡೆಂಬರು. ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ ಕಾಣಾ ರಾಮನಾಥ". ನಿಜ. ಹೆಣ್ಣು-ಗಂಡುಗಳನ್ನು ಹೊರಗಿನ ಆಕಾರದಿಂದ ಗುರುತಿಸುವುದಲ್ಲ. ಅವರ ಅಂತಃಸತ್ವ ಮತ್ತು ಸಾಮರ್ಥ್ಯಗಳಿಂದ ಗುರುತಿಸಬೇಕು.

ಹಾಗೆ, ಸ್ತ್ರೀ ಪ್ರತಿಭೆ, ಸ್ತ್ರೀ ಶಕ್ತಿ, ಸ್ತ್ರೀ ಸಾಹಸಗಳನ್ನು ಅರ್ಥಮಾಡಿಕೊಂಡು, ಆದರ್ಶ ಪಥದಲ್ಲಿ ಮುನ್ನಡೆಯಲು ಸ್ತ್ರೀ ಸಮುದಾಯದಲ್ಲಿ ಪ್ರಜ್ಞಾ ಜಾಗೃತಿ ಮೂಡಿಸುವ ಒಂದು ಪ್ರಾಮಾಣಿಕ ಆಶಯದ ಕೃತಿ ಈ 'ಪ್ರೇರಣಾ'. ಈ ಕೃತಿಯನ್ನು ಸ್ಕೌಟ್ಸ್-ಗೈಡ್ಸ್ ಚಳವಳಿಯ ರೇಂಜರುಗಳಿಗಾಗಿ ರಚಿಸಲಾಗಿದ್ದರೂ ಸಾರ್ವತ್ರಿಕವಾಗಿ ಎಲ್ಲ ಸ್ತ್ರೀಯರೂ, ವಿಶೇಷವಾಗಿ ಯುವತಿಯರು ಓದಬೇಕಾದ ಉಪಯುಕ್ತ ಕೃತಿ.

ಈ ಕೃತಿ ಗರ್ಲ್ ಗೈಡ್‌ಗಳ ಮಾರ್ಗದರ್ಶಕರಾಗಿರುವ ರೇಂಜರುಗಳಿಗಾಗಿ ರೂಪಿಸಲಾಗಿರುವ ಮಾರ್ಗದರ್ಶಿ. ಇದನ್ನು ರಚಿಸಿರುವ ಸೋದರಿ ಕಮಲಾಕ್ಷಿ ಹೆಗಡೆ ಅವರು ಸ್ವತ: ಸೃಜನಶೀಲ ಬರಹಗಾರರಾಗಿ, ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಉಗಮ, ಧ್ಯೇಯೋದ್ದೇಶ, ನೀತಿ-ನಿಯಮ, ರೇಂಜರಿಂಗ್ ಇತಿಹಾಸ, 'ಪ್ರೇರಣಾ'ದ ಪರಿಕಲ್ಪನೆ, ಅರ್ಥ-ಆಶಯ, ನಿರ್ವಹಣಾ ಸ್ವರೂಪ, ಮಾರ್ಗಸೂಚಿ ಶಿಬಿರ ಇತ್ಯಾದಿ ಅಗತ್ಯ ಮಾಹಿತಿ ಎಲ್ಲವನ್ನು ಸಂಕ್ಷಿಪ್ತವಾದರೂ ಸುಸ್ಪಷ್ಟವಾಗಿ ನೀಡಿದ್ದಾರೆ. ಅಂತ್ಯದಲ್ಲಿ ಕಾರ್ಯಸೂಚಿಯನ್ನು ಕೊಟ್ಟಿದ್ದಾರೆ.

ಈ 'ಪ್ರೇರಣಾ'ದ ಒಂದು ಗಮನಾರ್ಹ ಅಂಶವೆಂದರೆ, ಸ್ತ್ರೀಯರ ವಯಸ್ಸು-ಮನಸ್ಸು, ಚಿಂತನ-ಮಂಥನ, ಜ್ಞಾನ-ವಿಜ್ಞಾನ, ಉದ್ಯಮ-ಉದ್ಯೋಗ, ವೃತ್ತಿ-ಪ್ರವೃತ್ತಿ, ಗೃಹಧರ್ಮ-ತಾಯ್ತನ ಇತ್ಯಾದಿ ಉಪಶೀರ್ಷಿಕೆಗಳಲ್ಲಿ ಉಚಿತವಾದ ಚಿಂತನೆ ನಡೆಸಿರುವುದರ ಜೊತೆಗೆ ಸಂದರ್ಭೋಚಿತವಾಗಿ ಉಲ್ಲೇಖಿಸಲಾಗಿರುವ ಗಟ್ಟಿ ಮನಸ್ಸಿನ ದಿಟ್ಟ ಹೆಜ್ಜೆಯಿಟ್ಟ ಕೆಲವು ಸ್ತ್ರೀ ಸಾಧಕಿಯರ ಸತ್ಯ ನಿದರ್ಶನಗಳು. ಈ ಸಾಧಕಿಯರೆಲ್ಲ ತಮ್ಮಲ್ಲಿರುವ ಅಂತಃಸತ್ವವನ್ನು ಅರ್ಥ ಮಾಡಿಕೊಂಡು ಅದನ್ನು ತಮ್ಮ ಬದುಕಿನ ಯಶಸ್ಸಿಗೆ ಬಳಸಿಕೊಂಡು ಇಡೀ ಸ್ತ್ರೀ ಸಮುದಾಯಕ್ಕೆ ಮಾದರಿಯಾಗಿರುವವರು. ಅವರ ಆದರ್ಶ ಮತ್ತು ಆತ್ಮ ವಿಶ್ವಾಸದ ಬದುಕನ್ನು ಮೇಲ್ಪಂಕ್ತಿಯಾಗಿಟ್ಟುಕೊಂಡು "ಪ್ರೇರಣಾ"ದ ಪ್ರಯೋಜನವನ್ನು ಪಡೆದುಕೊಳ್ಳಬೇಕೆಂಬುದೇ ಸೋದರಿ ಕಮಲಾಕ್ಷಿ ಹೆಗಡೆ ಅವರ ಆಶಯ. ಇಂತಹ ಸದಾಶಯದ ಕೃತಿಯನ್ನು ರಚಿಸಿಕೊಟ್ಟಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು 'ಪ್ರೇರಣಾ' ಯೋಜನೆಗೆ ಪೂರಕವಾದ ಈ ಕೃತಿಯನ್ನು ಪ್ರಕಟಿಸಲು ಹರ್ಷಿಸುತ್ತದೆ. ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯಲ್ಲಿ ಇಡೀ ರಾಷ್ಟ್ರದ ಗಮನ ಸೆಳೆಯುವಂತಹ ಚಾಲನೆ ನೀಡಿರುವ ನಮ್ಮ ಕರ್ನಾಟಕ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಚಳವಳಿಯ ಸತ್ವಪೂರ್ಣ ಬೆಳವಣಿಗೆಗೆ ಅಗತ್ಯವಾದ ಶೈಕ್ಷಣಿಕ ಮಹತ್ವದ ಸಾಹಿತ್ಯ ಪ್ರಕಟಣೆಯ ಬಗೆಗೆ ವಹಿಸಿರುವ ಆಸಕ್ತಿ, ನೀಡುತ್ತಿರುವ ಉತ್ತೇಜನ ನಿಜಕ್ಕೂ ಸ್ತುತ್ಯವಾದುದು. ಅವರ ಅಪೇಕ್ಷೆಯ ಬಳ್ಳಿಯಲ್ಲಿ ಬಿಟ್ಟ ಒಂದು ಹೂವು ಈ 'ಪ್ರೇರಣಾ'.

ಓರ್ವ ಹೆಣ್ಣು ಹೇಳುತ್ತಾಳೆ: "ಹುಟ್ಟುವಾಗ ನಾನು ಅತ್ತೆ. ಆಗ ಅತ್ತ ಕಾರಣ ನನಗೆ ಗೊತ್ತಿರಲಿಲ್ಲ. ಆದರೆ ಈಗ ಕ್ಷಣಕ್ಷಣಕ್ಕೂ ಅದು ಗೊತ್ತಾಗುತ್ತಿದೆ". ಈ ಮಾತಿನ ಅರ್ಥ ಮಹಿಳೆಯ ಇಡೀ ಜೀವನಕ್ಕೆ ಕನ್ನಡಿ ಹಿಡಿಯುತ್ತದೆ. ಆಕೆಯ ಅಳುವಿಗೆ ಕಾರಣ ಹೊರಗಿನ ಶಕ್ತಿ-ಸನ್ನಿವೇಶಗಳಿರಬಹುದು. ಆದರೆ ಆಕೆಯ ಅಜ್ಞಾನ ಮತ್ತು ಕೀಳರಿಮೆಗಳೂ ಕಾರಣವಾಗಬಹುದು. ಈ ದೌರ್ಬಲ್ಯವನ್ನು ದಾಟಿ ಬದುಕಿನ ಸವಾಲುಗಳನ್ನು ಎದುರಿಸುವ ಆತ್ಮಸ್ಥೈರ್ಯವನ್ನು ಪ್ರತಿಯೊಬ್ಬ ಸ್ತ್ರೀಯೂ ಬೆಳೆಸಿಕೊಳ್ಳಬೇಕು ಎನ್ನುವುದೇ ಈ 'ಪ್ರೇರಣಾ'ದ ಒಟ್ಟು ಆಶಯ.

ಸರಳ ಸಂವಹನ ಶೈಲಿಯಲ್ಲಿ ನಿರೂಪಣೆಗೊಂಡಿರುವ ಈ ಕೃತಿಯನ್ನು ನಮ್ಮ ಎಲ್ಲ ರೇಂಜರ್ ಸೋದರಿಯರು ಆಸಕ್ತಿಯಿಂದ ಓದಿ ನಾಡಿನ ಸ್ತ್ರೀ ಸಮುದಾಯದ ಪ್ರಜ್ಞಾಜಾಗೃತಿಯ ಸೇವೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ತೊಡಗುವಂತಾಗಲಿ ಎಂದು ಆಶಿಸುತ್ತೇನೆ.

ಡಾ॥ ಗೊ.ರು. ಚನ್ನಬಸಪ್ಪ
ಅಧ್ಯಕ್ಷರು
ಪ್ರಕಟಣಾ ಸಮಿತಿ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಬೆಂಗಳೂರು – 560 002
ದಿನಾಂಕ: 12.12.2020

ಸೋದರಿ ಎಸ್.ಕೆ. ಪ್ರಭಾ



ಶ್ರೀಮತಿ ಎಸ್.ಕೆ. ಪ್ರಭಾರವರು ಮೂಲತಃ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಯವರಾಗಿದ್ದು ತಮ್ಮ ವಿದ್ಯಾಭ್ಯಾಸವನ್ನು ಅಲ್ಲಿಯೇ ಮುಗಿಸಿದರು. 1972ರಲ್ಲಿ ಸರ್ಕಾರಿ ಪ್ರೌಢಶಾಲೆ, ಭದ್ರಾವತಿಯಲ್ಲಿ ರಸಾಯನ ಶಾಸ್ತ್ರದ ಶಿಕ್ಷಕಿಯಾಗಿ ಜೊತೆಗೆ ಗೈಡ್ ದಳನಾಯಕಿಯಾಗಿಯೂ ತಮ್ಮ ವೃತ್ತಿಯ ಜೊತೆಗೆ ಸೇವಾ ಕೆಲಸದಲ್ಲಿ ಭಾಗಿಯಾದರು. ಸರ್ಕಾರಿ ಶಾಲೆಗಳ ವಿಷಯ ಪರಿವೀಕ್ಷಕರಾಗಿ **(Inspector)** ನೇಮಕಗೊಂಡು ಒಬ್ಬರೇ ಹಳ್ಳಿಗಳಿಗೆ ಭೇಟಿ ನೀಡುತ್ತಾ, ಹೆಚ್ಚಿನ ಸಾರಿಗೆ ಸಂಪರ್ಕವಿಲ್ಲದ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕು ಮುಳುಗಡೆ ಪ್ರದೇಶಗಳ ಸರ್ಕಾರಿ ಶಾಲೆಗಳಿಗೆ ಭೇಟಿ ನೀಡುತ್ತಾ, ಹಗಲು-ರಾತ್ರಿ ಶ್ರಮದಿಂದ ದುಡಿದವರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ಹಿರಿಯ ಉಪನ್ಯಾಸಕಿಯಾಗಿ, ರಾಜ್ಯ ಶಿಕ್ಷಣ ಸಂಶೋಧನೆ ಹಾಗೂ ತರಬೇತಿ ಇಲಾಖೆಯಲ್ಲಿ, "ಪಠ್ಯಪುಸ್ತಕ ವಿಭಾಗದಲ್ಲಿ" ಕಾರ್ಯ ನಿರ್ವಹಿಸಿದವರು.

ಸ್ಕೌಟಿಂಗ್-ಗೈಡಿಂಗ್‌ನ ಅತ್ಯಂತ ಉನ್ನತ ಪದವಿಯಾದ ಲೀಡರ್ ಟ್ರೈನರ್ (ಗೈಡ್ಸ್) ಪುರಸ್ಕೃತರಾಗಿ, ನಾಯಕಿಯರ ತರಬೇತುದಾರರಾಗಿದ್ದು, ಉತ್ತಮ ಹೆಸರನ್ನು ಗಳಿಸಿದವರು. ಅನೇಕ ಕಾರ್ಯಕ್ರಮಗಳಲ್ಲಿ, ಚಟುವಟಿಕೆಗಳಲ್ಲಿ, ಶಿಬಿರ, ಜಾಂಬೂರಿ- ಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಹೊಸ ಹೊಸ ಯೋಜನೆಗಳಿಗೆ ನಾಂದಿ ಹಾಡಿದವರು. ಅನೇಕ ತರಬೇತಿ ಶಿಬಿರಗಳನ್ನು ಕುರಿತು ಪುಸ್ತಕಗಳನ್ನು ಕನ್ನಡದಲ್ಲಿ ಬರೆದಿದ್ದಾರೆ. ಇವರನ್ನು "ಸ್ಕೌಟಿಂಗ್-ಗೈಡಿಂಗ್‌ನ ನಡೆದಾಡುವ ವಿಶ್ವಕೋಶ" ಎಂದರೆ ಅತಿಶಯೋಕ್ತಿಯಾಗಲಾರದು.

ಇವರ 51 ವರ್ಷಗಳ ಸಾರ್ಥಕ ಗೈಡಿಂಗ್ ಸೇವೆಗಾಗಿ ರಾಷ್ಟ್ರಸಂಸ್ಥೆಯವರು ಅವರನ್ನು ಗುರುತಿಸಿ ಅವರಿಗೆ "ಸಿಲ್ವರ್ ಸ್ಟಾರ್" ಮತ್ತು 'ಬಾರ್ ಟು ಸಿಲ್ವರ್ ಸ್ಟಾರ್' ಗೌರವಾನ್ವಿತ ಪ್ರಶಸ್ತಿಗಳನ್ನು ರಾಷ್ಟ್ರಪತಿಗಳಾದ ಗೌರವಾನ್ವಿತ ಶ್ರೀಮತಿ ಪ್ರತಿಭಾ ಪಾಟೀಲ್ ಮತ್ತು ರಾಷ್ಟ್ರಪತಿಗಳಾದ ಗೌರವಾನ್ವಿತ ಶ್ರೀ ಪ್ರಣಬ್ ಮುಖರ್ಜಿ ಅವರುಗಳಿಂದ 2011 ಹಾಗೂ 2016ರಲ್ಲಿ ಸ್ವೀಕರಿಸಿರುತ್ತಾರೆ. ಅಲ್ಲದೆ **Asia pacific Adult Leaders Achievement** ಪ್ರಶಸ್ತಿಗೆ ಪುರಸ್ಕೃತರಾಗಿದ್ದಾರೆ.

ಎಸ್.ಕೆ. ಪ್ರಭಾರವರ ಕಲ್ಪನೆಯ ಕೂಸೇ 'ಪ್ರೇರಣಾ' ಕಾರ್ಯಕ್ರಮ, ಪ್ರಪ್ರಥಮ ಬಾರಿಗೆ ರೇಂಜರ್ಸ್‌ಗಳಿಗಾಗಿ ಅತೀ ಕಾಳಜಿಯಿಂದ, ಮೌಲ್ಯಭರಿತ, ಪ್ರಸ್ತುತ ನಮ್ಮ ಸಮಾಜದ

ಯುವತಿಯರ ಸಬಲೀಕರಣಕ್ಕಾಗಿ 'ಪ್ರೇರಣಾ ಕಾರ್ಯಕ್ರಮ'ವನ್ನು ವಿಭಿನ್ನ ರೀತಿಯಲ್ಲಿ ರಾಜ್ಯಾದ್ಯಂತ ವಿಸ್ತರಿಸುವಲ್ಲಿ ಪ್ರಮುಖ ಪಾತ್ರಧಾರಿಯಾಗಿದ್ದರು, ಸ್ವತಃ ಮಾರ್ಗದರ್ಶಕರಾಗಿದ್ದರು. ಮುಂದಾಲೋಚನೆ, ಮುಂಜಾಗ್ರತೆ, ಮುನ್ನಡೆಯ ಜಾಗೃತಿ ಚಿಂತನೆ, ಮುನ್ನೆಚ್ಚರದ ಭಾವನೆಗಳು ಅವರ ಚಿಂತನೆಯ ಹೆಜ್ಜೆಗಳಾಗಿದ್ದವು. ಈ ನಿಟ್ಟಿನಲ್ಲಿ 'ಪ್ರೇರಣಾ'ಕ್ಕೆ ಹೊಸ ಆಯಾಮವನ್ನು ನೀಡಿ ಅದರ ಪ್ರಚಾರಕ್ಕೂ ಶ್ರಮಿಸಿದರು. ಸ್ತ್ರೀಯರ ಏಳ್ಗೆಯ ದೂರದರ್ಶಿತ್ವವನ್ನು ಹೊಂದಿದ್ದು ಪ್ರೇರಣಾದ ಯಶಸ್ಸನ್ನು ಕಂಡು ಅದನ್ನು ಮುಂದುವರೆಸುವ ಅಭಿಲಾಷೆಯನ್ನು ಹೊಂದಿದ್ದರು. ಅವರು ರಾಜ್ಯ ಸಂಸ್ಥೆಯ ಜಂಟಿ ರಾಜ್ಯ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿಯೇ ಮೇ 30, 2017ರಂದು ತಮ್ಮ ಅಲ್ಪ ಸಮಯದ ದೈಹಿಕ ಅನಾರೋಗ್ಯದಿಂದಾಗಿ ಬೆಂಗಳೂರಿನಲ್ಲಿ ದೈವಾಧೀನರಾಗಿರುವುದು ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ತುಂಬಲಾರದ ನಷ್ಟವಾಗಿದೆ. ಅವರು ಹಚ್ಚಿ ಹೋಗಿರುವ 'ಪ್ರೇರಣಾ' ದೀಪವು ನಮಗೆ ದಾರಿದೀಪವಾಗಲಿ, ನಮ್ಮ ಕಾರ್ಯ ಯೋಜನೆಗಳಿಗೆ ಪ್ರೇರಣೆ ನೀಡುತ್ತಿರಲಿ ಎಂಬ ಆಶಯ ನಮ್ಮದಾಗಿದೆ.

ಪ್ರೇರಣಾ ಕಾರ್ಯಕ್ರಮದ ಕುರಿತು ವಿವರವಾದ ಮಾಹಿತಿಯೊಂದಿಗೆ ಒಂದು ಕೈಪಿಡಿಯನ್ನು ಬರೆಸುವ ಆಶಯವನ್ನು ಶ್ರೀಯುತ ಪಿ.ಜಿ.ಆರ್. ಸಿಂಧ್ಯರವರು ವ್ಯಕ್ತಪಡಿಸಿದರು. ಅವರ ಅಭಿಲಾಷೆಯನ್ನು ಗಮನಿಸಿ, ಒಂದು ಮಾರ್ಗದರ್ಶಿ ಪುಸ್ತಕವಾಗಿ ಬರೆಯುವ ಆಲೋಚನೆಯನ್ನು ಶ್ರೀಮತಿ ಕಮಲಾಕ್ಷಿ ಹೆಗಡೆ, HWB(G),, ADC ಬೆಂಗಳೂರು ಉತ್ತರ ಜಿಲ್ಲೆ, ರಾಜ್ಯ ಪ್ರಕಟನಾ ಸಮಿತಿ ಸದಸ್ಯರು ಅವರಲ್ಲಿ ಕೇಳಿಕೊಂಡಾಗ ಅವರು ಕಳಕಳಿಯಿಂದ ಒಪ್ಪಿಕೊಂಡರು. ಅವರ ಶ್ರಮದಿಂದ ಆಸಕ್ತಿಪೂರ್ಣ ನಿದರ್ಶನಗಳೊಂದಿಗೆ 'ಪ್ರೇರಣಾ' ಕೃತಿ ರೇಂಜರ್‌ಗಳಿಗೆ, ದಳನಾಯಕಿಯರಿಗೆ ಸಾಕಷ್ಟು ಮಾರ್ಗದರ್ಶನ ದೊರೆಯುವುದಾಗಿ ನಾನು ಆಶಿಸುತ್ತೇನೆ. ಶ್ರೀಮತಿ ಕಮಲಾಕ್ಷಿ ಹೆಗಡೆಯವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಬೆಂಗಳೂರು – 560 002
ದಿನಾಂಕ: 23.12.2020

ಶ್ರೀಮತಿ ಗೀತಾ ನಟರಾಜ್
LT(G)
ಉಪಾಧ್ಯಕ್ಷರು
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಷ್ಟ್ರೀಯ ಸಂಸ್ಥೆ, ನವದೆಹಲಿ
ರಾಜ್ಯ ಆಯುಕ್ತರು (ಗೈಡ್ಸ್), ಕರ್ನಾಟಕ

ನಲ್ನುಡಿ

"ಕಲಿಕೆ ನಿರಂತರ ಹುಡುಕಾಟ" "ಇದೊಂದು ಹರಿಯುವ ಹೊನಲು" ಆಯಾ ಪರಿಸರಕ್ಕೆ ಅನುಗುಣವಾಗಿ, ಸನ್ನಿವೇಶಗಳಿಗೆ ಮಾರ್ಪಾಡುಗಳನ್ನು ಕಂಡುಕೊಂಡು ಹೊಸತನದತ್ತ, ಹೊಸ ಜ್ಞಾನಕ್ಷೇತ್ರಗಳತ್ತ ಸುತ್ತಿಸುಳಿದಾಡುವ ಪ್ರಜ್ಞೆಯುಳ್ಳ ಸಾಧಕರು ಹೊಸ ಹುಡುಕಾಟದಲ್ಲಿ ನೂತನ ಮಾರ್ಗಗಳಿಗೆ ಹುಟ್ಟುಹಾಕುತ್ತಾರೆ. ಅಂತಹ ಸೃಜನಶೀಲತೆಯುಳ್ಳ ಗುರುತರವಾದ ಅಸ್ಮಿತೆಯುಳ್ಳ ರಾಜ್ಯ ಸಂಸ್ಥೆಯ ಜಂಟಿ ರಾಜ್ಯ ಕಾರ್ಯದರ್ಶಿಯಾಗಿದ್ದ ದಿ॥ ಶ್ರೀಮತಿ ಎಸ್.ಕೆ. ಪ್ರಭಾರವರ, ರೇಂಜರ್ ವಿಭಾಗದ ಹೊಸ ಸೃಷ್ಟಿಯ ವಿನ್ಯಾಸವೇ 'ಪ್ರೇರಣಾ'.

2015ರಲ್ಲಿ ಪ್ರೇರಣಾ ಕಾರ್ಯಕ್ರಮವನ್ನು ರೇಂಜರ್ಸ್‌ಗಳಿಗಾಗಿ ಪ್ರಪ್ರಥಮವಾಗಿ ಬೆಂಗಳೂರಿನ ರಾಜ್ಯ ಸಂಸ್ಥೆಯಲ್ಲಿ ಏರ್ಪಡಿಸಿದಾಗ ಗೈಡ್ಸ್ ವಿಭಾಗದ ಅನೇಕ ನಾಯಕಿಯರನ್ನು ತೊಡಗಿಸಿಕೊಂಡು, ಕಾರ್ಯಕ್ರಮ ನಡೆಸಲು, ಅದರಲ್ಲಿ ಪಾಲ್ಗೊಳ್ಳಲು ಆಹ್ವಾನಿಸಿದ್ದು ಸಂತಸದ ಸಂಗತಿ. ಆ ಗುಂಪಿನಲ್ಲಿ ನಾನೂ ಸಕ್ರಿಯಳಾಗಿ ಪಾಲ್ಗೊಂಡಿದ್ದುದು ನನ್ನ ಸುದೈವ. ಯಾಕೆಂದರೆ 'ಪ್ರೇರಣಾ' ಎಂದರೆ ಏನು ಎಂಬುದರ ಅರ್ಥ, ಅದರ ವ್ಯಾಪ್ತಿ, ಉದ್ದೇಶ ಹಾಗೂ ಗುರಿಗಳ ಬಗ್ಗೆ ಮಾಹಿತಿ ತಿಳಿಯಲು ನನಗೆ ಅವಕಾಶವಾಯಿತು.

'ಪ್ರೇರಣಾ' ಕೃತಿಯನ್ನು ಬರೆಯಲು ನನಗೆ ಪ್ರೇರಣೆ ನೀಡಿದ ಮೊದಲ ವ್ಯಕ್ತಿ ಶ್ರೀಮತಿ ಗೀತಾನಟರಾಜರವರು. ಅವರು ತುಂಬಾ ಕಳಕಳಿಯಿಂದ, ಪ್ರೋತ್ಸಾಹದ ನುಡಿಗಳಿಂದ, ಮಾಹಿತಿಗಳನ್ನು ಸೂಚಿಸುತ್ತಾ ಅಪಾರ ಸ್ಫೂರ್ತಿ ನೀಡಿದವರೆಂದು ತಿಳಿಸಲು ಹರ್ಷವೆನಿಸುತ್ತದೆ. ಹಾಗೆಯೇ 28.12.2020ರ ರೇಂಜರ್ಸ್ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ 'ಪ್ರೇರಣಾ' ಪುಸ್ತಕವನ್ನು ವಸ್ತುತಃ ಬಿಡುಗಡೆ ಮಾಡಿಸುವುದರಲ್ಲಿ ಯಶಸ್ವಿ ನಾಯಕಿಯಾಗಿದ್ದಾರೆ.

ಈ ಕೃತಿಯಲ್ಲಿ ಪ್ರೇರಣಾ ಕಾರ್ಯಕ್ರಮದ ವಿವರಣೆ, ಅದರ ಮಹತ್ವ, ಉದ್ದೇಶ-ಗುರಿಗಳು, ಶಿಬಿರವಾಸದ ವಿವರಣೆ, ವಿವಿಧ ಯೋಜನೆಗಳ ಮತ್ತು ಕಾರ್ಯಚಟುವಟಿಕೆಗಳ ಅಗತ್ಯತೆ, ಮಹಿಳೆಯರ ಸಬಲೀಕರಣ, ವಿವಿಧ ಕ್ಷೇತ್ರಗಳಲ್ಲಿನ ಸಾಧಕಿಯರ ಸಾಧನೆಗಳ ವಿವರಣೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿದ್ದೇನೆ. ರೇಂಜರ್ಸ್‌ಗಳಿಗೆ ದೈಹಿಕ, ಬೌದ್ಧಿಕ ಮಾನಸಿಕ, ಸಾಮಾಜಿಕ,

ಭಾವನಾತ್ಮಕ, ಸಂಸ್ಕೃತಿ, ಜೀವನ ಶಿಕ್ಷಣ, ಪರಿಸರ ಜಾಗೃತಿ, ನಾಗರಿಕರ ಕರ್ತವ್ಯ, ಕಾನೂನು, ರಾಷ್ಟ್ರಪ್ರೇಮ, ಸಂವಿಧಾನ ಮುಂತಾದ ವಿಷಯಗಳ ಬಗ್ಗೆ ಮಾಹಿತಿ ಪರಿಚಯ ನೀಡಲು ಪ್ರಯತ್ನಿಸಿದ್ದೇನೆ. ಈ ಕಿರುಪ್ರಯತ್ನ ಓದುಗರ ಮನಮುಟ್ಟಲಿ, ಹೃದಯ ತಟ್ಟಲಿ ಎಂಬುದೇ ನನ್ನ ಆಶಯ.

ಈ ಪ್ರೇರಣಾ ಕಿರು ಹೊತ್ತಗೆಯನ್ನು ಓದುಗರ ಮುಂದಿಡಲು ಹೆಮ್ಮೆ ಅನಿಸುತ್ತಿದೆ. ಸೂಕ್ತ ಮಾರ್ಗದರ್ಶನದೊಂದಿಗೆ, ವಿಶೇಷ ನಿದರ್ಶನಗಳ ಮೂಲಕ ಮಾಹಿತಿ ನೀಡುವಂತೆ ಸೂಚನೆ ನೀಡಿರುವ ಮತ್ತು ಸ್ಫೂರ್ತಿದಾಯಕ ಮುನ್ನುಡಿ ಬರೆದಿರುವ ಶ್ರೀ ಪಿ.ಜಿ.ಆರ್. ಸಿಂಧ್ಯರವರು, ರಾಷ್ಟ್ರೀಯ ಅಧ್ಯಕ್ಷರ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳು, ನವದೆಹಲಿ, ಮಾಜಿ ಸಚಿವರು, ರಾಜ್ಯ ಪ್ರಧಾನ ಆಯುಕ್ತರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ; ಈ ಪುಸ್ತಕವನ್ನು ಓದಿ ಆತ್ಮೀಯವಾಗಿ ಸೂಕ್ತ ಸಲಹೆ, ಸೂಚನೆಗಳನ್ನು ನೀಡಿ, ಅಧ್ಯಕ್ಷರ ನುಡಿ ಬರೆದಿರುವ ಡಾ॥ ಗೊ.ರು. ಚನ್ನಬಸಪ್ಪರವರು, ಪ್ರಕಟಣಾ ಸಮಿತಿಯ ಅಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ; ಉತ್ತಮ ಸಲಹೆಗಳನ್ನು ನೀಡಿದ ಶ್ರೀಯುತ ಕೊಂಡಜ್ಜಿ ಬ. ಷಣ್ಮುಖಪ್ಪನವರು, ಉಪಾಧ್ಯಕ್ಷರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ; ಪ್ರೋತ್ಸಾಹದ ನುಡಿಗಳನ್ನಾಡಿದ ಶ್ರೀಯುತ ಎಂ.ಎ. ಖಾಲೀದ್, ರಾಜ್ಯ ಆಯುಕ್ತರು (ಸ್ಕೌಟ್ಸ್); ಈ ಕೃತಿಯ ಕಾರಣಕರ್ತರಾದ ಶ್ರೀಮತಿ ಗೀತಾನಟರಾಜ್‌ರವರು, ಉಪಾಧ್ಯಕ್ಷರು, ರಾಷ್ಟ್ರೀಯ ಸಂಸ್ಥೆ, ನವದೆಹಲಿ. ರಾಜ್ಯ ಆಯುಕ್ತರು (ಗೈಡ್ಸ್), ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ; ಶ್ರೀ ಕೆ. ಗಂಗಪ್ಪಗೌಡರು, ರಾಜ್ಯ ಕಾರ್ಯದರ್ಶಿಗಳು; ಬರೆಯುವ ಕ್ರಮದ ಬಗ್ಗೆ ಮಾಹಿತಿ ನೀಡಿದ ಶ್ರೀಯುತ ಎನ್. ಶ್ರೀನಿವಾಸನ್, ಸ್ಕೌಟ್ಸ್-ಗೈಡ್ಸ್ ಮಾಸ ಪತ್ರಿಕೆಯ ಸಹಸಂಪಾದಕರು, ರಾಜ್ಯ ಸ್ಥಾನಿಕ ಆಯುಕ್ತರು; ಶ್ರೀ ಬಿ. ಬಸವರಾಜರವರು, ಜಂಟಿ ರಾಜ್ಯ ಕಾರ್ಯದರ್ಶಿಗಳು, (ಸ್ಕೌಟ್ಸ್); ರೇಂಜರ್ಸ್ ಪಠ್ಯಾಂಶ ತಿಳಿಸಿದ ಶ್ರೀಮತಿ ಬಿ.ವಿ. ರಾಮಲತಾರವರು, ಜಂಟಿ ರಾಜ್ಯ ಕಾರ್ಯದರ್ಶಿಗಳು(ಗೈಡ್ಸ್); ಶ್ರೀಮತಿ ಸಿ. ಮಂಜುಳಾ, ರಾಜ್ಯ ಸಂಘಟನಾ ಆಯುಕ್ತರು (ಗೈಡ್ಸ್), ಶ್ರೀಮತಿ ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈಡ್ಸ್) ಹಾಗೂ ಪರೋಕ್ಷವಾಗಿ ಪ್ರೋತ್ಸಾಹ ನೀಡಿದ ಎಲ್ಲಾ ಸೋದರ ಸೋದರಿಯರಿಗೂ, ಆತ್ಮೀಯರಿಗೂ ನನ್ನ ಹೃದಯಪೂರ್ವಕ ಕೃತಜ್ಞತೆಗಳು.

ಈ ಪುಸ್ತಕದ ಮುಖಪುಟ ವಿನ್ಯಾಸಕರಾದ ಶ್ರೀ ಸುನೀಲ್‌ಕುಮಾರ್ ಜಿ. ರವರಿಗೂ, ಅಕ್ಷರ ಜೋಡಣೆ ಮಾಡಿದ ದಿವ್ಯಾ ಪ್ರಿಂಟ್ರಾನಿಕ್ಸ್‌ನ ಗೌತಮಿ ಆರ್. ಕೃಷ್ಣರವರಿಗೂ, ಪುಸ್ತಕದ ಪುಟವಿನ್ಯಾಸವನ್ನು ಮಾಡಿ ಸಮಯಕ್ಕೆ ಸರಿಯಾಗಿ ಒದಗಿಸಿ ಕೊಟ್ಟ ಶ್ರೀ ಕೆ.ವಿ. ರಾಘವೇಂದ್ರಕುಮಾರ್ ಅವರಿಗೂ ವಂದನೆಗಳು. ಸುಂದರವಾಗಿ ಈ ಪುಸ್ತಕವನ್ನು ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್‌ನ ಮಾಲೀಕರಾದ ಎಲ್. ಲಿಂಗಪ್ಪನವರಿಗೂ ಹಾಗೂ ಪ್ರೆಸ್‌ನ ಎಲ್ಲಾ ಸಿಬ್ಬಂದಿ ವರ್ಗದವರಿಗೂ ಧನ್ಯವಾದಗಳು.

ಬೆಂಗಳೂರು – 560 002
ದಿನಾಂಕ: 24.12.2020

ಶ್ರೀಮತಿ ಕಮಲಾಕ್ಷಿ ಹೆಗಡೆ
ಲೇಖಕರು

ಪರಿವಿಡಿ

ಅರ್ಪಣೆ 3

ಮುನ್ನುಡಿ 5

ಅಧ್ಯಕ್ಷರ ನುಡಿ 7

ಸೋದರಿ ಎಸ್.ಕೆ. ಪ್ರಭಾ 9

ನಲ್ನುಡಿ 11

1. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಗುರಿ, ನೀತಿ, ನಿಯಮ ಮತ್ತು ಸಂಘಟನೆ 17

2. ರೇಂಜರಿಂಗ್ ಅರ್ಥ 19

3. ರೇಂಜರಿಂಗ್ ಇತಿಹಾಸ 20

4. ಪ್ರೇರಣಾ ಎಂದರೇನು? 22

5. ಪ್ರೇರಣಾ ಯಾರಿಗೆ? 24

6. ಪ್ರೇರಣಾದ ಉದ್ದೇಶ ಮತ್ತು ಗುರಿ 26

7. ಕರ್ನಾಟಕದಲ್ಲಿ ಪ್ರೇರಣಾ ಆರಂಭ 28

8. ಪ್ರೇರಣಾದ ಮಹತ್ವದ ಹೆಜ್ಜೆಗಳು 31

   i) ವಯಸ್ಸು–ಮನಸ್ಸು

   ii) ಚಿಂತನ–ಮಂಥನ

   iii) ಜ್ಞಾನ–ವಿಜ್ಞಾನ–ತಂತ್ರಜ್ಞಾನ

   iv) ಆರೋಗ್ಯ–ಆನಂದ

   v) ಸಬಲತೆ–ಸ್ವ ಅರಿವು

vi) ಸಮಾಜ ಸೇವೆ–ಸಾಧನೆ

vii) ವೃತ್ತಿ–ಪ್ರವೃತ್ತಿ–ಆತ್ಮತೃಪ್ತಿ

viii) ಹಸಿರು–ಉಸಿರು–ಚಿಗುರು

ix) ಉದ್ಯಮ–ಉದ್ಯಮಿ

x) ಸಾಮಾಜಿಕ–ಭಾವನಾತ್ಮಕ ಸಂಬಂಧ

xi) ಗೃಹಿಣಿ–ತಾಯ್ತನ

xii) ತ್ಯಾಗಮಯಿ

xiii) ಭಾರತೀಯ ಸಂಸ್ಕೃತಿ–ಸ್ತ್ರೀ

xiv) ಸಭ್ಯ ನಾಗರಿಕ

xv) ಭಾರತದ ಸಂವಿಧಾನ, ಕಾನೂನುಗಳು ಮತ್ತು ಮೂಲಭೂತ ಹಕ್ಕುಗಳು

xvi) ರಾಷ್ಟ್ರಭಕ್ತಿ

9. ಪ್ರೇರಣಾ ಕಾರ್ಯಕ್ರಮಕ್ಕೆ ಮಾರ್ಗಸೂಚಿ 71

10. ಮೂರು ದಿನಗಳ ಪ್ರೇರಣಾ ಕಾರ್ಯಕ್ರಮಗಳು 75

11. ರೇಂಜರ್‌ಗಳ – ಅನಿಸಿಕೆಗಳು 78

ಗ್ರಂಥಋಣ 80

12. ಅನಿಸಿಕೆಗ 82

1. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಗುರಿ, ನೀತಿ, ನಿಯಮ ಮತ್ತು ಸಂಘಟನೆ

1907ರಲ್ಲಿ ಇಂಗ್ಲೆಂಡಿನ ಲಾರ್ಡ್ ಬೇಡನ್ ಪೊವೆಲ್‌ರವರು ಯುವ ಜನತೆಗಾಗಿ ಆರಂಭಿಸಿದ ಸ್ಕೌಟ್ಸ್ ಮತ್ತು ಗೈಡ್ಸ್ ಗುರಿ, ನೀತಿ, ನಿಯಮ, ಸಂಘಟನೆಗಳನ್ನೊಳಗೊಂಡ ಅಪೂರ್ವ ಚಳವಳಿ. ಈ ಚಳವಳಿಯು ಯುವಕ/ಯುವತಿಯರು ದೈಹಿಕವಾಗಿ, ಬೌದ್ಧಿಕವಾಗಿ, ಸಾಮಾಜಿಕವಾಗಿ, ಆಧ್ಯಾತ್ಮಿಕವಾಗಿ ಹಾಗೂ ಭಾವನಾತ್ಮಕವಾಗಿ ಸಚ್ಚಾರಿತ್ರದೊಂದಿಗೆ ಪೂರ್ಣವಿಕಾಸವನ್ನು ಹೊಂದಲು ಸಹಕಾರಿಯಾಗುವ ಮಹೋದ್ದೇಶವನ್ನು ಹೊಂದಿದೆ. ಪ್ರಾದೇಶಿಕ, ರಾಜ್ಯ, ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯವಾಗಿ ಜವಾಬ್ದಾರಿಯುತವಾಗಿ ಬಾಳ್ವೆ ನಡೆಸಲು ಸಹಕಾರಿಯಾಗಿದೆ. ಸರ್ವರಿಗೂ ಒಳ್ಳೆಯತನ ಬಯಸುವ ಮೂಲೋದ್ದೇಶವನ್ನು ಹೊಂದಿದೆ.

ಸ್ಕೌಟ್-ಗೈಡ್ ಪ್ರತಿಜ್ಞೆ :

"ನಾನು ನನ್ನ ಕೈಲಾದ ಮಟ್ಟಿಗೆ,
ದೇವರಿಗೆ ಮತ್ತು ನನ್ನ ದೇಶಕ್ಕೆ ನನ್ನ ಕರ್ತವ್ಯವನ್ನು ಮಾಡುತ್ತೇನೆ;
ಇತರರಿಗೆ ಸಹಾಯ ಮಾಡುತ್ತೇನೆ; ಮತ್ತು
ಸ್ಕೌಟ್/ಗೈಡ್ ನಿಯಮದಂತೆ ನಡೆಯುತ್ತೇನೆ"

– ಎಂದು ನನ್ನ ಗೌರವ ಸಾಕ್ಷಿಯಾಗಿ ಪ್ರತಿಜ್ಞೆ ಮಾಡುತ್ತೇನೆ.

ನಿಯಮ :

ಒಂಬತ್ತು ಅಂಶಗಳನ್ನೊಳಗೊಂಡ ಒಂದು ನಿಯಮ

1. ಸ್ಕೌಟ್/ಗೈಡ್ ವಿಶ್ವಾಸಾರ್ಹನು/ಳು
2. ಸ್ಕೌಟ್/ಗೈಡ್ ನಿಷ್ಠಾವಂತನು/ಳು

3. ಸ್ಕೌಟ್/ಗೈಡ್ ಎಲ್ಲರಿಗೂ ಸ್ನೇಹಿತನು/ಳು ಮತ್ತು ಇತರ ಸ್ಕೌಟ್/ಗೈಡ್‌ಗಳಿಗೆ ಸಹೋದರ/ರಿಯು.

4. ಸ್ಕೌಟ್/ಗೈಡ್ ವಿನಯಿ

5. ಸ್ಕೌಟ್/ಗೈಡ್ ಪ್ರಾಣಿಮಿತ್ರನು/ಳು ಮತ್ತು ಪ್ರಕೃತಿ ಪ್ರೇಮಿ

6. ಸ್ಕೌಟ್/ಗೈಡ್ ಶಿಸ್ತುಳ್ಳವನು/ಳು ಮತ್ತು ಸಾರ್ವಜನಿಕ ಆಸ್ತಿಯನ್ನು ರಕ್ಷಿಸಲು ನೆರವಾಗುವನು/ಳು

7. ಸ್ಕೌಟ್/ಗೈಡ್ ಧೈರ್ಯಶಾಲಿ

8. ಸ್ಕೌಟ್/ಗೈಡ್ ಮಿತವ್ಯಯಿ

9. ಸ್ಕೌಟ್/ಗೈಡ್ ಕಾಯಾ, ವಾಚಾ, ಮನಸಾ ಪರಿಶುದ್ಧನು/ಳು.

ರೇಂಜರಳ ವಿಶೇಷ ಜವಾಬ್ದಾರಿ :

ರೇಂಜರಳಾಗಿ ಈ ಪ್ರತಿಜ್ಞೆಯ ಅರಿವನ್ನು ವಿಶಾಲ ಜಗತ್ತಿಗೆ ಮೂಡಿಸಿ ಸೇವೆಯನ್ನು ಮಾಡುವುದು ರೇಂಜರಳ ವಿಶೇಷ ಜವಾಬ್ದಾರಿಯಾಗಿದೆ.

ಇಂತಹ ಮೌಲ್ಯಗಳನ್ನೊಳಗೊಂಡ ಸದುದ್ದೇಶದ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯಲ್ಲಿ ಆಯಾ ವಯೋಮಿತಿಗನುಗುಣವಾಗಿ ಬನ್ನೀಸ್, ಕಬ್ಸ್ ಮತ್ತು ಬುಲ್‌ಬುಲ್ಸ್; ಸ್ಕೌಟ್ಸ್-ಗೈಡ್ಸ್; ರೋವರ್ಸ್ ಮತ್ತು ರೇಂಜರ್ಸ್ ಎಂಬ ವಿಭಾಗಗಳಿದ್ದು, ಹಂತ ಹಂತವಾಗಿ ವಿಷಯಗಳನ್ನು ತಿಳಿಸುವ ಕ್ರಮಬದ್ಧವಾದ ನಡಿಗೆಯನ್ನೊಳಗೊಂಡಿದೆ.

ರೇಂಜರ್ಸ್ ವಿಭಾಗವು 15ರಿಂದ 25 ವರ್ಷದ ಹೆಣ್ಣು ಮಕ್ಕಳಿಗಾಗಿ ಇರುವುದು.

■

2. ರೇಂಜರಿಂಗ್ ಅರ್ಥ

15 ರಿಂದ 25ರ ವಯಸ್ಸಿನ ಹೆಣ್ಣು ಮಕ್ಕಳಿಗಾಗಿ ರೂಪಿತಗೊಂಡ ಒಂದು ಕಾರ್ಯಕ್ರಮವೇ 'ರೇಂಜರಿಂಗ್'. ಇದು ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಒಂದು ವಿಭಾಗವಾಗಿದೆ. ಈ ಚಳವಳಿಯಲ್ಲಿ ಯುವತಿಯರನ್ನು 'ರೇಂಜರ್ಸ್' ಎಂದು ಕರೆಯಲಾಗುತ್ತದೆ. ಸಾಮಾನ್ಯವಾದ ಅರ್ಥದಲ್ಲಿ ಉದ್ಯಾನ ಅಥವಾ ಸಾರ್ವಜನಿಕ ಭೂಮಿಯ ಸಂರಕ್ಷಣೆಯ ಕೆಲಸವನ್ನು ಯಾರು ಮಾಡುತ್ತಾರೋ ಅವರಿಗೆ 'ರೇಂಜರ್' ಎನ್ನಲಾಗುತ್ತದೆ.

ಸೈನ್ಯದಲ್ಲಿ, ಶಸ್ತ್ರಸಜ್ಜಿತ ಪುರುಷರು, ಆರೋಹಿತ ಸೈನಿಕರು, ಕಮಾಂಡೋ –ಗಳೆಂದರ್ಥ. ಸ್ಕೌಟ್ ಚಳವಳಿಯ ಸಂಸ್ಥಾಪಕರಾದ "ಲಾರ್ಡ್ ಬೇಡನ್ ಪೊವೆಲ್" ರವರು ನಮ್ಮ ಯುವತಿಯರು ಕೂಡ ಕಮಾಂಡೋಗಳಂತೆ ಎಂದು ಭಾವಿಸುವುದರ ಜೊತೆಗೆ ಕಾಡಿನ ರೇಂಜರ್ ಕಾಡನ್ನು ಎಷ್ಟು ಮುತುವರ್ಜಿಯಿಂದ ಸಂರಕ್ಷಿಸುವನೋ ಅದೇ ರೀತಿಯಲ್ಲಿ ಹೆಣ್ಣು ಮಕ್ಕಳು ಕೂಡ ತಮ್ಮ ಮನೆಯನ್ನು ಮತ್ತು ಸಾರ್ವಜನಿಕ–ವಾಗಿಯೂ ಎಚ್ಚರಿಕೆಯಿಂದ ಸಂರಕ್ಷಿಸಬೇಕು ಎಂಬುದು ಅವರ ಆಶಯವಾಗಿತ್ತು.

ರೇಂಜರಿಂಗ್ ನೂರು ವರ್ಷಗಳ ಹಿಂದೆಯೇ ಆರಂಭವಾಗಿ ಈಗಲೂ ಸದೃಢವಾಗಿದ್ದು ಪ್ರಪಂಚದಾದ್ಯಂತ ಕಾರ್ಯಕ್ರಮಗಳು ನಡೆಯುತ್ತಿವೆ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೂಡ ರೇಂಜರಿಂಗ್ ಶತಮಾನೋತ್ಸವವನ್ನು ಆಚರಿಸುತ್ತಿದೆ. ಈ ವರ್ಷಪೂರ್ತಿ ಭಾರತದ ವಿವಿಧ ರಾಜ್ಯಗಳಲ್ಲೂ ಅನೇಕ ಕಾರ್ಯಚಟುವಟಿಕೆಗಳನ್ನು ನೆರವೇರಿಸಲಾಗಿದೆ.

ಪ್ರಸ್ತುತ ಕರ್ನಾಟಕದಲ್ಲಿ ರಾಷ್ಟ್ರೀಯ ಮಟ್ಟದ ರೇಂಜರಿಂಗ್ ಶತಮಾನೋತ್ಸವ ಮುಕ್ತಾಯ ಸಮಾರಂಭವನ್ನು ಆಚರಿಸಲಾಗುತ್ತಿದೆ. ರೇಂಜರಿಂಗ್ ಆರಂಭವಾದದ್ದು ಹೇಗೆ? ಅದರ ಚಟುವಟಿಕೆಗಳಲ್ಲಿ ರೇಂಜರ್ ಹೇಗೆ ಭಾಗವಹಿಸುತ್ತಾಳೆ ಹಾಗೂ ಇತರ ವಿವರಣೆಗಳನ್ನು ತಿಳಿಯುವುದು ತುಂಬಾ ಕುತೂಹಲಕಾರಿಯಾಗಿದೆ. ಆ ಕುರಿತು ಒಂದು ಇಣುಕುನೋಟ ಇಲ್ಲಿದೆ. ■

3. ರೇಂಜರಿಂಗ್ ಇತಿಹಾಸ

Rovering / Rangering fills a Boy's / Girl's Sparetime with healthy occupation in a healthy company. - Lord Baden Powell

ಬೇಡನ್ ಪೊವೆಲ್‌ರವರು ಬ್ರಿಟಿಷ್ ಸೈನ್ಯಾಧಿಕಾರಿಯಾಗಿ ಸೈನ್ಯದಲ್ಲಿದ್ದಾಗ ತಮ್ಮ ಸೈನಿಕರು ಪ್ರಥಮ ಚಿಕಿತ್ಸೆಯ ಬಗ್ಗೆಯಾಗಲಿ, ಹೊರವಲಯಗಳಲ್ಲಿ ತಮ್ಮ ಜೀವರಕ್ಷಿಸಿಕೊಳ್ಳುವ ಕೌಶಲಗಳನ್ನಾಗಲಿ, ಒಂದು ಜಾಡನ್ನು ಪತ್ತೆ ಹಚ್ಚುವ ಜ್ಞಾನವನ್ನಾಗಲೀ, ದಿಕ್ಕುಗಳ ಪರಿಚಯವನ್ನಾಗಲಿ, ಆಹಾರ ಹುಡುಕುವಿಕೆ, ಅಪಾಯದ ಚಿಹ್ನೆಗಳನ್ನು ಓದುವುದಾಗಲಿ ತಿಳಿದಿಲ್ಲವೆಂಬುದನ್ನು ಕಂಡುಕೊಂಡರು. ಆಫ್ರಿಕಾದ ಮೇಫ್‌ಕಿಂಗ್ ಯುದ್ಧದಲ್ಲಿ ಚತುರ ಬಾಲಕರೊಂದಿಗೆ ಪಡೆದ ಅನುಭವಗಳಿಂದ, ಕ್ರಮಬದ್ಧ ಶಿಕ್ಷಣಪದ್ಧತಿಯಿಂದ ಹುಡುಗರಿಗೆ ಗುಣಸ್ವಭಾವ ಹಾಗೂ ಜೀವನ ಶಿಕ್ಷಣವು ದೊರೆಯುವುದಿಲ್ಲವೆಂದು ತಿಳಿದು, ನಿಜವಾದ ಜೀವನ ಶಿಕ್ಷಣ ನೀಡಬೇಕಾಗಿರುವ ಅಗತ್ಯತೆಯನ್ನು ಅರ್ಥಮಾಡಿಕೊಂಡರು.

1907ರಲ್ಲಿ ಲಾರ್ಡ್ ಬಿ.ಪಿ.ಯವರು ಸ್ಕೌಟ್ ಚಳವಳಿಯ ಮೊಟ್ಟ ಮೊದಲ ಪ್ರಾಯೋಗಿಕ ಶಿಬಿರವನ್ನು ಇಂಗ್ಲೆಂಡಿನ ಬ್ರೌನ್‌ಸಿ ದ್ವೀಪದ ಪೂಲ್ ಹಾರ್ಬರ್ ಡಾರ್ಸೆಟ್‌ನಲ್ಲಿ 20 ಹುಡುಗರಿಗೆ ಆರಂಭಿಸಿದರು. ಜೀವನ ಶಿಕ್ಷಣವನ್ನು ಕಲಿಸುವ ಉದ್ದೇಶದಿಂದ ಆರಂಭಗೊಂಡ ಶಿಬಿರವು ಪೂರ್ಣ ಯಶಸ್ವಿಯಾಯಿತು. ಈ ಶಿಬಿರದ ನಂತರ **'ಸ್ಕೌಟಿಂಗ್ ಫಾರ್ ಬಾಯ್ಸ್'** ಪುಸ್ತಕವನ್ನು ಬರೆದರು. ಅದು ಆರು ಪಾಕ್ಷಿಕ ಗಳಲ್ಲಿ ಪ್ರಕಟಣೆಗೊಂಡು ತುಂಬಾ ಜನಜನಿತವಾಯಿತು ಹಾಗೂ ಅನೇಕ ಹುಡುಗರು ಸ್ಕೌಟಿಂಗ್‌ಗೆ ಸೇರಲಾರಂಭಿಸಿದರು.

1909 ಸೆಪ್ಟೆಂಬರ್‌ನಲ್ಲಿ ಲಾರ್ಡ್ ಬಿ.ಪಿ.ಯವರು ಇಂಗ್ಲೆಂಡಿನ ಕ್ರಿಸ್ಟೆಲ್ ಪ್ಯಾಲೇಸ್‌ನಲ್ಲಿ ಪ್ರಥಮ ಸ್ಕೌಟ್ ರ‍್ಯಾಲಿಯನ್ನು ನಡೆಸಿದರು. ಕ್ರಿಸ್ಟೆಲ್ ಪ್ಯಾಲೇಸಿನ ಈ ರ‍್ಯಾಲಿಯಲ್ಲಿ 11,000 ಸ್ಕೌಟ್‌ಗಳು ಭಾಗವಹಿಸಿದ್ದರು. ಮತ್ತು ಕೆಲವು ಹೆಣ್ಣುಮಕ್ಕಳು

ಸ್ಕೌಟ್‌ಗಳ ಸಮವಸ್ತ್ರ ಧರಿಸಿ, ಟೋಪಿಯಲ್ಲಿ ಹಕ್ಕಿಗರಿಯನ್ನು ಸಿಕ್ಕಿಸಿಕೊಂಡಿದ್ದ-ವರನ್ನು ನೋಡಿ ಬಿ.ಪಿ.ಯವರು ಆಶ್ಚರ್ಯಭರಿತರಾದರು. ಬಿ.ಪಿ.ಯವರು ಅವರನ್ನು "ನೀವು ಯಾರೆಂದು" ಪ್ರಶ್ನಿಸಿದಾಗ ಅವರು "ತಾವು ಗರ್ಲ್ ಸ್ಕೌಟ್ಸ್" ಎಂದರು. ಆಗ ಬಿ.ಪಿ.ಯವರು ಸ್ಕೌಟಿಂಗ್ ಹೆಣ್ಣುಮಕ್ಕಳಿಗಲ್ಲ ಎಂದು ಎಷ್ಟು ತಿಳಿಹೇಳಿದರೂ ಅವರ ಪ್ರಯತ್ನ ಸಫಲವಾಗಲಿಲ್ಲ. ಕೊನೆಗೆ ಬಿ.ಪಿ.ಯವರು 'ಗರ್ಲ್‌ಗೈಡ್' ವಿಭಾಗಕ್ಕೆ ಸಮ್ಮತಿಸಬೇಕಾಯಿತು. ಹೀಗೆ ಹುಡುಗಿಯರಿಗಾಗಿ ಗೈಡಿಂಗ್ ಆರಂಭಗೊಂಡಿತು.

1916–17ರಲ್ಲಿ ಗೈಡಿಂಗ್‌ನಲ್ಲಿ ತೊಡಗಿಸಿಕೊಂಡಿದ್ದ ಹುಡುಗಿಯರು ಅನೇಕ ಕೌಶಲಗಳನ್ನು ಕಲಿತಿದ್ದರು. ವಯಸ್ಸಿನಲ್ಲಿ ಇತರರಿಗಿಂತ ದೊಡ್ಡವರಾಗಿದ್ದರು. ಆದರೆ ಅವರು ಗೈಡಿಂಗ್ ಬಿಡಲು ಇಷ್ಟ ಪಡಲಿಲ್ಲ. ಹಾಗೆಯೇ ಕಿರಿಯ ಬಾಲಕಿಯರು ದಳಕ್ಕೆ ಸೇರ್ಪಡೆಯಾಗುತ್ತಿದ್ದರು. ಈ ಮಧ್ಯೆ ಸ್ಕೌಟಿಂಗ್ ಕೌಶಲಗಳನ್ನು ಈಗಾಗಲೇ ಕಲಿತಿದ್ದ ಹಿರಿಯ ಬಾಲಕಿಯರು ಕಿರಿಯರೊಂದಿಗೆ ಕಲಿಯಲು ಅಸಮಾಧಾನ ಗೊಂಡರು. ಈ ಸ್ಥಿತಿಯನ್ನು ಗಮನಿಸಿ ಲಾರ್ಡ್ ಬಿ.ಪಿ.ಯವರು ಹಿರಿಯ ಗೈಡ್‌ಗಳಿಗೆ ಬೇರೆ ವಿಧದ ಪಠ್ಯಾಂಶವನ್ನು ಯೋಚಿಸಿದರು. ಅವರು ಸೀನಿಯರ್ ಗೈಡ್‌ಗಳಿಗೆ ಹೊಸ ಪಠ್ಯಕ್ರಮವನ್ನು ರಚಿಸಲು ಗೈಡ್ ಸಾಹಸಿಗರ ನಾಯಕಿ, ಸ್ಫೂರ್ತಿದಾಯಕಿಯೂ ಹೆಸರಾಂತ ಲೇಖಕಿಯೂ ಹಾಗೂ ಉತ್ತಮ ಭಾಷಣಕಾರಳಾದ **ಶ್ರೀಮತಿ ಮಾರ್ಕ್‌ಕೆರ್**‌ರವರಿಗೆ ಸೂಚಿಸಿದರು. 1917–18ರಲ್ಲಿ ಅನೇಕ ಸೀನಿಯರ್ ಗರ್ಲ್ ಗೈಡ್‌ಗಳ ದಳಗಳು ಆರಂಭಗೊಂಡವು. 1919 ಜುಲೈನಲ್ಲಿ ಆಕ್ಸಫರ್ಡ್‌ನಲ್ಲಿ ಜರುಗಿದ ಕೌಂಟಿಕಮಿಷನರ್ಸ್ ಸಮ್ಮೇಳನದಲ್ಲಿ ರೇಂಜರಿಂಗ್ ಆರಂಭಿಸಲು ಸರ್ವಾನುಮತದಿಂದ ಸ್ವೀಕೃತವಾಯಿತು. ಹೀಗೆ ಆರಂಭವಾದ ರೇಂಜರ್‌ಗಳ ಧ್ಯೇಯ ವಾಕ್ಯ **"ಸೇವೆ"** ಎಂಬುದಾಗಿದೆ. ■

4. "ಪ್ರೇರಣಾ" ಎಂದರೇನು?

ರೇಂಜರ್‌ಗಾಗಿ ರೂಪಿತವಾದ 'ಪ್ರೇರಣಾ' ಸ್ಕೌಟ್ಸ್ ಮತ್ತು ಗೈಡ್ಸ್‌ನ ಗುರಿ, ನೀತಿ, ನಿಯಮ ಮತ್ತು ಸಂಘಟನೆಗಳಿಂದ ಹೊರತಾಗಿಲ್ಲ. ಇಲ್ಲಿನ ಶಿಸ್ತಿಗೆ, ಸೇವೆಗೆ ಬದ್ಧವಾಗಿದೆ ಹಾಗೂ ಬದ್ಧತೆಯನ್ನು ತನ್ನಲ್ಲಿ ಸದಾ ಹಿಡಿದಿಟ್ಟುಕೊಳ್ಳುತ್ತದೆ.

ಸ್ಕೌಟ್/ಗೈಡ್ ವಿಭಾಗದ ಸೇವಾ ಕಾರ್ಯಕರ್ತರೆಲ್ಲಾ ಸತತ ಪರಿಶ್ರಮ ಪಡಬೇಕಾಗುತ್ತದೆ. ಮಕ್ಕಳಿಗೆ, ಯುವಕ/ಯುವತಿಯರಿಗೆ ಕಲಿಸಿದ ಒಳ್ಳೆಯತನ, ದೈನಂದಿನ ಹಾಗೂ ಭವಿಷ್ಯತ್ತಿನಲ್ಲಿ ಅವರ ಬಾಳಿಗೆ ಸಹಾಯಕವಾಗುವುದರಲ್ಲಿ ಸಂದೇಹವಿಲ್ಲ. ಹಾಗಾಗಿ ಹೊಸ ಹೊಸ ಜ್ಞಾನ ನೀಡುವ, ಬದುಕಿಗೆ ಆಧಾರವಾಗುವ, 'ಪ್ರೇರಣಾ' ಕಾರ್ಯಕ್ರಮಗಳು ಕೇವಲ ಹೆಣ್ಣುಮಕ್ಕಳಿಗಾಗಿ ಹುಟ್ಟು ಹಾಕಿರುವುದು. ಸ್ಕೌಟ್ಸ್ ಗೈಡ್ಸ್ ಸಂಸ್ಥೆಯು ಇನ್ನೂ ಹೆಚ್ಚಿನ ರೀತಿಯಲ್ಲಿ ಪ್ರಭಾವಿತವಾಗಿ ಬೆಳೆಯಲು ಇದೊಂದು ಯೋಜನೆಯಷ್ಟೆ!

ಹೆಣ್ಣು ಮಕ್ಕಳ ಸಬಲೀಕರಣದತ್ತ ಪ್ರೇರಣಾ ಹೊಸಹೆಜ್ಜೆಗಳನ್ನು ಹಾಕುತ್ತಿದೆ. ನಮ್ಮ ನಾಡಿನಲ್ಲಿ ಹೆಣ್ಣು ಮಕ್ಕಳಿಗೆ ಒದಗಿಬರುವ ಸಮಸ್ಯೆಗಳು ನಾನಾ ವಿಧಗಳು. ಆಯಾ ಪ್ರಾದೇಶಿಕ ಸಂಪ್ರದಾಯಗಳು, ಜೀವನ ವಿಧಾನಗಳು, ಪದ್ಧತಿಗಳು ವಿಭಿನ್ನವಾಗಿವೆ. ಆಕೆಯು ದೈಹಿಕ, ಮಾನಸಿಕ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ ಹಾಗೂ ಧಾರ್ಮಿಕವಾಗಿ ಎಷ್ಟೋ ಅಹಿತಕರ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ. ಸಮಾಜದಲ್ಲಿ, ಕುಟುಂಬಗಳಲ್ಲಿ ಸ್ತ್ರೀಯ ಪಾತ್ರ ಹಿರಿದಾದುದು. ಅಂತಹ ಜವಾಬ್ದಾರಿಗಳನ್ನು ಕೈಗೊಳ್ಳಲು ಸಾಕಷ್ಟು ಸಿದ್ಧತೆಗಳು ಆಕೆಯಲ್ಲಿರಬೇಕಾಗುತ್ತದೆ. ಅಂತಹ ಜವಾಬ್ದಾರಿಯುತ ಜೀವನ ಶಿಕ್ಷಣದಿಂದ ಆಕೆಗೆ ಬದುಕು ಸುಗಮವಾಗಿ, ಸಾರ್ಥಕತೆ ಪಡೆಯುತ್ತದೆ. ಆರ್ಥಿಕತೆಯಲ್ಲೂ, ಉತ್ತಮ ನಾಗರಿಕಳಾಗಿರಲು ಸಹಾಯವಾಗುತ್ತದೆ. ಆದ್ದರಿಂದ 'ಪ್ರೇರಣಾ' ಕಾರ್ಯಕ್ರಮವು ಹೆಣ್ಣು ಮಕ್ಕಳಿಗೆ ಸ್ಫೂರ್ತಿದಾಯಕ ಯೋಜನೆಯಾಗಿದೆ.

ಒಟ್ಟಿನಲ್ಲಿ 'ಪ್ರೇರಣಾ' ಸ್ಕೌಟ್ಸ್ ಮತ್ತು ಗೈಡ್ಸ್ ಗುರಿಯಾನುಸಾರ ತನ್ನ ಜ್ಞಾನ ಸಾರವನ್ನು ಎಲ್ಲೆಡೆ ಪಸರಿಸಲು ಆಕಾಂಕ್ಷಿಯಾಗುತ್ತಿರುವುದು, ಚಳವಳಿಯ ಸಂದೇಶವನ್ನು ಎತ್ತಿಹಿಡಿಯಲು ಸಿದ್ಧವಾಗಿರುವ ಮಾರ್ಗದರ್ಶಿ ಹೊಸ ಬೆಳಕಾಗಿದೆ.

ಪ್ರೇರಣಾ ಕಾರ್ಯಕ್ರಮವನ್ನು ರೂಪಿಸಿದ ಶ್ರೀಮತಿ ಎಸ್.ಕೆ. ಪ್ರಭಾರವರ ಚಿಂತನೆಗೆ ನಾವೆಲ್ಲರೂ ಚಿರಋಣಿಗಳು.

■

ದಳನಾಯಕಿಯರೊಂದಿಗೆ
ಶ್ರೀಮತಿ ಎಸ್.ಕೆ. ಪ್ರಭಾರವರು

5. “ಪ್ರೇರಣಾ” ಯಾರಿಗೆ?

ಸ್ಕೌಟ್ಸ್ ಮತ್ತು ಗೈಡ್ಸ್ ಆಂದೋಲನವು ಯುವ ಜನತೆಯ ಸರ್ವಾಂಗೀಣ ಬೆಳವಣಿಗೆಗಾಗಿ ಹುಟ್ಟಿರುವಂತಹುದು. ಲಾರ್ಡ್ ಬೇಡನ್ ಪೊವೆಲರು ಸಂಸ್ಥೆಯ ರೂವಾರಿ. 1907ರಲ್ಲಿ ಆರಂಭವಾದ ಈ ಸಂಸ್ಥೆಯು ಇಂದಿಗೂ ಜಾಗತಿಕ ಮಟ್ಟದಲ್ಲಿ ಹೆಸರುವಾಸಿಯಾಗಿರುವ ಏಕೈಕ ಚಳವಳಿ! ಶ್ರೀಮತಿ ಅಗ್ನೇಸ್ ಪಾವೆಲ್‌ರವರ ಸಹಕಾರ ಹಾಗೂ ಶ್ರೀಮತಿ ಅಲೇವ್ ಬೇಡನ್ ಪಾವೆಲ್‌ರವರ ಸಾರ್ಥಕ ನಾಯಕತ್ವದಲ್ಲಿ ವಿಶ್ವದಾದ್ಯಂತ ಹೆಸರು ಮಾಡಿದ ಸಂಸ್ಥೆ ಇದಾಗಿದೆ.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು ನಮ್ಮ ದೇಶದ ಮಕ್ಕಳ ಮತ್ತು ಯುವ ಪೀಳಿಗೆಯ ಶ್ರೇಯೋಭಿವೃದ್ಧಿಗೆ ಸತತ ಪ್ರಯತ್ನ ನಡೆಸುತ್ತಾ ಬಂದಿರುವುದು ಹೆಮ್ಮೆಯ ಸಂಗತಿ. ಈ ಸಂಸ್ಥೆಯ ಕಾರ್ಯ ನಿರ್ವಹಣೆಯು ವಿವಿಧ ವಯೋಮಾನಗಳಿಗನುಸಾರವಾಗಿ ಚಟುವಟಿಕೆಗಳನ್ನು ಹಾಗೂ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಸುಮಾರು 15ನೇ ವಯಸ್ಸಿನಿಂದ 25ನೇ ವಯಸ್ಸಿನವರೆಗೂ ತೊಡಗಿಸಿಕೊಳ್ಳುವ ಯುವ ಜನತೆಯನ್ನು **ರೋವರ್ಸ್ (ಹುಡುಗರು)** ಮತ್ತು **ರೇಂಜರ್ಸ್ (ಹುಡುಗಿಯರು)** ಎಂಬುದಾಗಿ ವಿಭಾಗ ಮಾಡಲಾಗುತ್ತದೆ.

ರೇಂಜರ್ಸ್ ಗೈಡ್ಸ್ ಪಠ್ಯಾಂಶವನ್ನು ಹೊಂದಿದ್ದು **‘ಸೇವೆ’** ಅವರ ಉದ್ಘೋಷವಾಗಿದೆ. ಪಠ್ಯ ವಿಷಯಾನುಸಾರ ಕಾರ್ಯಕ್ರಮಗಳನ್ನು, ಯೋಜನೆಗಳನ್ನು, ಯೋಚನೆಗಳನ್ನು, ಚಟುವಟಿಕೆಗಳನ್ನು ನಿರ್ವಹಿಸುತ್ತಾರೆ. ಇದರ ಜೊತೆಗೆ ಪ್ರಸ್ತುತ ನಮ್ಮ ದೇಶದ ಯುವತಿಯರ ಸಬಲೀಕರಣ ಮತ್ತು ವಿವಿಧ ಕೌಶಲ್ಯಗಳ ಅರಿವು, ದೇಶಭಕ್ತಿ, ಕರ್ತವ್ಯ, ಆರೋಗ್ಯ, ಆರ್ಥಿಕ ಸದೃಢತೆ, ಮನೋಸ್ಥೈರ್ಯಗಳನ್ನು ಹೆಚ್ಚಿಸಿಕೊಂಡು ಉಪಯುಕ್ತ ಉತ್ತಮ ನಾಗರಿಕಳಾಗುವ ಉದ್ದೇಶಿತ ಕಾರ್ಯಕ್ರಮವೇ **“ಪ್ರೇರಣಾ”**.

ಪ್ರೇರಣಾ ಕಾರ್ಯಕ್ರಮದ ಯೋಜನೆಗಳ ಮಹತ್ವವನ್ನು ಗಮನಿಸಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ, ಗೈಡ್ ವಿಭಾಗದ ಜಂಟಿ ರಾಜ್ಯ ಕಾರ್ಯದರ್ಶಿ **ಶ್ರೀಮತಿ ಎಸ್.ಕೆ. ಪ್ರಭಾ**ರವರು ದಿನಾಂಕ **25.08.2015**ರಲ್ಲಿ ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ಪ್ರಪ್ರಥಮ ಬಾರಿಗೆ ತಮ್ಮ ಆಲೋಚನೆಯನ್ನು ನನಸಾಗಿಸಲು ಬೆಂಗಳೂರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 100 ರೇಂಜರ್‌ಗಳನ್ನೊಳಗೊಂಡ ಹಾಗೂ ಹೆಣ್ಣು ಮಕ್ಕಳ ಸಬಲೀಕರಣಕ್ಕಾಗಿ 'ಪ್ರೇರಣಾ' ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಆಯೋಜಿಸಿದ್ದರು.

ರೇಂಜರ್‌ಗಳಿಗೆ ಇದೊಂದು ಹೊಸ ಯೋಜನೆ. ರೇಂಜರ್ಸ್ ಮತ್ತು ಪ್ರೇರಣಾ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಒಂದಕ್ಕೊಂದು ಸಹಾಯಕ, ಪೂರಕ ಹಾಗೂ ಪ್ರೋತ್ಸಾಹದಾಯಕ.

■

ರೇಂಜರ್‌ಗಳು

6. ಪ್ರೇರಣಾದ ಉದ್ದೇಶ ಮತ್ತು ಗುರಿ

ಉದ್ದೇಶಗಳು :

1. ಯುವತಿಯರು ದೈಹಿಕ, ಮಾನಸಿಕ, ಸಾಮಾಜಿಕ, ಆರ್ಥಿಕ ಹಾಗೂ ಭಾವನಾತ್ಮಕವಾಗಿ ಸಬಲರಾಗುವಂತೆ ಪ್ರೇರಣೆ ನೀಡುವುದು
2. ಸಕಾರಾತ್ಮಕ ಚಿಂತನೆಯ ಮೂಲಕ ತಾವು ಸಾಧನೆಯನ್ನು ಮಾಡಬಹುದೆಂಬ ಮನೋಸ್ಥೈರ್ಯವನ್ನು ನೀಡುವುದು
3. ವಿವಿಧ ಚಟುವಟಿಕೆಗಳ ಮೂಲಕ ಅವರಲ್ಲಿ ಕಾರ್ಯ ಸಾಧನೆಗಾಗಿ ಪ್ರೇರಣೆ ನೀಡುವುದು
4. ಜೀವನ ಕೌಶಲ, ಆರೋಗ್ಯ, ಸ್ವಾವಲಂಬನೆ, ಕರ್ತವ್ಯ, ಉತ್ತಮ ಸಮಾಜ ನಿರ್ಮಾಣ, ಜವಾಬ್ದಾರಿ, ಹಕ್ಕು, ರಾಷ್ಟ್ರೀಯತೆ, ಸ್ವ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವುದು.
5. ಸಮುದಾಯ ತನ್ನದೆಂಬ ಭಾವನೆ ಮೂಡಿಸುವುದು.
6. ಉತ್ತಮ ನಾಗರಿಕತೆ ಮತ್ತು ನಾಯಕತ್ವದ ಅರಿವು ಮೂಡಿಸುವುದು.
7. ಜಲ ಸಂಪನ್ಮೂಲ, ಪರಿಸರ ರಕ್ಷಣೆ, ಶಾಂತಿಯುತ ಬದುಕಿನತ್ತ ಚಿತ್ತ ಹಾಗೂ "ಪ್ಲಾಸ್ಟಿಕ್ ಬೇಡ" ಎಂಬುದರ ಬಗ್ಗೆ ಎಚ್ಚರಿಕೆ ನೀಡುವುದು.
8. ಮದ್ಯಪಾನ ಮತ್ತು ಮಾದಕ ವಸ್ತುಗಳಿಗೆ ವಿದಾಯ ಹೇಳುವುದು.

ಗುರಿ:

1. ಮೇಲೆ ತಿಳಿಸಿದ ಉದ್ದೇಶಗಳನ್ನು ಮನನ ಮಾಡಿಕೊಳ್ಳುವುದು.
2. ಆಲೋಚಿಸುವವರ ವೈಯಕ್ತಿಕ ವಿಕಾಸಕ್ಕೆ ಸ್ಫೂರ್ತಿದಾಯಕವಾಗುತ್ತದೆ.

3. ವ್ಯಕ್ತಿತ್ವ ವಿಕಸನದೊಂದಿಗೆ ಸಬಲರಾಗುತ್ತಾರೆ.

4. ಹೆಚ್ಚಿನ ಜವಾಬ್ದಾರಿಯುತ ಬದುಕು ಸಾಧ್ಯವಾಗುತ್ತದೆ.

5. ಆರೋಗ್ಯಕರ ಮತ್ತು ಆನಂದದ ಉಪಯುಕ್ತ ಪ್ರಜೆಗಳಾಗಿ ಬೆಳೆಯುವುದು.

6. ಸ್ಕೌಟ್, ಗೈಡ್ ಪ್ರತಿಜ್ಞೆ ಮತ್ತು ನಿಯಮಗಳನ್ನು ಪಾಲಿಸುತ್ತ ಸತ್ಪಥದಲ್ಲಿ ಮುನ್ನಡೆಯುತ್ತಾರೆ.

7. ಸಾಮಾಜಿಕ ಸಮಸ್ಯೆಗಳನ್ನು ತಿಳಿದು ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ಉದಾ: ಮದ್ಯಪಾನ, ಮಾದಕವಸ್ತುಗಳ ಸೇವನೆ ಇತ್ಯಾದಿ.

8. ಸಂಸ್ಕಾರಯುತ ಬದುಕಿನತ್ತ ಹೆಜ್ಜೆಗಳನ್ನಿಡಲು ನಿರ್ಧರಿಸುತ್ತಾರೆ.

■

ಪ್ರೇರಣಾ ಕಾರ್ಯಕ್ರಮದ ವೇದಿಕೆ

7. ಕರ್ನಾಟಕದಲ್ಲಿ ಪ್ರೇರಣಾ ಆರಂಭ

ಪ್ರೇರಣ ಕಾರ್ಯಕ್ರಮದ ಯೋಜನೆಗಳ ಮಹತ್ವವನ್ನು ಗಮನಿಸಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ, ಗೈಡ್ ವಿಭಾಗದಿಂದ **ದಿನಾಂಕ 25ರಿಂದ 27 ಆಗಸ್ಟ್ 2015**ರ ವರೆಗೆ ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು ಇಲ್ಲಿ ಪ್ರಥಮ ಬಾರಿಗೆ ಬೆಂಗಳೂರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ 100 ರೇಂಜರ್‌ಗಳಿಗಾಗಿ ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ "ಪ್ರೇರಣಾ ಕಾರ್ಯಕ್ರಮ"ವನ್ನು ಆಯೋಜಿಸಲಾಗಿತ್ತು.

ದಿನಾಂಕ 25.08.2015ರಂದು ಬೆಳಗ್ಗೆ 9.00 ಗಂಟೆಗೆ ಧ್ವಜಾರೋಹಣದೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಪ್ರೇರಣಾ ಕಾರ್ಯಕ್ರಮದಲ್ಲಿ ಈಗಾಗಲೇ ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕಿಯರ ಪರಿಚಯ, ಅವರು ನಡೆದು ಬಂದ ದಾರಿ ಹಾಗೂ ಅವರ ಸಾಧನೆಗಳನ್ನು ತಿಳಿಸುತ್ತಾ **ಶ್ರೀಮತಿ ಮಧುರ ಛತ್ರಪತಿ,** ಮಹಿಳಾ ಉದ್ಯಮಿ, **ಶ್ರೀಮತಿ ಜೀಜಾಹರಿಸಿಂಗ್,** ನಿವೃತ್ತ ಹಿರಿಯ ಪೊಲೀಸ್ ಇಲಾಖೆ ಅಧಿಕಾರಿ, **ಶ್ರೀಮತಿ ಮೋಟಮ್ಮ,** ಮಾನ್ಯ ವಿಧಾನ ಪರಿಷತ್ ಸದಸ್ಯೆ, **ಶ್ರೀಮತಿ ಮಾಲಾ ಆನಂದ್, ಡಾ॥ ಶ್ರೀಮತಿ ಉಪನ್ಯಾಸಕರು,** ಎನ್.ಎಂ.ಕೆ.ಆರ್.ವಿ. ಕಾಲೇಜು, **ಶ್ರೀಮತಿ ಉಷಾ ರಾಮಯ್ಯ** ಮುಂತಾದ ಶ್ರೇಷ್ಠ ಸಾಧಕಿಯರನ್ನು ಪರಿಚಯಿಸಲಾಯಿತು.

ಪ್ರಕೃತಿಯ ಸಂರಕ್ಷಣೆ, ಹಕ್ಕು ಮತ್ತು ಕರ್ತವ್ಯಗಳು, ಬಾಲ್ಯ ವಿವಾಹ, ವರದಕ್ಷಿಣೆ, ನಿರುದ್ಯೋಗ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಪ್ರೇಮ ವಿವಾಹ ಮತ್ತು ಸಂಪ್ರದಾಯ ವಿವಾಹ ಯಾವುದು ಸೂಕ್ತ ಎನ್ನುವುದರ ಬಗ್ಗೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ರೇಂಜರ್‌ಗಳು ಆಸಕ್ತಿಯಿಂದ ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ಮಂಡಿಸಿದರು.

ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜಿನ ರೇಂಜರ್‌ಗಳು ಸ್ವರಕ್ಷಣೆಯ ಬಗ್ಗೆ ಪ್ರಾತ್ಯಕ್ಷಿಕೆ ಮತ್ತು ವಿವರಗಳೊಂದಿಗೆ **ಕುಮಾರಿ ಮಧುರ ಮತ್ತು ಶ್ರೀ ಮುರಳಿ** ಅವರ ನೇತೃತ್ವದಲ್ಲಿ ಪ್ರದರ್ಶಿಸಲಾಯಿತು.

ಹೆಣ್ಣುಮಕ್ಕಳ ಸಬಲೀಕರಣಕ್ಕಾಗಿ, ಸ್ತ್ರೀ ಆರೋಗ್ಯ, ಕಾರ್ಯಕ್ರಮ ನಿರ್ವಹಣೆ, ಲೈಂಗಿಕ ಕಿರುಕುಳ, ಕಾನೂನು ಸಲಹೆ, ವನಿತ ಸಹಾಯವಾಣಿ, ಸಾಹಸಮಯ ಜೀವನದ ದಾರಿ, ಸಮಾಜದಲ್ಲಿ ಧೈರ್ಯವಾಗಿ ಬದುಕುವ ಕಲೆ ಮುಂತಾದ ವಿಷಯಗಳ ಬಗ್ಗೆ **ಡಾ॥ ಜಯಶ್ರೀ, ಶ್ರೀಮತಿ ಸುಜ್ಯೋತಿ, ಶ್ರೀಮತಿ ಆರತಿ, ಕುಮಾರಿ ವಿಭಾ, ಶ್ರೀಮತಿ ಸೌಜನ್ಯ,** ಇವರುಗಳು ಉತ್ತಮವಾದ ಆಪ್ತ ಸಲಹೆಯನ್ನು ನೀಡಿದರು. ಕಾರ್ಯಕ್ರಮದಲ್ಲಿ **ಡಾ॥ ನಾಗ್‌ಮೋಹನ್‌ದಾಸ್,** ಕರ್ನಾಟಕದ ಉಚ್ಚನ್ಯಾಯಾಲಯದ ನ್ಯಾಯಾಧೀಶರು ಬರೆದಂತಹ "ಮಹಿಳೆ ಮತ್ತು ಸಮಾನತೆ" ಎಂಬ ಪುಸ್ತಕವನ್ನು ಭಾಗವಹಿಸಿದ ಎಲ್ಲರಿಗೂ ನೀಡಲಾಯಿತು.

ಶ್ರೀ ಎಂ.ಎ. ಖಾಲಿದ್, ರಾಜ್ಯ ಆಯುಕ್ತರು (ಸ್ಕೌಟ್ಸ್) ಇವರು ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದರು.

ಶ್ರೀಯುತ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು, ಅವರ ಮಾರ್ಗದರ್ಶನ ಮತ್ತು ಸಲಹೆಯೊಂದಿಗೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಯಿತು. ಶ್ರೀಯುತರು ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ರೇಂಜರ್‌ಗಳಿಗೆ ಯಶಸ್ವಿ ಮಹಿಳೆಯಾಗಲು ಅಗತ್ಯವಿರುವ ಅಂಶಗಳನ್ನು ವಿವರಿಸಿದರು.

ಪ್ರೇರಣಾ ಕಾರ್ಯಕ್ರಮದ ನಾಯಕತ್ವವನ್ನು **ಶ್ರೀಮತಿ ಶಾಂತಾ ಕುಮಾರಿ,** ರೇಂಜರ್ ಲೀಡರ್, ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು ಇವರು ವಹಿಸಿದರು. **ಡಾ॥ ಬಿ.ಎಲ್. ಭಾಗ್ಯಲಕ್ಷ್ಮಿ, ಶ್ರೀಮತಿ ಬಿ.ವಿ. ರಾಮಲತಾ, ಶ್ರೀಮತಿ ಬಿ. ರೇವತಿ, ಶ್ರೀಮತಿ ಜಾನಕಿ ವೇಣುಗೋಪಾಲ್, ಶ್ರೀಮತಿ ರಾಧಾ ವೆಂಕಟೇಶ್, ಶ್ರೀಮತಿ ಕಮಲಾಕ್ಷಿ ಹೆಗಡೆ, ಶ್ರೀಮತಿ ಕೆ.ವಿ. ಶಾಮಲ, ಕುಮಾರಿ ಮೇಘನಾ** ಮುಂತಾದವರು ಕಾರ್ಯಕ್ರಮದ ಯಶಸ್ಸಿಗೆ ಕಾರ್ಯನಿರ್ವಹಿಸಿದರು.

ಶ್ರೀಮತಿ ಎಸ್.ಕೆ. ಪ್ರಭಾ, ಜಂಟಿ ರಾಜ್ಯ ಕಾರ್ಯದರ್ಶಿ (ಗೈಡ್ಸ್) ಇವರು ತಮ್ಮ ಮಹತ್ವಾಕಾಂಕ್ಷೆಯ ಪ್ರೇರಣಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿಕೊಟ್ಟರು. ಪ್ರೇರಣಾ ಕಾರ್ಯಕ್ರಮದಲ್ಲಿ **ಶ್ರೀಮತಿ ಸಿ. ಮಂಜುಳಾ,** ರಾಜ್ಯ ಸಂಘಟನಾ ಆಯುಕ್ತೆ ಕಾರ್ಯಕ್ರಮದ ಉಸ್ತುವಾರಿವಹಿಸಿ ಯಶಸ್ವಿಗೊಳಿಸಿದರು.

ಹೀಗೆ ಆರಂಭಗೊಂಡ **'ಪ್ರೇರಣಾ'** ಕಾರ್ಯಕ್ರಮವು ದಿನದಿನಕ್ಕೆ ಕರ್ನಾಟಕದ ಮೂಲೆ ಮೂಲೆಗೂ ಪಸರಿಸುತ್ತಿರುವುದು ಸ್ತುತ್ಯರ್ಹ! ಹಾಗೂ ದೇಶ ವಿದೇಶಗಳಲ್ಲಿ ಇದರ ಮಹತ್ವ ಬೆಳಕು ಚೆಲ್ಲಲಿ ಎಂಬುದು ನಮ್ಮೆಲ್ಲರ ಅಭಿಲಾಷೆ. ■

8. ಪ್ರೇರಣಾದ ಮಹತ್ವದ ಹೆಜ್ಜೆಗಳು

(i) ವಯಸ್ಸು..... ಮನಸ್ಸು

"ಷೋಡಶ ವಯಸ್ಸು, ಹರೆಯದ ಮನಸ್ಸು", ಉಕ್ಕಿ ಹರಿಯುವ ಆಸೆಗಳನ್ನು ಮನದೊಳಗೆ ಬಚ್ಚಿಟ್ಟುಕೊಂಡು, ಹುರುಪಿನಿಂದ ಯೌವನಕ್ಕೆ ಕಾಲಿಡುವ ಮುಗ್ಧ-ಪ್ರಬುದ್ಧ "ವಯಸ್ಸು-ಮನಸ್ಸು" ಈ ಹುಡುಗಿಯರದು. ನಮ್ಮ ದೇಶದ, ಸಮಾಜದ, ಪರಂಪರೆಯ, ಸಂಸ್ಕೃತಿಯ, ಪ್ರಾದೇಶಿಕತೆಯ ಭಿನ್ನ ಪರಿಸರದ ನಡುವೆ ಗೊತ್ತಾದ ಚೌಕಟ್ಟಿನ ಬದುಕಿನೊಂದಿಗೆ ಸ್ಪಂದಿಸುತ್ತಾ ತನ್ನ ಭವಿಷ್ಯತ್ತಿಗೆ ಭಾಷ್ಯ ಬರೆಯುವ, ತೆರೆದ ಮನಸ್ಸಿರುವ, ಈ ಹರೆಯದ ಹೆಣ್ಣುಮಕ್ಕಳ ಸತ್ವ ಸಾಧನೆಗೆ ಒಂದು ಮಾರ್ಗದರ್ಶನ ಪಥ ಬೇಡವೇ?

ಇಂದು ಕಾಲ ಬದಲಾಗಿದೆ, ಜೀವನ ವಿಧಾನ ಬದಲಾಗುತ್ತಿದೆ. ಹೆಣ್ಣು ಮಕ್ಕಳಿಗೆ ತಮ್ಮ ಯೌವನದ ಬಗ್ಗೆ ದೈಹಿಕ, ಬೌದ್ಧಿಕ, ಮಾನಸಿಕವಾಗಿ ಚಿಂತಿಸಲು ಹಾಗೂ ತಿಳಿದುಕೊಳ್ಳಲು ಸಾಕಷ್ಟು ಆಯಾಮಗಳಿವೆ, ಪುಸ್ತಕಗಳಿವೆ, ಮಾಧ್ಯಮಗಳಿವೆ, ಸಂಪರ್ಕ ಸಾಧನಗಳಿವೆ, ಕಾರ್ಯಾಗಾರಗಳಿವೆ, ಕಾರ್ಯಕ್ರಮ-ಯೋಜನೆಗಳಿವೆ, ಜಾಗತಿಕ ಮಟ್ಟದಲ್ಲಿ ನಾನಾ ಜ್ಞಾನಸಿರಿ ಅಡಗಿವೆ. ಆದರೂ ಈ ವಯಸ್ಸಿನಲ್ಲಿ ಹೆಣ್ಣುಮಕ್ಕಳು ಸಾಮಾನ್ಯವಾಗಿ ಭಾವೋದ್ವೇಗಕ್ಕೆ ಅತಿಬೇಗ ಒಳಗಾಗುವ ಮನಸ್ಸು, ಒತ್ತಡದ ಭಾವನೆಗಳಿಂದ, ದ್ವಂದ್ವ ಆಲೋಚನೆಗಳಿಂದ ಕೆಲವೊಮ್ಮೆ ತಪ್ಪು ನಿರ್ಧಾರಕ್ಕೆ ಬರಬಹುದಾದಂತಹ ಸಂದರ್ಭಗಳಿವೆ. ಒಮ್ಮೊಮ್ಮೆ, ಕೆಲ ಯುವತಿಯರು ಒಳಿತು-ಕೆಡಕುಗಳ ನಿರ್ಣಾಯಕ ಘಟ್ಟದಲ್ಲಿ ಮಾರ್ಗದರ್ಶನವನ್ನು ಅಪೇಕ್ಷಿಸಬಹುದಾಗಿರುತ್ತದೆ. ಅಂತಹ ಸನ್ನಿವೇಶಗಳಲ್ಲಿ ಸೂಕ್ತ ಸಲಹೆ ಸೂಚನೆಗಳ ಅವಶ್ಯಕತೆ ಇರುತ್ತವೆ.

ಪ್ರತಿಯೊಬ್ಬರ ಜೀವನದಲ್ಲೂ ಯೌವನದ ಘಟ್ಟ ಮಹತ್ವಪೂರ್ಣವಾದಂತಹುದು. "ಯೌವನವೇ ಧನ್ಯ" ಎಂಬ ಉಕ್ತಿಗೆ ಪ್ರಾಶಸ್ತ್ಯವಿದೆ. ಆದರೆ ಬದುಕಿನ ಪರಿ ತಂತಿ ಮೇಲಿನ ನಡಿಗೆಯಂತೆ. ಎಚ್ಚರದಿಂದಿದ್ದರೆ ಪ್ರತಿ ಹೆಜ್ಜೆಗೂ

ಬೆಲೆ. ಎಚ್ಚರ ತಪ್ಪಿದರೆ ಆಘಾತ ಖಚಿತ. ಹಾಗಾಗಿ ಅನುಭವಿಗಳ, ಹಿರಿಯರ, ಸ್ನೇಹಿತರ ಬೋಧನೆಗೆ ಬೆಲೆ ಅಪಾರ. ಅದಕ್ಕಾಗಿ ಪ್ರೇರಣಾ ಬೇಕು. **ಹೀಗೊಂದು ದೃಶ್ಯ...**

ಒಂದೆಡೆ **ರಮಾ** ಹಳ್ಳಿಯಿಂದ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ನಗರಕ್ಕೆ ಬಂದ ಮುಗ್ಧೆ. ನಗರದ ಭೋಗ ಜೀವನಕ್ಕೆ ಮನಸೋತು, ಕರ್ತವ್ಯ ಮರೆತು, ಸಾಧಿಸುವ ಗುರಿಯನ್ನೂ ಮರೆತು ಅಂತ್ಯದಲ್ಲಿ ಸೋಲಿಗೆ ಶರಣಾಗುವ ವಾಸ್ತವ ಪರಿಸ್ಥಿತಿಯು ಚಿಂತಾಜನಕ.

ಇನ್ನೊಂದೆಡೆ **ಶುಭ** ನಗರದಲ್ಲೇ ಬಡತನದಲ್ಲಿ ಹುಟ್ಟಿ ಕಷ್ಟದಿಂದ ಬೆಳೆದು ತನ್ನ ಪ್ರತಿಭೆಯನ್ನು ನಗರದಲ್ಲೇ ಕಂಡುಕೊಂಡು, ದುಃಖ, ನೋವು, ಹಾಸ್ಯ, ಅಪಹಾಸ್ಯ, ನಿಂದನೆಗಳನ್ನು ಸಹಿಸಿ, ಧೈರ್ಯಗೆಡದೆ, ತನ್ನ ಕಾರ್ಯ ನಿರ್ವಹಣೆಗೆ ಪೂರ್ಣ ಮನಸ್ಸಿಟ್ಟು ಗೆಲುವನ್ನು ಸಾಧಿಸಿದ ಯುವತಿ.

ಇಂತಹ ಎಷ್ಟೋ ಘಟನೆಗಳು ನಮ್ಮ ಸಮಾಜದಲ್ಲಿ ದಿನನಿತ್ಯ ಗೋಚರಿಸುವಂತಹುದಾಗಿದ್ದು, ಬೆಳೆಯುತ್ತಿರುವ ಕೋಮಲ ಯುವ ಮನಸ್ಸುಗಳಿಗೆ ಸೂಕ್ತ ಮಾರ್ಗದರ್ಶನ ದೊರೆತಲ್ಲಿ ಬದುಕು ಬಂಗಾರವಾದೀತು. ಅದಕ್ಕಾಗಿ **ಪ್ರೇರಣಾ** ಬೇಕು.

"ಹುಚ್ಚುಕೋಡಿ ಮನಸು ಹದಿನಾರರ ವಯಸು" ಎಂಬ ಉಕ್ತಿಯಂತೆ ಹದಿಹರೆಯದವರ ಭಾವನೆಗಳಿಗೆ ಸತ್ಪಥ ತೋರುವ ಮಾರ್ಗದರ್ಶನದ ಅವಶ್ಯಕತೆ ಖಂಡಿತಾ ಇದ್ದೇ ಇದೆ.

(ii) ಚಿಂತನ... ಮಂಥನ

"ಮನ ಚಿಂತನೆಗೆ ಒಳಗಾಗಬೇಕು
ಮಂಥನ ನಿರಂತರ ಮಥಿಸಬೇಕು
ಹೊಸ ತತ್ವ ಹೊಸ ಸೃಷ್ಟಿಯತ್ತ ಮನ ಸಾಗಬೇಕು
ಬದುಕಿಗೊಂದು ಅರ್ಥ ಸಿಗಲೇಬೇಕು."

"ಯುವಪೀಳಿಗೆ ಒಂದು ದೇಶದ ಸಂಪತ್ತು" ಭವಿಷ್ಯದ ನಾಗರಿಕತೆಗೆ ಅವರ ಸವಾಲು ಬದುಕು ಮಹತ್ವದ್ದು. ನಾಳಿನ ನಾಡಿನ ರೂವಾರಿಗಳು, ನಾಯಕ-ನಾಯಕಿಯರು, ಯುವ ಹೊಸ್ತಿಲಲ್ಲಿ ಅವರು ತೆಗೆದುಕೊಳ್ಳುವ ಒಂದೊಂದು ಆಲೋಚನೆಯೂ, ನಿರ್ಧಾರವೂ ಮೌಲ್ಯಯುತವಾದದ್ದು.

'ಪ್ರೇರಣಾ' ಕಾರ್ಯಕ್ರಮದ ಉದ್ದೇಶಗಳು ಇಂದು ನಡೆದು ನಾಳೆ ಮರೆತು ಬಿಡುವ ಕಾರ್ಯಕ್ರಮವಲ್ಲ. ಅದರ ಗುರಿ ಹೆಣ್ಣುಮಕ್ಕಳ ಆದರ್ಶ ಬದುಕಿಗೆ ಬೆಳಕು. ಈ ಬೆಳಕು ಎಲ್ಲೆಡೆ ಪಸರಿಸಿ ಎಲ್ಲೆಡೆ ಜ್ಞಾನ ತೇಜ ಹೊರಹೊಮ್ಮಬೇಕು. ಈ ಕಾರ್ಯಕ್ರಮಗಳಲ್ಲಿ ಮೂಡಿ ಬರುವ ಎಲ್ಲಾ ವಿಷಯಗಳನ್ನು ಆಳವಾಗಿ ಚಿಂತನೆಮಾಡಿ, ಯುವತಿಯರು ತಮ್ಮೊಳಗೆ ಮಥಿಸುವಂತೆ ಮಾಡಬೇಕು. ಬಂಗಾರವನ್ನು ಒರೆಗಲ್ಲಿಗೆ ಹಚ್ಚುವಂತೆ ಕೇಳಿದ, ತಿಳಿದ, ಅನುಭವದ ಎಲ್ಲಾ ವಿವರಗಳನ್ನು, ಅದರ ಸತ್ಯಾಸತ್ಯತೆಗಳನ್ನು ವಿವೇಚನೆಯಿಂದ ಗಮನಿಸಬೇಕು. ಮನದಟ್ಟು ಮಾಡಿಕೊಳ್ಳಬೇಕು. ಸ್ಕೌಟ್ಸ್ ಮತ್ತು ಗೈಡ್ಸ್ ಆದರ್ಶಗಳೊಂದಿಗೆ ಹೊಸ ಜ್ಞಾನವನ್ನು ತಮ್ಮಲ್ಲಿ ಅಳವಡಿಸಿಕೊಂಡು ಜಗತ್ತಿಗೆ ಮಾದರಿಯಾಗಬೇಕು. ಜೀವನದಲ್ಲಿ ಎದುರಿಸಬೇಕಾದ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕು. ಇಂತಹ ಚಿಂತನ ಮಂಥನ, ರೇಂಜರ್ಸ್ ಜೀವನ ನಡಿಗೆಯಲ್ಲಿ ಹಾಸುಹೊಕ್ಕಾಗಬೇಕು. ಆಗಲೇ **"ಪ್ರೇರಣಾದ ಪ್ರೇರೇಪಣೆಗೆ ಒಂದು ಹೊಸಗನ್ನಡಿ! ಮತ್ತು ಪ್ರತಿಫಲನ"**.

ಚಿಂತನ-ಮಂಥನಕ್ಕೆ, ಉತ್ತಮ ಯಶೋಗಾಥೆ 'ಗಂಧದರಾಣಿ', 'ಕೃಷಿರತ್ನ' ಪ್ರಶಸ್ತಿಗೆ ಭಾಜನರಾದ **ಶ್ರೀಮತಿ ಕವಿತಾ ಮಿಶ್ರಾ.** ಇವರ ಆದರ್ಶ ದೇಶಕ್ಕೆ ಮಾದರಿ. ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಕವಿತಾ ಓದಿದ್ದು ಕಂಪ್ಯೂಟರ್ ಸೈನ್ಸ್, ಜೊತೆಗೆ ಮನಃಶಾಸ್ತ್ರದಲ್ಲಿ ಸ್ನಾತಕೋತ್ತರ ಪದವೀಧರೆ. ಬೆಳೆದದ್ದು, ವೈವಾಹಿಕ ಜೀವನ ನಡೆಸುತ್ತಿರುವುದು ಸಂಪ್ರದಾಯಸ್ಥ ಕುಟುಂಬದಲ್ಲಿ. ಇನ್ಫೋಸಿಸ್‌ನಲ್ಲಿ ಉದ್ಯೋಗಸ್ಥಳಾಗಿದ್ದು, ಆ ಕೆಲಸವನ್ನು ಬಿಟ್ಟು ಕೃಷಿಕಳಾಗಲು ತನ್ನ ಚಿಂತನ-ಮಂಥನದಿಂದ ಆಕೆ ತೊಳಲಾಡಿದ ದಿನಗಳು, ತಿಂಗಳುಗಳು, ವರ್ಷಗಳೆಷ್ಟೋ!

ಕಡೆಗೊಂದು ದಿನ ದಿಟ್ಟ ನಿರ್ಧಾರದಿಂದ ತಮ್ಮ ಜಮೀನಿನ 8 ಎಕರೆ ಬರಡುಭೂಮಿಯಲ್ಲಿ ಸಾವಯವ ಕೃಷಿಯನ್ನು ಆರಂಭಿಸುವ ತವಕ. ಮನೆಯವರ ನಿಷ್ಠೂರದ ಮಾತುಗಳಿಗೆ, ಇತರರ ಕಟು ಟೀಕೆಗಳಿಗೆ ಮಣಿಯದೆ, ಮೊದಮೊದಲು ಆರ್ಥಿಕವಾಗಿ ತೀವ್ರ ನಷ್ಟವನ್ನನುಭವಿಸಿ ತನ್ನ ಬಂಗಾರವನ್ನು ಸಾಲಕ್ಕಾಗಿ ಬಳಸಿದ ದುಸ್ಥಿತಿ. ಆದರೂ ಎದೆಗೆಡದೆ ಗಂಡನ ಸಹಕಾರದಿಂದ ಹನಿನೀರಾವರಿ ಪದ್ಧತಿ ಬಳಸಿ, ವೈವಿಧ್ಯಮಯ ಬೆಳೆ, ತರಕಾರಿ, ಹೂಗಳನ್ನು ಬೆಳೆಸಿದರು. ಕೈಗೆ ಸಗಣಿಯನ್ನು ಮೆತ್ತಿಕೊಂಡು, ಹಸುವಿನ ಹಾಲನ್ನು ಕರೆದು, ಹೈನುಗಾರಿಕೆಯನ್ನು ವ್ಯವಸಾಯದ ಜೊತೆಗೆ ಅಭಿವೃದ್ಧಿಪಡಿಸಿದವರು. ಈ ಕ್ಷೇತ್ರದಲ್ಲಿಯೇ ಮುಂದುವರೆದು ಇಂದು ಗಂಧದ ಗಿಡಗಳನ್ನು ಬೆಳೆಸಿ ದೇಶ ವಿದೇಶಗಳಲ್ಲಿ ಪ್ರಖ್ಯಾತರಾಗಿದ್ದಾರೆ. **"ರೈತನೂ ಕೋಟಿಯಲ್ಲಿ ಮಾತನಾಡಬಹುದು"** ಅಂದರೆ ರೈತನೂ ವ್ಯವಸಾಯದಿಂದ ಕೋಟ್ಯಧೀಶನಾಗ-ಬಹುದೆಂದು ಸಂತಸದಿಂದ ನುಡಿಯುತ್ತಾರೆ. ಮಣ್ಣಿನ ಋಣವನ್ನು ತೀರಿಸೋಣ, ಆನಂದದ ಬದುಕನ್ನು ಕಟ್ಟೋಣ ಎನ್ನುತ್ತಾರೆ. ಇಂತಹ ಅಪರೂಪದ ಕಾರ್ಯಯೋಜನೆ-ಯನ್ನು ರೂಪಿಸಿದ, ಸಾಧಿಸಿದ ಇವರು ರೇಂಜರ್‌ಗಳಿಗೆ ಮಾದರಿಯಾಗುವುದರಲ್ಲಿ ಸಂದೇಹವಿಲ್ಲ. ಕೇವಲ **ನೌಕರಿಯೊಂದೇ ಬದುಕಲ್ಲ, ಕೃಷಿಯಲ್ಲಿ ಬದುಕಿದೆ** ಎಂಬ ಚಿಂತನೆಯನ್ನು ಸಾಕಾರಗೊಳಿಸಿದ ಶ್ರೀಮತಿ ಕವಿತಾಮಿಶ್ರಾರವರ ಸಾರ್ಥಕ ಬದುಕು ಯುವ ಜನಾಂಗಕ್ಕೆ ಮಂಥನದಿಂದ ದಾರಿದೀಪವಾಗಲಿ.

(iii) ಜ್ಞಾನ–ವಿಜ್ಞಾನ–ತತ್ವಜ್ಞಾನ

ಯುವ ಪೀಳಿಗೆಯಲ್ಲಿ ಜ್ಞಾನದ ದಾಹವಿರಬೇಕು. ಆಗಲೇ ವ್ಯಕ್ತಿಯ ಪ್ರತಿಭೆಯ ಮೂಲ ಸ್ವರೂಪ ನಾನಾ ರೂಪಗಳಲ್ಲಿ ಮೂಡಿಬರಲು ಸಾಧ್ಯ. ಇಂದಿನ ಯುವ ಪೀಳಿಗೆಯವರು ವಿವಿಧ ಸಂಪರ್ಕ, ಸಾಧನ, ಮಾಧ್ಯಮ, ತಂತ್ರಜ್ಞಾನಗಳ ಮೂಲಕ ಜ್ಞಾನವನ್ನು ಹೊಂದಿರುತ್ತಾರೆ. ಜಾಗತಿಕ ಮಟ್ಟದಲ್ಲೂ ಅವರು ಜ್ಞಾನ ವಿಶಾಲತೆಯನ್ನು ಪಡೆದಿರುತ್ತದೆ. ಆ ಜ್ಞಾನ ಸುಜ್ಞಾನವಾಗಿ, ಹೊಸತನದ ವಿಜ್ಞಾನವಾಗಿ ಹಾಗೂ ತತ್ವಜ್ಞಾನಕ್ಕೆ ಮಾರ್ಪಡುವ ಸಮರ್ಪಕ ಮಾಹಿತಿಯ ಅವಶ್ಯಕತೆಯಿರುತ್ತದೆ. ಅಂತಹ ಜ್ಞಾನದ ತಿಳುವಳಿಕೆಯು ಸದ್ಬಳಕೆಯಾಗಬೇಕಾದರೆ ಕ್ಷೇತ್ರಗಳ ಸೃಷ್ಟಿ, ಕಾರ್ಯ ವಿಸ್ತರಣೆ, ಸೂಕ್ತ ಮಾರ್ಗದರ್ಶನಗಳ ಅಗತ್ಯವಿರುತ್ತದೆ. ಅಂತಹ ಅವಕಾಶವನ್ನು 'ಪ್ರೇರಣಾ" ಕಲ್ಪಿಸುತ್ತದೆ. ಉದಾ: ಸಾಧಕ ಮಹಿಳೆಯರ ವಿಶೇಷ ಸಾಧನೆ, ಕೌಶಲ, ಪ್ರತಿಭೆಯನ್ನು ಗುರುತಿಸುವಿಕೆ, ಶೂನ್ಯದಿಂದ ಸಾಧನೆ ಮಾಡಿದವರು, ಜೀರೊ–ಟು–ಹೀರೋ' ಎಂಬಂತಹ ಕಾರ್ಯಕ್ರಮಗಳು, ಮಾರ್ಗಸೂಚಿಗಳಿದ್ದು ಹೆಣ್ಣು ಮಕ್ಕಳ ಅಭಿರುಚಿಗೆ ತಕ್ಕಂತೆ ತಮ್ಮ ಜ್ಞಾನ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಹೊಸ ಹೊಸ ಪ್ರಯೋಗಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಪ್ರಗತಿಸಾಧಿಸಲು ಈ ಯೋಜನೆ ತುಂಬಾ ಸಹಾಯಕಾರಿಯಾಗಿದೆ. ಪ್ರೇರಣಾ ಸಾಧನೆಗಳಿಗೆ ಪ್ರೇರಣೆಯಾಗಲಿದೆ. ಹೊಸ ಜ್ಞಾನ–ವಿಜ್ಞಾನ ಮತ್ತು ತತ್ವಜ್ಞಾನಗಳ ಕ್ಷೇತ್ರಕ್ಕೆ ಕೆಳಗೆ ತಿಳಿಸಿದ ಸಾಧಕಿಯರೊಬ್ಬರ ಬದುಕು ರೇಂಜರ್‌ಗಳಿಗೆ ಮಾದರಿಯಾಗಲಿ.

ಶಸ್ತ್ರ ಚಿಕಿತ್ಸೆ ಇಲ್ಲದೆ, ಹೃದಯದ ರಂಧ್ರ ಮುಚ್ಚಿದ ಹೆಗ್ಗಳಿಕೆಗೆ ಪಾತ್ರರಾದ ಕರ್ನಾಟಕದ ಪ್ರಥಮ ಮಹಿಳೆ ಮಕ್ಕಳ ಹೃದ್ರೋಗ ತಜ್ಞೆ ಡಾ. ವಿಜಯಲಕ್ಷ್ಮಿ **ಬಾಳೇಕುಂದ್ರಿ**ಯವರು ಆದರ್ಶಕ್ಕೆ ನಿದರ್ಶನ. ಅವರ ಯಶಸ್ಸಿನ ಯಶೋಗಾಥೆ ಯುವತಿಯರಿಗೆ ಸ್ಫೂರ್ತಿದಾಯಕ. ಹುಟ್ಟೂರು ಬೆಳಗಾವಿ. ವೈದ್ಯಕೀಯ ಶಿಕ್ಷಣ ಹುಬ್ಬಳ್ಳಿ ಮತ್ತು ಸ್ನಾತಕೋತ್ತರ ಪದವಿಯನ್ನು ಬೆಂಗಳೂರಿನಲ್ಲಿ ಮುಗಿಸಿದರು. ಬೆಂಗಳೂರಿನ ಇ.ಎಸ್.ಐ. ಆಸ್ಪತ್ರೆಯಲ್ಲಿ ಸೇವೆ ಆರಂಭಿಸಿ, ನಂತರ ಬೆಂಗಳೂರಿನ ಶ್ರೀ ಜಯದೇವ ಆಸ್ಪತ್ರೆಯಲ್ಲಿ ಮಕ್ಕಳ ಹೃದ್ರೋಗ ತಜ್ಞೆಯಾಗಿ, 45 ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿದ್ದಾರೆ. ಆದರ್ಶ ಗೃಹಿಣಿಯಾಗಿ, ಮಾತೆಯಾಗಿ, ದೇಶ ವಿದೇಶಗಳಲ್ಲಿ ತಮ್ಮ ಜ್ಞಾನ ಕ್ಷೇತ್ರದಲ್ಲಿ ಪ್ರಶಸ್ತಿ ಪಡೆದರೂ, ತಾಯ್ನಾಡಿನ ಅಪಾರ ಪ್ರೇಮಕ್ಕನುಸಾರ ತಮ್ಮ ವೃತ್ತಿಯನ್ನು ಇಲ್ಲೇ ಕೈಗೊಂಡು ಶ್ರೇಷ್ಠ ಸಾಧಕಿ ಇವರಾಗಿದ್ದಾರೆ. ಬಾಲ್ಯದಲ್ಲಿ ತಂದೆ, ತಾಯಿ, ಅಜ್ಜಿಯರ ಪ್ರಭಾವ ಪೂರ್ಣ ಮಾತುಗಳಿಂದ ಬದುಕನ್ನು ಪರಿಪೂರ್ಣತೆಯತ್ತ ನಡೆಸಿದ ದಿಟ್ಟ ಮಹಿಳೆಯೆಂದರೆ ತಪ್ಪಾಗದು. 'ಅರಿವಿನ ಬೆಳಕನ್ನು

ತೋರಿಸು ಗುರುವೇ' ಎಂಬ ತತ್ವಾಧಾರದ ಮೇಲೆ ಜೀವನದ ಬೆಳಕನ್ನು ಕಂಡವರು. **"Be Sincere, Be Honest and Every thing will follow"** ಎಂಬ ಉಕ್ತಿಯೇ ಅವರ ಸಾಧನೆಯ ತಂತ್ರ.

ಸ್ತೆತಾಸ್ಕೋಪ್ ಹಿಡಿದ ಕೈ ಲೇಖನಿಯನ್ನು ಹಿಡಿದದ್ದು ಇವರ ಅಪಾರ ಪ್ರತಿಭೆಗೆ ಸಾಕ್ಷಿ. ಆರೋಗ್ಯ ಲೇಖನಗಳ ಅನೇಕ ಕೃತಿಗಳನ್ನು ಬರೆದಿದ್ದಾರೆ. ಜೀವನ ಸಂಜೀವಿನಿ, ಜೀವನ್‌ಮುಕ್ತಿ ಹಾಗೂ ಇತರ ತತ್ವಜ್ಞಾನಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಬರೆದು ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇಂಗ್ಲಿಷ್‌ನಲ್ಲೂ ಆರೋಗ್ಯಕ್ಕೆ ಸಂಬಂಧಪಟ್ಟ ಪುಸ್ತಕಗಳನ್ನು ಬರೆದಿದ್ದು, ವಿದೇಶಗಳಲ್ಲಿ ಹೆಸರುವಾಸಿಯಾಗಿವೆ. ಜೀವನದಲ್ಲಿ ಎಷ್ಟೇ ಕಷ್ಟ ಬಂದರೂ ಎದುರಿಸುವ ಶಕ್ತಿ ಕೊಡು ದೇವರೆ ಎಂದು ಬೇಡುವ ಮನಸ್ಸಿನ, ವೈದ್ಯಲೋಕದ ತಾರೆಯ ಮಾತಿನಂತೆ **"ಜ್ಞಾನದಿಂದ, ವಿಜ್ಞಾನದ ದಾರಿಯಲ್ಲಿ, ತತ್ವಜ್ಞಾನವನ್ನು ಅಳವಡಿಸಿಕೊಳ್ಳುವ ಬದುಕು ಪರಿಪೂರ್ಣತೆಯತ್ತ ಸಾಗುತ್ತದೆ"** ಎನ್ನುತ್ತಾರೆ. ಇಂತಹ ಸಾಧಕಿಯರು ರೇಂಜರ್‌ಗಳಿಗೆ ಪ್ರೇರಣೆಯಾಗುವುದರಲ್ಲಿ ಅನುಮಾನವಿಲ್ಲ!

(iv) ಆರೋಗ್ಯ ಆನಂದ

ಆರೋಗ್ಯ ಭಾಗ್ಯ ಯಾರಿಗೆ ಬೇಕಿಲ್ಲ? **"ಬದುಕು ಆರೋಗ್ಯದಿಂದ ಇದ್ದಾಗ ಮಾತ್ರ ಆನಂದದ ಕಡೆಗೆ ಪಯಣ ಸಾಧ್ಯ"**.

ಸಾಮಾನ್ಯ ಆರೋಗ್ಯದ ಬಗ್ಗೆ ವಿದ್ಯಾರ್ಥಿಗಳಿಗೆ ಶಾಲಾ ಪಾಠ ಪ್ರವಚನಗಳಲ್ಲಿ ತಿಳಿಸಲಾಗಿರುತ್ತದೆ. ಆದರೆ ಪ್ರಾಯದ ಹೆಣ್ಣು ಮಕ್ಕಳ ಆರೋಗ್ಯದ ಮಾಹಿತಿ ವಿಭಿನ್ನವಾಗಿದ್ದು, ನಾನಾ ಬಗೆಯ ಸಮಸ್ಯೆಗಳಿದ್ದು, ಕೆಲವು ಹೆಣ್ಣು ಮಕ್ಕಳಿಗೆ ಅವುಗಳು ಪ್ರಶ್ನಾರ್ಥಕವಾಗಿರುತ್ತವೆ. ಪಡೆದುಕೊಂಡ ಅಲ್ಪಸ್ವಲ್ಪ ಮಾಹಿತಿಗಳಿಗಿಂತ ಖುದ್ದಾಗಿ ವಿಶೇಷ ತಜ್ಞರಿಂದ ಆರೋಗ್ಯ ಮಾಹಿತಿಯನ್ನು ನೀಡಲು ಪ್ರೇರೇಪಿಸುವ ಪ್ರೇರಣಾ ಕಾರ್ಯಕ್ರಮವು ಅರ್ಥಪೂರ್ಣ.

ಪ್ರಸ್ತುತ ಯುವ ಪೀಳಿಗೆ ತಮ್ಮ ದಿನಚರಿಯಲ್ಲಿ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸುವುದಿಲ್ಲ. ಮೊಬೈಲ್, ಮೆಸೇಜ್, ತಿರುಗಾಟ, ಹೊರಗಡೆ ಆಹಾರ ಸೇವನೆ, ಅಲ್ಪ ನಿದ್ರೆ, ಭಾವುಕತೆಗೆ ಬೇಗ ಒಳಗಾಗುವಿಕೆ, ಖಿನ್ನತೆ, ಬೇಸರ...... ಹೀಗೆ ಹತ್ತಾರು ಒತ್ತಡಗಳಿಂದ ಆರೋಗ್ಯದಿಂದ ದೂರ ಸರಿಯುತ್ತಾರೆ. 'ಪ್ರೇರಣಾ' ಆಪ್ತ ಸಲಹೆ ನೀಡುವ ವೈದ್ಯರ ಮೂಲಕ ಈ ಒತ್ತಡದ ಬದುಕಿಗೆ ತಿಲಾಂಜಲಿ ನೀಡುವ ಸೂಚನೆಗಳನ್ನು ಕಾರ್ಯಕ್ರಮಗಳ ಮೂಲಕ ಕೈಗೊಂಡು ಸೂಕ್ತ ಮಾರ್ಗದರ್ಶನ ನೀಡಲು ಅವಕಾಶವಾಗುತ್ತದೆ.

ಪ್ರಾಯದ ಹೆಣ್ಣು ಮಕ್ಕಳಿಗೆ ಶಾರೀರಿಕ ಆರೋಗ್ಯದ ಮಾಹಿತಿಯು ಅತ್ಯಮೂಲ್ಯ. ಆಕೆಗೆ ದೈಹಿಕವಾಗಿ ಅನೇಕ ಬದಲಾವಣೆಗಳಾಗುತ್ತವೆ. ತಿಂಗಳ ಋತುಚಕ್ರದ ಬಗ್ಗೆ, ಹೊಟ್ಟೆ ನೋವು, ನಿರಂತರ ರಕ್ತಸ್ರಾವ, ಆಹಾರ ಸೇರದಿರುವಿಕೆ, ಸುಸ್ತು ಇನ್ನೂ ಅನೇಕ ಬಗೆಯ ಅನಾರೋಗ್ಯ ಕಾಣಿಸಿಕೊಳ್ಳುತ್ತದೆ. ಹೆಣ್ಣು ಮಕ್ಕಳಿಗೆ ತಾಯಿಯಿಂದ ಅಥವಾ ಮನೆಯ ಹಿರಿಯರಿಂದ ಶಾರೀರಿಕ ಬೆಳವಣಿಗೆಯ ಸೂಕ್ತ ಜ್ಞಾನ ದೊರೆತಿರುವುದಿಲ್ಲ. ಕೆಲವು ಕುಟುಂಬಗಳಲ್ಲಿ ಅಂಥ ಸಂಪ್ರದಾಯಗಳು ರೂಢಿಯಲ್ಲಿರುತ್ತವೆ. ವೈಜ್ಞಾನಿಕವಾಗಿ ಸಮರ್ಪಕವಾದ ಅರಿವು ಇರುವುದಿಲ್ಲ. ಋತುಚಕ್ರವೊಂದು ಶಾಪ, ಅಸಹ್ಯ, ಬೇಸರ, ಜಿಗುಪ್ಸೆ ಎಂಬ ಭಾವನೆಯನ್ನು ಸಾಕಷ್ಟು ಹೆಣ್ಣು ಮಕ್ಕಳು ತಳೆದಿರುತ್ತಾರೆ. ಅಂತಹ ಹೆಣ್ಣು ಮಕ್ಕಳಿಗೆ ಅದೊಂದು ಮಹತ್ವದ ಹಾಗೂ ತಾಯ್ತನದ ಸೂಚಕಾಂಶಗಳೆಂದು ವಿಶೇಷ ಮಾಹಿತಿಯನ್ನು ನೀಡುವ ಅವಶ್ಯಕತೆ ಇರುತ್ತದೆ. ಇಂತಹ ಸಮಯದಲ್ಲಿ ಯುವತಿಯರಿಗೆ ಆರೋಗ್ಯದ ಮಾಹಿತಿಯ ಅವಶ್ಯಕತೆಯಿರುತ್ತದೆ. ಅನವಶ್ಯಕವಾಗಿ ತೆಗೆದುಕೊಳ್ಳುವ ಕೆಲವು ಮಾತ್ರೆಗಳಿಂದಾಗುವ ಅನಾಹುತ, ತೊಂದರೆಗಳ ಮಾಹಿತಿಗಳನ್ನು ಪಡೆಯುವುದು

ಒಳಿತು. ಆಕೆಯ ಗರ್ಭಕೋಶದ ರಕ್ಷಣೆಯ ಮಾಹಿತಿ, ಲೈಂಗಿಕ ಶಿಕ್ಷಣದ ವಿವರಣೆ, ಈ ವಯಸ್ಸಿನಲ್ಲಿ ಮಾನಸಿಕ ಪ್ರಬುದ್ಧತೆ, ಗಂಡುಮಕ್ಕಳೊಂದಿಗೆ ಹಿತ-ಮಿತ ವರ್ತನೆ, ಇವೆಲ್ಲದರ ಜ್ಞಾನ ವೈಜ್ಞಾನಿಕವಾಗಿ ಹೆಣ್ಣುಮಕ್ಕಳಿಗೆ ದೊರೆಯಲೇಬೇಕು. ಏಡ್ಸ್ ರೋಗಕ್ಕೆ ಕಾರಣ, ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮ ಹಾಗೂ ಪರಿಹಾರಗಳ ಬಗ್ಗೆ ತಿಳುವಳಿಕೆ ಬೇಕಾಗುತ್ತದೆ. ನಾನಾ ಕಾರಣಗಳಿಂದ ಹದಗೆಡುತ್ತಿರುವ ಸಮಾಜದಲ್ಲಿ ಧೈರ್ಯದಿಂದ ಆರೋಗ್ಯವಂತಳಾಗಿ ಬದುಕಲು ಆಯಾ ಪ್ರಾದೇಶಿಕ ಪ್ರಸೂತಿ ತಜ್ಞೆಯರ ಮೂಲಕ ಹಾಗೂ ಇತರ ಕ್ಷೇತ್ರಗಳ ಸಂಪನ್ಮೂಲ ವ್ಯಕ್ತಿಗಳಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಾರ್ಗದರ್ಶನ ನೀಡುವ ಪ್ರೇರಣಾ ಕಾರ್ಯಕ್ರಮವು ಯುವತಿಯರ ಬಾಳಿಗೆ ಆರೋಗ್ಯ – ಆನಂದ ತರುವ ಒಂದು ಮಹತ್ವದ ನಡಿಗೆಯಾಗಿ "ಆರೋಗ್ಯವೇ ಭಾಗ್ಯ" ವಾಗಿರಲಿ ಎಂಬುದು ಪ್ರೇರಣಾದ ಆಶಯ.

ಯೋಗ, ವ್ಯಾಯಾಮ, ಸ್ಕೌಟ್-ಗೈಡ್‌ನ ಸಾಂಸ್ಕೃತಿಕ ಕಾರ್ಯಕ್ರಮ, ಶಿಬಿರವಾಸ, ಪ್ರಕೃತಿಯೊಂದಿಗೆ ಒಡನಾಟ ಮುಂತಾದ ಸಂತಸ ಚಟುವಟಿಕೆಗಳು, ಆರೋಗ್ಯ ಮತ್ತು ಆನಂದಪ್ರದವಾಗಿರುತ್ತದೆ. ಬೇಡನ್ ಪೊವೆಲ್‌ರ ಬಿ.ಪಿ.ಸಿಕ್ಸ್ ವ್ಯಾಯಾಮವು ಆತ್ಮರಕ್ಷಣೆಯ ಮೂಲಕ ಯುವಪೀಳಿಗೆಗೆ ಸದೃಢ ದೇಹ ಮತ್ತು ಮನಸ್ಸನ್ನು ಹೊಂದಲು ಸಹಾಯಕವಾಗುತ್ತದೆ. ಆದುದರಿಂದಲೇ ಪ್ರೇರಣಾ ಕಾರ್ಯಕ್ರಮ ಯುವತಿಯರಿಗೆ ಅತ್ಯವಶ್ಯಕ.

(v) ಸಬಲತೆ–ಸ್ವ ಅರಿವು

ಹೆಣ್ಣು ಭ್ರೂಣ ಹತ್ಯೆಯ ಕಾರಣದಿಂದ ಹೆಣ್ಣು ಮಕ್ಕಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ ಎಂಬುದು ಸರ್ವವಿದಿತ. ಹೆಣ್ಣು ಮಕ್ಕಳನ್ನು ಸಾಕುವ, ಬೆಳೆಸುವ ಜವಾಬ್ದಾರಿ ತುಂಬಾ ಕ್ಲಿಷ್ಟಕರವೆಂದರೂ ತಪ್ಪಾಗದು. ದೇಶದ ಇಂದಿನ ಸಾಮಾಜಿಕ ಪರಿಸ್ಥಿತಿಯಲ್ಲಿ, ರಕ್ಷಣೆಯ ಕೊರತೆ ದೃಷ್ಟಿಯಲ್ಲಿ, ಮುಗ್ಧ ಹೆಣ್ಣು ಮಕ್ಕಳ ಮನೋಭೂಮಿಕೆಯಲ್ಲಿ, ಅಸಹಾಯಕ ಪರಿಸ್ಥಿತಿಯ, ನಾನಾ ಕಾರಣಗಳ ಸುಳಿಯಲ್ಲಿ ಸಿಲುಕುವ ಹೆಣ್ಣು ಮಕ್ಕಳ ಬದುಕು ನೇರವಾಗಲು, ಅರಿವಿನಿಂದ ಕೂಡಲು ಸಬಲೀಕರಣ ಅತಿ ಮುಖ್ಯವಾದುದು. ಜೊತೆಗೆ ತನ್ನತನದ ಅರಿವು, ಜಾಗ್ರತಾ ಮನೋಭಾವ, ಧೈರ್ಯ, ಸಾಹಸಗಳಿಗೆ ಮೊರೆ ಹೋಗುವ ಕಾಲ ಇಂದಿನದ್ದಾಗಿದೆ. ತನ್ನ ರಕ್ಷಣೆಯ ಹೊಣೆಯನ್ನು ತಾನೇ ನೋಡಿಕೊಳ್ಳುವ ಸನ್ನಿವೇಶಗಳು ಮಾನಸಿಕವಾಗಿ, ಬೌದ್ಧಿಕವಾಗಿ, ಸಾಮಾಜಿಕವಾಗಿ ಹಾಗೂ ಧಾರ್ಮಿಕವಾಗಿಯೂ ಆಕೆಯ ಪಾಲಿಗಿದೆ ಎಂಬುದರಲ್ಲಿ ಕಿಂಚಿತ್ತೂ ಸಂದೇಹವಿಲ್ಲ!

ಸಬಲತೆಗಾಗಿ ಕರಾಟೆ, ಆತ್ಮ ರಕ್ಷಣಾ ತಂತ್ರಗಳು ಆಕೆಗೆ ಅನಿವಾರ್ಯ ಕಲಿಕೆಗಳಾಗಿವೆ. ಈ ಕುರಿತು **'ಪ್ರೇರಣಾ'** ಕಾರ್ಯಕ್ರಮಗಳು ಹೆಚ್ಚು ಒತ್ತು ನೀಡುತ್ತಿವೆ. ಸಮಸ್ಯೆಗಳ, ಸನ್ನಿವೇಶಗಳ, ಅನಿರೀಕ್ಷಿತ ಘಟನೆಗಳ ಕಪಿಮುಷ್ಠಿಯಿಂದ ಹೊರಬರುವಂತಹ ಪರಿಹಾರ ಒದಗಿಸುವ ಯೋಜನೆಗಳಿಗೆ, ಮಾಹಿತಿಗಳಿಗೆ ಇಲ್ಲಿ ಅವಕಾಶ ನೀಡಲಾಗುತ್ತದೆ.

ಹೆಣ್ಣು ತಾನು ಅಬಲೆಯಲ್ಲ ಸಬಲೆ ಎಂದು ಅರಿವನ್ನುಂಟು ಮಾಡುವುದೇ, ಶಕ್ತಿ–ಸಾಮರ್ಥ್ಯ ತುಂಬುವುದೇ **ಪ್ರೇರಣಾ.** ಸಬಲತೆಯೊಂದಿಗೆ ಸ್ವ ಅರಿವಿನ ಅಸ್ಮಿತೆ ಅವಳದಾಗಲು ಪ್ರೇರಣಾ ಬೇಕೇ ಬೇಕು. ಹೀಗೊಂದು ಸ್ತ್ರೀಯ ಛಲದ ಬದುಕಿನ ಸಿಂಹಾವಲೋಕನ ಇಲ್ಲಿ ಕೊಡಲಾಗಿದೆ.

ಬೆಟ್ಟದಂತಹ ಛಲದ ಸಿಂಹಿಣಿ, ಸೋಲಿಗೆ ಶರಣಾಗದ ಸರದಾರ್ತಿ, ವಾಲಿಬಾಲ್ ಕ್ರೀಡಾಪಟು, ಕೃತಕ ಕಾಲಿನ ಅಂಗವಿಕಲ ಮಹಿಳೆ ಭಾರತೀಯ ಪರ್ವತಾರೋಹಿಯೇ **ಶ್ರೀಮತಿ ಅರುಣಿಮಾ ಸಿನ್ಹಾ.** ಉತ್ತರ ಪ್ರದೇಶದಲ್ಲಿ 20.7.1988ರಲ್ಲಿ ಜನಿಸಿದರು.

ಏಪ್ರಿಲ್ 11, 2011. ಪದ್ಮಾವತಿ ಎಕ್ಸ್‌ಪ್ರೆಸ್, ರಾತ್ರಿ ಪ್ರಯಾಣ. ಅನಿರೀಕ್ಷಿತವಾಗಿ ದರೋಡೆಕೋರರು ರೈಲಿನೊಳಗೆ ನುಗ್ಗಿ, ಪ್ರಯಾಣಿಕರನ್ನು ಬೆದರಿಸುತ್ತಿದ್ದು, ಅರುಣಿಮಾರವರ ಚೀಲ ಮತ್ತು ಕೊರಳಿನಲ್ಲಿದ್ದ ಚಿನ್ನದ ಸರವನ್ನು ಕಿತ್ತುಕೊಳ್ಳಲು

ಪ್ರಯತ್ನಿಸಿದರು. ಅದಕ್ಕೆ ಆಕೆ ಪ್ರತಿರೋಧಿಸಿದಳು. ಭೋಗಿಯಲ್ಲಿದ್ದ ಪ್ರಯಾಣಿಕರು ಭಯದಿಂದ ಸುಮ್ಮನೆ ಕುಳಿತಿದ್ದರು. ಅರುಣಿಮಾ ತನ್ನ ಸರವನ್ನು ಗಟ್ಟಿಯಾಗಿ ಹಿಡಿದು ದರೋಡೆಕೋರರನ್ನು ಪ್ರತಿಭಟಿಸಿದಾಗ, ಕೋಪಗೊಂಡ ಕಳ್ಳರು ಆಕೆಯನ್ನು ರೈಲಿನಿಂದ ಹೊರಗೆ ತಳ್ಳಿದರು. ಅಲ್ಲೇ ಪಕ್ಕದ ಸಮಾನಾಂತರ ಹಳಿಯ ಮೇಲೆ ಬಿದ್ದ ಆಕೆಗೆ ಏಳಲು ಆಗಲಿಲ್ಲ. ಆಗಲೇ ಮತ್ತೊಂದು ರೈಲು ಆಕೆಯ ಕಾಲುಗಳ ಮೇಲೆ ಚಲಿಸಿಯೇ ಬಿಟ್ಟಿತು. ಕಿರುಚಾಡಿದಳು, ಕೂಗಿದಳು ಕಡೆಯಲ್ಲಿ ಮೌನವಾಗಿದ್ದಳು, ನಿಶ್ಚೇತನಳಾದಳು. ಮುರಿದ ಪುಡಿಯಾದ ಕಾಲುಗಳು. ಆ ರಾತ್ರಿ ಹಲವಾರು ರೈಲುಗಳು ಆಕೆಯ ಕಾಲ ಮೇಲೆ ಹಾದುಹೋಗಿದ್ದವು. ರಕ್ತದ ಮಡುವು, ಅಸಹಾಯಕಳಾಗಿದ್ದಳು. ಸುತ್ತಲೂ ಕಗ್ಗತ್ತಲು. ಅವಳ ಕರೆಗೆ ಓಗೊಡಲು ಯಾರೂ ಇರಲಿಲ್ಲ. ಇಲಿಗಳು ಬಂದು ಕಾಲಿನಮಾಂಸವನ್ನು ತಿನ್ನುತ್ತಿದ್ದವು. ಆದರೂ ಧೈರ್ಯಗೆಡಲಿಲ್ಲ. ಬೆಳಗ್ಗೆ ಆ ಊರಿನ ಗ್ರಾಮಸ್ಥರು ಆಕೆಯನ್ನು ಆಸ್ಪತ್ರೆಗೆ ಸೇರಿಸಿದರು. ಶಸ್ತ್ರ ಚಿಕಿತ್ಸೆ ನಡೆಯಿತು. ಮುಂದೆ ಉತ್ತಮ ಚಿಕಿತ್ಸೆಯಿಂದ ಕೃತಕ ಕಾಲುಗಳನ್ನು ಜೋಡಿಸಲಾಯಿತು. ಭವಿಷ್ಯದ ಬದುಕಿನ ದಿನಗಳನ್ನು ನೆನೆದು ಕಣ್ಣೀರಿಟ್ಟಳು.

ಆದರೆ ಬದುಕು ಬದಲಾಗಲು ಅವಕಾಶಗಳು ಹೇಗೆ ಸಾಧ್ಯ ಎನ್ನುವುದಕ್ಕೆ **ಶ್ರೀಮತಿ ಅರುಣಿಮಾ ಸಿನ್ಹಾಳ** ಬದುಕೇ ಉದಾಹರಣೆ. ಆಸ್ಪತ್ರೆಯಲ್ಲಿದ್ದಾಗ, ಪೇಪರ್ ಓದುತ್ತಿದ್ದಾಗ **ಶ್ರೀಮತಿ ಬಚೇಂದ್ರಿಪಾಲ್**, ಭಾರತೀಯ ಪರ್ವತಾರೋಹಿಯ ಸಾಧನೆ–ಸಂಕಲ್ಪಗಳು ಅರುಣಿಮಾಳ ಮೇಲೆ ತುಂಬಾ ಪ್ರಭಾವ ಬೀರಿತು. ತಾನೂ ಪರ್ವತಾರೋಹಣ ಮಾಡಬೇಕೆಂದು ತೀರ್ಮಾನಿಸಿದಳು. ಸಮಾಜದ ಅವಮಾನ, ನಿಂದನೆಯ ಮಾತುಗಳು, ಟೀಕೆ, ಟಿಪ್ಪಣಿಗಳಿಗೆ ಧೈರ್ಯಗುಂದದೆ ಮುಂದಿನ ದಿನಗಳಲ್ಲಿ ತನ್ನ ಸಾಧನೆಯೇ ಸಮಾಜಕ್ಕೆ ಉತ್ತರಿಸುತ್ತದೆ ಎಂದು ನಿರ್ಧರಿಸಿದಳು. ಮುಂದೆ ಪರ್ವತಾರೋಹಣೆಗೆ ತಯಾರಿ ನಡೆಸಿದಳು. ಅತೀ ಕಷ್ಟಕರ ದಿನಗಳು. ಮೌಂಟ್ ಎವರೆಸ್ಟ್ ಏರುವ ಕನಸು. ಪ್ರಯತ್ನ ಮುಂದುವರೆಯಿತು. ಸತತ ಸಿದ್ಧತೆಯೊಂದಿಗೆ ಪರ್ವತ ಏರಲು ಆರಂಭಿಸಿ, ಸಾಕಷ್ಟು ಭಾರವನ್ನು ಬೆನ್ನಮೇಲೆ ಹೊತ್ತು ಒಂದೊಂದೇ ಹೆಜ್ಜೆ ಮೇಲೆ ಮೇಲೆ ಏರುತ್ತಿತ್ತು. ಜೊತೆಗಿದ್ದ ಕೆಲವರು ಹಿಮದಲ್ಲಿ ಸಾವನ್ನಪ್ಪಿದ್ದನ್ನು ಕಣ್ಣಾರೆ ನೋಡುತ್ತಿದ್ದಳು. ಕೃತಕ ಕಾಲುಗಳು, ಆಯತಪ್ಪಿ ಬೀಳಬಹುದಾದ ಸನ್ನಿವೇಶ, ಆಯಾಸದ ಶರೀರ, ತನ್ನ ಆಸೆ ಕೈಗೂಡುವುದು ಅನುಮಾನವೆಂಬ ಭೀತಿ ಆಕೆಯನ್ನು ಕಾಡುತ್ತಿತ್ತು. ಆದರೂ **'ಧೈರ್ಯಂ ಸರ್ವತ್ರ ಸಾಧನಂ'** ಎಂಬ ಉಕ್ತಿಯಂತೆ ಅವಳನ್ನು ಯಶಸ್ಸಿನತ್ತ ಸಾಗಿಸಿದ್ದು ಆಕೆಯ ದೃಢ ವಿಶ್ವಾಸ. ಕಡೆಗೂ ಎವರೆಸ್ಟ್ ಪರ್ವತದ ತುತ್ತತುದಿಯನ್ನೇರಿ ಭಾರತದ ಬಾವುಟವನ್ನು ಹಾರಿಸಿದಾಗ ಆಕೆಗಾದ ಆನಂದ ಅವರ್ಣನೀಯ. ಸಾರ್ಥಕ ಬದುಕಿನ ಸಬಲ ಸ್ವ–ಅರಿವಿನ ಮಹಾಮೇರುಕೀರ್ತಿ

ಆಕೆಯ ಕೈವಶವಾಯಿತು. ಮುಂದೆ ಪ್ರಪಂಚದ ಅನೇಕ ಪರ್ವತಾರೋಹಣ ಕೈಗೊಂಡಳು. ಈಗ ಇವರು **ಶ್ರೀಯುತ ಗೌರವ ಸಿಂಗ್** ರವರೊಂದಿಗೆ ವಿವಾಹವಾಗಿ ಸಂಸಾರಸ್ಥೆ. ಹಾಗೂ ಭಾರತ ಸರ್ಕಾರ ನೀಡುವ **ಪದ್ಮಶ್ರೀ ಪ್ರಶಸ್ತಿ** ಪುರಸ್ಕೃತರು.

ಇಂತಹ ಸಾಹಸ, ರೋಮಾಂಚಕ ಯಶೋಗಾಥೆಗಳು 'ಪ್ರೇರಣಾ' ಯುವತಿಯರ ಭವಿಷ್ಯದ ಆಧಾರಸ್ಥಂಭವಾಗಿರಲಿ ಎಂಬುದು ಆಶಯ.

(vi) ಸಮಾಜ ಸೇವೆ – ಸಾಧನೆ

ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಮೂಲ ಸ್ವರೂಪ 'ಕಾಯಾ, ವಾಚಾ, ಮನಸಾ' ಶುದ್ಧವಾಗಿದ್ದು ಬೇರೆಯವರಿಗೆ ಸಹಾಯ ಮಾಡುವುದೇ ಆಗಿದ್ದು, ಪ್ರೇರಣಾದಲ್ಲಿ ಸೇವೆ ಮತ್ತು ಸಾಧನೆಗೆ ಹೆಚ್ಚು ಪುಷ್ಠಿ ನೀಡುವ ಅಂಶವನ್ನು ಗಮನಿಸಬಹುದಾಗಿದೆ. ಉದಾ : ಸಮಾಜ ಸೇವೆ, ಗಿಡ ನೆಡುವುದು, ಅಂಗವಿಕಲರ ಸೇವೆ, ಅನಾಥಾಶ್ರಮ ಭೇಟಿ, ಸಂಘ ಸಂಸ್ಥೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಜನರಿಗೂ ಮತ್ತು ದೇಶಕ್ಕೂ ಒಳ್ಳೆಯದನ್ನು ಮಾಡುವುದು. **'ದೀಪದಿಂದ ದೀಪವ ಹಚ್ಚಬೇಕು ಮಾನವ'** ಎಂಬ ಉಕ್ತಿಯಂತೆ ಸಮಾಜದ ಕತ್ತಲೆಯನ್ನು ತೊಡೆದು ಹಾಕಿ ಬೆಳಕನ್ನು ತುಂಬಲು ತುಂಬು ಮನಸ್ಸಿನ ಸಮಾಜ ಸೇವಾ ಸಾಧಕರ ಬದುಕು ಇತರರಿಗೆ ಬೆಳಕಾಗುವುದು. ಸೇವಾ ಕಾರ್ಯವನ್ನು ಕೈಗೊಳ್ಳುವುದೇ ಈ ಚಳವಳಿಯ ಆದ್ಯ ಕರ್ತವ್ಯವಾಗಿದೆ. ಇದರಿಂದ ಯುವತಿಯರ ಬಾಳಿಗೆ ಸಾಧನೆ, ಸ್ವಾವಲಂಬನೆ, ಸ್ವಾಭಿಮಾನಾತ್ಮಕ ಭಾವನೆ ತಾನಾಗಿಯೇ ಚಿಗುರೊಡೆಯುವುದರಲ್ಲಿ ಸಂಶಯವಿಲ್ಲ. ಅದಕ್ಕಾಗಿಯೇ ಬೇಕು ಹೆಣ್ಣು ಮಕ್ಕಳಿಗೆ 'ಪ್ರೇರಣಾ'. ಸೇವೆಗಾಗಿ, ಸಾಧನೆಗಾಗಿ! ಇದೋ ಇಲ್ಲಿದೆ ಸಮಾಜ ಸೇವಾ ಸಾಧಕಿಯ ಬದುಕು.

ಭಾರತದ ಪ್ರಥಮ ಮಹಿಳಾ ಶಿಕ್ಷಕಿ ಎಂಬ ಕೀರ್ತಿಗೆ ಭಾಜನರಾಗಿ ಭಾರತದಲ್ಲಿ ಮೊದಲ ಮಹಿಳಾ ಶಾಲೆ ತೆರೆದ **ಖ್ಯಾತಿ ದಿ॥ ಸಾವಿತ್ರಿಬಾಯಿ ಪುಲೆಯವರದು.** ಸಾವಿತ್ರಿಬಾಯಿ ಪುಲೆ ಜನವರಿ 31, 1833ರಲ್ಲಿ ಮಹಾರಾಷ್ಟ್ರದ ಸತಾರಾ ಜಿಲ್ಲೆಯಲ್ಲಿ ಜನಿಸಿದರು. ತಮ್ಮ 10ನೇ ವಯಸ್ಸಿನಲ್ಲಿ 13 ವರ್ಷದ **ಜ್ಯೋತಿರಾವ್ ಪುಲೆ**ಯವರನ್ನು ಮದುವೆಯಾದರು. ಪತಿಯಿಂದ ಶಿಕ್ಷಣ ಪಡೆದರು. ತಾವು ಕಲಿತ ವಿದ್ಯೆಯನ್ನು ಸುತ್ತಮುತ್ತಲಿನ ಹೆಣ್ಣುಮಕ್ಕಳಿಗೆ ಕಲಿಸಿದರು. ಅವರು ಶಿಕ್ಷಣದ ಮೂಲಕ ಹೆಣ್ಣುಮಕ್ಕಳ ಜೀವನ ಉದ್ಧಾರವಾಗಬಲ್ಲದು ಎಂದು ಭಾವಿಸಿದ್ದರು. 1847ರಲ್ಲಿ ಸಾವಿತ್ರಿಬಾಯಿ –ಯವರು ಶಿಕ್ಷಕಿಯ ತರಬೇತಿ ಪಡೆದು 17ನೇ ವಯಸ್ಸಿನಲ್ಲಿ ಶಿಕ್ಷಕಿಯಾದರು. ನಂತರ ಕನ್ಯಾ ಶಾಲೆಯ ಪ್ರಧಾನ ಶಿಕ್ಷಕಿಯಾದರು. ಅಂದಿನ ಕಾಲದಲ್ಲಿ ಸ್ತ್ರೀಯೊಬ್ಬಳು ಶಿಕ್ಷಿಕಿಯಾಗುವುದು ಧರ್ಮಕ್ಕೂ, ಸಮಾಜಕ್ಕೂ ದ್ರೋಹ ಬಗೆದಂತೆ ಎಂದು ಅವರನ್ನು ನೋಡುವುದರ ಜೊತೆಗೆ ಅವರು ಶಾಲೆಗೆ ಹೊರಟಾಗ ಊರಿನವರು ಕೇಕೆ ಹಾಕಿ ನಗುತ್ತಿದ್ದರು, ಅವರ ಮೇಲೆ ಸೆಗಣಿ, ಕೆಸರು ಎರಚಿ ಕಲ್ಲನ್ನು ತೂರುತ್ತಿದ್ದರು. ಆದರೂ ಧೃತಿಗೆಡದೆ ತಮ್ಮ ಚೀಲದಲ್ಲಿ ಸದಾ ಇಟ್ಟುಕೊಂಡಿರುತ್ತಿದ್ದ ಸೀರೆಯನ್ನು, ಶಾಲೆ ತಲುಪಿದ ಕೂಡಲೇ ಮಕ್ಕಳು ಬರುವುದಕ್ಕೆ ಮೊದಲೇ ಬದಲಿಸುತ್ತಿದ್ದರು. ಯಾವ ಅವಹೇಳನಕ್ಕೂ ಬೇಸರಿಸುತ್ತಿರಲಿಲ್ಲ. ಅಂದಿನ ಬ್ರಿಟಿಷ್ ಸರ್ಕಾರದವರು ಈ ದಂಪತಿಗಳ ಕಾರ್ಯ ನಿರ್ವಹಣೆಯನ್ನು ಶ್ಲಾಘಿಸುತ್ತಿದ್ದರು.

ಅಂದಿನ ಸಮಾಜದಲ್ಲಿದ್ದ ಅನಿಷ್ಟ ಪದ್ಧತಿಗಳಾದ ಬಾಲ್ಯವಿವಾಹ, ಸತಿಸಹಗಮನ, ಕೇಶಮುಂಡನೆ ವಿರುದ್ಧ ಹೋರಾಡಿ ಮಹಿಳೆಯರಿಗೋಸ್ಕರ 14 ಶಾಲೆಗಳನ್ನು, ಅಬಲಾಶ್ರಮಗಳನ್ನು ಸ್ಥಾಪಿಸಿದರು. ಇವರ ಸಾಧನೆ–ಸೇವೆಗೆ ಬ್ರಿಟಿಷ್ ಸರ್ಕಾರ **'ಇಂಡಿಯನ್ ಫಸ್ಟ್ ಲೇಡಿ ಟೀಚರ್'** ಎಂದು ಬಿರುದು ನೀಡಿ ಗೌರವಿಸಿದರು. ಲೇಖಕಿಯಾಗಿ ಕವನಗಳನ್ನು, ಭಾಷಣ, ಸಂಪಾದಿತ ಕೃತಿಗಳನ್ನು ಬರೆದಿದ್ದರು. ಸರಳ ವಿವಾಹಗಳನ್ನು, ಕಾನೂನು ನೆರವನ್ನು ಪಡೆದು ವಿವಾಹಗಳನ್ನು ನೆರವೇರಿಸಿ ದಾಖಲೆ ಮಾಡಿದ್ದಾರೆ. ಹೀಗೆ ಕ್ರಾಂತಿಕಾರಿಯಾಗಿ ಸಮಾಜ ಸುಧಾರಣೆಯಲ್ಲಿ ತೊಡಗಿದ್ದರು.

ದಲಿತರಿಗೆ ನೀರಿನ ಸೌಕರ್ಯ, ಕೂಲಿ ಕಾರ್ಮಿಕರಿಗಾಗಿ ರಾತ್ರಿ ಪಾಳೆಯದ ಶಾಲೆ ನಡೆಸಿದರು. ವಿಧವೆಯ ಮಗುವೊಂದನ್ನು ದತ್ತು ಪಡೆದರು. 1897ರಲ್ಲಿ ಪ್ಲೇಗ್ ಮಾರಿಗೆ ಅನೇಕ ಜನರು ಬಲಿಯಾದರು. ಅವರ ಸೇವೆಯನ್ನು ಮಾಡುವುದರಲ್ಲಿ ತೊಡಗಿದರು. ಅವರೂ ಆ ಕಾಯಿಲೆಯ ಸೋಂಕಿಗೆ ತುತ್ತಾಗಿ ತಮ್ಮ ಬಾಳನ್ನು ಸಮಾಜ ಸೇವೆ–ಸಾಧನೆಗಾಗಿ ಮುಡಿಪಿಟ್ಟ ಸಾರ್ಥಕ ಬದುಕಿನ ಜೀವನ ವೃತ್ತಾಂತವು ನಮ್ಮ ಪ್ರೇರಣಾ ಕಾರ್ಯಕ್ರಮಕ್ಕೆ ಪ್ರೇರಣೆಯಾಗಿ ಯುವ ಜನಾಂಗಕ್ಕೆ ದಾರಿ ದೀವಿಗೆಯಾಗಲಿದೆ.

"ನಮ್ಮ ರಾಷ್ಟ್ರೀಯ ಆದರ್ಶಗಳು ತ್ಯಾಗ ಮತ್ತು ಸೇವೆ.
ದೇಹವನ್ನು ಈ ಎರಡು ಆದರ್ಶಗಳಲ್ಲಿ
ತೊಡಗಿಸಿದರೆ ಉಳಿದೆಲ್ಲವೂ ತಮಗೆ
ತಾವೇ ಸರಿಹೋಗುತ್ತವೆ."

– ಸ್ವಾಮಿವಿವೇಕಾನಂದ

(vii) ವೃತ್ತಿ–ಪ್ರವೃತ್ತಿ–ಆತ್ಮತೃಪ್ತಿ

ಪ್ರಸ್ತುತ ಜೀವಮಾನದಲ್ಲಿ ಸ್ತ್ರೀಯು ಆರ್ಥಿಕವಾಗಿ ಸ್ವಾವಲಂಬಿಯಾಗಲು, ಕುಟುಂಬದ ಹಿತರಕ್ಷಣೆಯ ಕಾಯಕ ನಿರ್ವಹಿಸಲು, ಸುಧಾರಿತ ಬದುಕಿಗೆ ಹೆಗಲು ಕೊಡಲು ವೃತ್ತಿಯು ಅನಿವಾರ್ಯತೆಯಾಗಿದೆ. ಮಹಿಳೆಯರು ಇಂದಿನ ದಿನಗಳಲ್ಲಿ ನಾನಾ ಬಗೆಯ ವೃತ್ತಿಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಜೊತೆಗೆ ಹೆಣ್ಣು ಮಕ್ಕಳಿಗೆ ಸಿಗುತ್ತಿರುವ ಉತ್ತಮ ಶಿಕ್ಷಣವು ಆಕೆಯ ಪ್ರತಿಭೆಗೆ ಪೂರಕವಾಗಿ ಪುರುಷರಿಗೆ ಸಮನಾಗಿ ಎಲ್ಲಾ ಕ್ಷೇತ್ರಗಳಲ್ಲೂ ಮಿರುಗುತ್ತಿದ್ದಾಳೆ. ಆರ್ಥಿಕವಾಗಿ ಸದೃಢವಾಗಿ ಸಬಲಳೂ ಆಗುತ್ತಿದ್ದಾಳೆ. ಇದು ಸಂತಸದ ಸಂಗತಿ. ಆದರೆ ಹಣ ಗಳಿಕೆಯಷ್ಟೇ ವೃತ್ತಿಯ ಉದ್ದೇಶವಾಗದೆ ಉತ್ತಮ ಪ್ರವೃತ್ತಿಯನ್ನು ಬೆಳೆಸಿಕೊಂಡು ತನ್ನ ಕೈಲಾದ ಮಟ್ಟಿಗೆ ಉತ್ತಮ ಹವ್ಯಾಸ, ಪರಹಿತ, ಸಾಮಾಜಿಕ ಸೇವಾ ಕಾರ್ಯಕ್ರಮಗಳಲ್ಲಿ ತನ್ನನ್ನು ತೊಡಗಿಸಿಕೊಂಡರೆ ಮಾತ್ರ ವೃತ್ತಿಯಲ್ಲಿ ನಿಜವಾದ ತೃಪ್ತಿ ಲಭಿಸುತ್ತದೆ. ಹಾಗಾಗಿ ಪ್ರವೃತ್ತಿಯು ಮಹತ್ವದ ಮೆಟ್ಟಿಲಾಗುತ್ತದೆ. ಹಣವು ಸುಖವನ್ನು ಕೊಡಬಹುದು. ಆದರೆ ಉತ್ತಮ ಪ್ರವೃತ್ತಿಯಿಂದ ಮನಸ್ಸಿಗೆ ಸಮಾಧಾನ, ಶಾಂತಿ, ನೆಮ್ಮದಿ ದೊರಕುತ್ತದೆ. ಹೀಗಿರುವ ಕಾರಣ ಯುವಪೀಳಿಗೆಗೆ ಬರೀ ವೃತ್ತಿಯ ಮಹತ್ವವಷ್ಟೇ ತಿಳಿಯುವುದಕ್ಕಿಂತ ಪ್ರವೃತ್ತಿಯ ಪ್ರಭಾವದಿಂದ ಉಂಟಾಗುವ ತೃಪ್ತಿಯ ಬಗ್ಗೆ ಮಾಹಿತಿ ಬೇಕಾಗುತ್ತದೆ. **"ಸರ್ವೇ ಜನೋ ಸುಖಿನೋ ಭವಂತು"** ಎನ್ನುವ ವಿಶಾಲ ಮನೋಭಾವನೆಯನ್ನು ಬೆಳೆಸಿಕೊಂಡು ಹಣದ ಸದ್ಬಳಕೆಯ ಪಾವಿತ್ರತೆಯನ್ನು ಕಂಡುಕೊಳ್ಳುವಂತಾಗುವ ಕಾರ್ಯಕ್ರಮಗಳನ್ನು **'ಪ್ರೇರಣಾ'** ನಿರೂಪಿಸುತ್ತದೆ. ಇಲ್ಲೊಬ್ಬ ಸಾಧಕಿಯ ಬದುಕು ಹೇಗೆ ತೃಪ್ತಿಕರವಾಗಿದೆ ಎಂಬುದನ್ನು ನಾವೆಲ್ಲ ಗಮನಿಸೋಣ.

ಇಂದು ನಮ್ಮೆಲ್ಲರ ಮನೆಯ, ಮನದ ಬಾಗಿಲನ್ನು ತಟ್ಟಿರುವ ಸರಳತೆ, ಸಜ್ಜನಿಕೆ, ಸಾಮಾನ್ಯರೊಡನೆ ಒಡನಾಟ, ಮುಖದಲ್ಲಿ ಮಂದಹಾಸ, ಕಳೆಗೂಡಿದ ವದನ, ದೃಢ ನಿಲುವು, ಜ್ಞಾನ ಸಂಪನ್ನೆಯಾಗಿರುವ ಹಾಗೂ **ಲೋಕೋಪಕಾರಕ್ಕೆ ಮತ್ತೊಂದು ಹೆಸರೇ ಶ್ರೀಮತಿ ಡಾ. ಸುಧಾ ಮೂರ್ತಿ** ಎಂದೇ ಪ್ರಸಿದ್ಧರಾಗಿದ್ದಾರೆ. ತಂತ್ರಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು ವೃತ್ತಿಯಲ್ಲಿ ಪ್ರಾಧ್ಯಾಪಕಿಯಾಗಿದ್ದು, ದೇಶ ವಿದೇಶಗಳಲ್ಲಿ ಪ್ರಖ್ಯಾತರಾಗಿರುವ ಹಾಗೂ ಇನ್ಫೋಸಿಸ್ ಫೌಂಡೇಷನ್ ಸ್ಥಾಪಿಸಿದ ಹೆಗ್ಗಳಿಕೆ ಶ್ರೀಮತಿ ಸುಧಾ ಮೂರ್ತಿಯವರಿಗೆ ಸಲ್ಲುತ್ತದೆ. ಅವರ ಉದ್ಯಮದಿಂದ ಸಾಕಷ್ಟು ಜನರಿಗೆ ಉದ್ಯೋಗಗಳು ದೊರೆಕಿರುವುದು ಪ್ರಶಂಸನೀಯವಾಗಿದೆ.

ಹಾವೇರಿ ಜಿಲ್ಲೆಯ ಶಿಗ್ಗಾವಿಯಲ್ಲಿ ಜನಿಸಿ ಆದರ್ಶ ಬದುಕಿನ ಗರಿಮೆಯನ್ನು ಮೈಗೂಡಿಸಿಕೊಂಡವರು. ಹುಬ್ಬಳ್ಳಿಯ ಬಿ.ವಿ.ಬಿ.ಕಾಲೇಜಿನಲ್ಲಿ ಇಲೆಕ್ಟ್ರಿಕಲ್

ಇಂಜಿನಿಯರಿಂಗ್ ಪದವಿ, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಸಂಸ್ಥೆಯಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಮೊದಲ ರ್‍ಯಾಂಕ್ ಪಡೆದ ಮೇಧಾವಿ. ಇನ್ಫೋಸಿಸ್ ಸಂಸ್ಥೆಯು ನಾಂದಿಗೆ ಕಾರಣರಾದ ಪತಿ **ಶ್ರೀ ಎನ್.ಆರ್. ನಾರಾಯಣಮೂರ್ತಿ**ಯವರಿಗೆ ತುಂಬು ಸಹಕಾರ ನೀಡಿದ ವಿಶಾಲ, ಹೃದಯವಂತ ಮಹಿಳೆ **ಶ್ರೀಮತಿ ಸುಧಾ ಮೂರ್ತಿ**. ಕೋಟಿಗಟ್ಟಲೆ ಹಣಕ್ಕೆ ವಾರಸುದಾರರಾದರೂ, ಸಾಮಾನ್ಯ ಮನೆಯಲ್ಲಿ ವಾಸ, ಸರಳ ಬದುಕು. ಮಾರುಕಟ್ಟೆಗೆ ಹೋಗಿ ತರಕಾರಿ ಖರೀದಿಸುವುದರಿಂದ ಹಿಡಿದು, ವರ್ಷಕ್ಕೊಮ್ಮೆ ದೇವಸ್ಥಾನದ ಎದುರು ಸ್ವತಃ ತಾವೇ ತರಕಾರಿ ಮಾರುವ ಸೇವೆ ಎಂತಹ ಅದ್ಭುತ! ಇಂತಹ ಸ್ತ್ರೀರತ್ನ ಸಮಾಜಕ್ಕೆ ನೀಡಿರುವ ಕೊಡುಗೆ ಅಗಣಿತ, ಅಪರಿಮಿತ. ಜೊತೆಗೆ ಸಾಹಿತ್ಯ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರವಾದದ್ದು. ಅವರ ಕೃತಿಗಳು ಪ್ರಸಿದ್ಧವಾಗಿವೆ. ಸಾರ್ವಜನಿಕ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜ ಸೇವೆಗೆ ಸದಾ ಸಿದ್ಧವಾಗಿದ್ದು, ಸತ್ಕಾರ್ಯಕ್ಕಾಗಿ, ಲೋಕೋಪಕಾರಕ್ಕಾಗಿ ಅವರ ಆದಾಯವನ್ನು ಮುಡಿಪಾಗಿಟ್ಟಿರುವುದು, ಇಡುತ್ತಿರುವುದು ಪ್ರಶಂಸನೀಯ. ಇದು ಅವರ ಪ್ರವೃತ್ತಿ. ಹಾಗೆಯೇ ಅದರಿಂದಲೇ ಅವರಿಗೆ ಆತ್ಮ ತೃಪ್ತಿ ದೊರೆತಿದೆ ಎಂದು ಅವರೇ ತಿಳಿಸುತ್ತಾರೆ. ಅನೇಕಾನೇಕ ಪ್ರಶಸ್ತಿಗಳು, ಸಮ್ಮಾನಗಳು ಅವರಿಗೆ ದೊರೆತರೂ ಲವಲೇಶವೂ ಲೆಕ್ಕಿಸದೆ **"ನಮ್ಮ ಕೆಲಸಗಳು ಮಾತನಾಡಬೇಕು ನಾವಲ್ಲ"** ಎಂಬ ವಿಶಾಲ ಮನಸ್ಸಿನ ಸುಧಾ ಮೂರ್ತಿಯವರ ಬದುಕಿನ ವೃತ್ತಿ–ಪ್ರವೃತ್ತಿ–ತೃಪ್ತಿಗಳು ನಮ್ಮ ಯುವತಿಯರಿಗೆ ಪ್ರೇರಣೆಯಾಗಲಿ, ತೃಪ್ತಿಕರ ಬದುಕು ಎಲ್ಲರದ್ದಾಗಲಿ.

(viii) ಹಸಿರು–ಉಸಿರು–ಚಿಗುರು

"ವೃಕ್ಷೋ ರಕ್ಷತಿ ರಕ್ಷಿತಃ" ಎಂಬ ಉಕ್ತಿ ವೃಕ್ಷಗಳನ್ನು ನಾವು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ. ಹಸಿರೇ ಉಸಿರು. ಜೀವಿಗಳಿಗೆ ಆಮ್ಲಜನಕವನ್ನು ನೀಡುವ ವೃಕ್ಷ ಮಾತೆಗೆ ನಮ್ಮೆಲ್ಲರಿಂದ ರಕ್ಷಣೆಯಾಗಬೇಕು. "ನನಗಾಗಿ, ನಿನಗಾಗಿ, ನಮ್ಮೆಲ್ಲರಿಗಾಗಿ ಮರ" ಎಂಬ ಘೋಷಣೆ ನಮ್ಮೆಲ್ಲರದಾಗಬೇಕು. ನಾಗರಿಕತೆಯ ನೆಪದಲ್ಲಿ ಭೋಗಜೀವನದತ್ತ ಸಾಗುತ್ತಿರುವ ಮನುಷ್ಯ, ಎಗ್ಗಿಲ್ಲದೆ ಕಾಡಿನ ನಾಶಕ್ಕೆ ಮುಂದಾಗಿದ್ದಾನೆ. ಒಂದು ಸಮೀಕ್ಷೆಯ ಪ್ರಕಾರ 7 ಜನರಿಗೆ ಒಂದು ಮರ ಮೀಸಲಾಗಿರುವ ಪರಿಸ್ಥಿತಿ ಬಂದೊದಗಿದೆ. ಮರಗಿಡಗಳ ಜೊತೆಗೆ ಪ್ರಾಣಿ ಪಕ್ಷಿಗಳೂ ಅಳಿವಿನಂಚಿಗೆ ಶರಣಾಗಿವೆ. ಈಗ ನಾವೆಲ್ಲರೂ ಎಚ್ಚೆತ್ತುಕೊಂಡು ಮುಂದಿನ ಪೀಳಿಗೆಯವರಿಗಾಗಿ ಹಸಿರನ್ನು ಹೆಚ್ಚಿಸಬೇಕು, ಗಿಡಗಳನ್ನು ನೆಡಬೇಕು, ಆರೈಕೆ ಮಾಡಬೇಕು. ಉಳಿಸಬೇಕು. ಇಂಗಾಲಾಮ್ಲವನ್ನು ತಾನು ತೆಗೆದುಕೊಂಡು ಆಮ್ಲಜನಕವನ್ನು ನಮಗಾಗಿ ಒದಗಿಸುತ್ತಿರುವ ವೃಕ್ಷಗಳಿಗೆ ಕಾಳಜಿ ವಹಿಸಿ, ಕಾಪಾಡಬೇಕು. ಈ ದಿಶೆಯಲ್ಲಿ ಯುವ ಪೀಳಿಗೆಗೆ ಸಾಕಷ್ಟು ಮಾಹಿತಿಗಳನ್ನು ನೀಡಲು ಪರಿಸರ ಜಾಗೃತಿ ಕಾರ್ಯಕ್ರಮ, ಕೆರೆ ಕಟ್ಟೆಗಳ ಉಳಿವು, ಬೀಜದುಂಡೆಗಳ ಹಾಗೂ ಬಿತ್ತನೆಯ ಕಾರ್ಯಕ್ರಮಗಳು, ಗಿಡ ನೆಡುವ ಕಾರ್ಯ, ಪರಿಸರ ದಿನಾಚರಣೆಗಳೊಂದಿಗೆ ಪ್ರೇರಣಾ ಕಾರ್ಯಕ್ರಮವು ಸ್ಕೌಟ್ಸ್ ಮತ್ತು ಗೈಡ್ಸ್ ನಿಯಮಕ್ಕೆ, ಕಾರ್ಯ ಚಟುವಟಿಕೆಗಳಿಗೆ ಕೈ ಜೋಡಿಸುತ್ತಿದೆ, ವೈವಿಧ್ಯಮಯ ಚಟುವಟಿಕೆಗಳ ಮೂಲಕ ಸಕ್ರಿಯವಾಗಿ ಪಾಲ್ಗೊಂಡು ಪರಿಸರದ ಉಳಿವಿಗೆ, ಹಸಿರು, ಉಸಿರಿಗೆ ಜೀವ ತುಂಬಲು ಪ್ರೇರಣಾ ಸಹಾಯಕವಾಗಿದೆ. ಹಾಗಾದರೆ ಈ ಕೆಲಸ ಅತೀ ಸುಲಭವೇ? ಬನ್ನಿ ಇಲ್ಲೊಬ್ಬ ಹಸಿರ ತಾಯಿಯ ಕಾಯಕವನ್ನು ಮೆಚ್ಚೋಣ.

ಹಸಿರೇ ಉಸಿರು ಎಂದಾಗ ನಮ್ಮ ಕಣ್ಣೆದುರಿಗೆ ನಿಲ್ಲುವ ಓದು ಬರಹ ಕಲಿಯದ, ತಾವು ಕೈಗೊಂಡ ಕಾಯಕಕ್ಕೆ ಮೌನದಿಂದ ಸಾಧನೆ ಮಾಡಿದ, ನಿಸ್ವಾರ್ಥ ಸೇವೆಯ ಕಣ್ಮಣಿಯೇ **ಸಾಲುಮರದ ತಿಮ್ಮಕ್ಕ**. ಬರೀ ಕರ್ನಾಟಕವಷ್ಟೇ ಅಲ್ಲ ಇಡೀ ದೇಶವೇ ತಿಮ್ಮಕ್ಕನನ್ನು ಕೊಂಡಾಡುವ ಆದರ್ಶ ಕೆಲಸ ಇವರದಾಗಿದೆ.

ತಿಮ್ಮಕ್ಕನವರು ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಜನಿಸಿ, 12ನೇ ವಯಸ್ಸಿಗೆ ಗೃಹಿಣಿಯಾಗಿ ಬೆಂಗಳೂರಿನ ಗ್ರಾಮಾಂತರ ಜಿಲ್ಲೆಯ ಮಾಗಡಿಯ ಹುಲಿಕಲ್ಲಿನ **ಬಿಕ್ಕಲ ಚಿಕ್ಕಯ್ಯ**ನವರೊಂದಿಗೆ ಸಂಸಾರ ನಡೆಸಿ, ಮಕ್ಕಳ ಸಂತಾನದಿಂದ ವಂಚಿತರಾದಾಗ ಬೇಸರಿಸದೆ ಸಮಾಜ ಸೇವೆಗೆ ಮುಂದಾದರು. ದನಕರುಗಳಿಗಾಗಿ

'ದೊಡ್ಡಿಸೇವೆ' ಕಾಯಕ ಕೈಗೊಂಡರು. ನಿರುಪಯುಕ್ತವಾಗಿ ಹರಿದು ಹೋಗುತ್ತಿದ್ದ ಮಳೆ ನೀರನ್ನು ಒಡ್ಡು ಕಟ್ಟಿ ಸಂಗ್ರಹಿಸಿ, ಪ್ರಾಣಿ, ಪಕ್ಷಿ ಹಾಗೂ ಗಿಡಮರಗಳಿಗೆ ಉಪಯುಕ್ತವಾಗುವಂತೆ ನೋಡಿಕೊಂಡರು. ಬೇಸಿಗೆಯ ರಣಬಿಸಿಲಿನಲ್ಲಿ ದಾರಿಹೋಕರಿಗೆ ಸಾಲುಮರಗಳನ್ನು ನೆಡುವ ಯೋಜನೆ ಕೈಗೊಂಡರು. **'ಮಕ್ಕಳಿಲ್ಲದಿದ್ದರೇನು ಗಿಡಮರಗಳೇ ನಮ್ಮ ಮಕ್ಕಳು'** ಎಂಬ ಆದರ್ಶ ಹೊಂದಿ ರಸ್ತೆಯ ಎರಡು ಬದಿ ಸಾಲು ಗಿಡಗಳನ್ನು, ಆಲದ ಮರದ ಟೊಂಗೆಗಳನ್ನು ನೆಟ್ಟರು. ನಾಲ್ಕೈದು ಕಿ.ಮೀ. ದೂರದಿಂದ ನೀರನ್ನು ಹೊತ್ತು ತಂದು ಸತಿಪತಿಗಳಿಬ್ಬರೂ ಆ ಗಿಡಗಳಿಗೆ ಮಾತಾ ಪಿತರಾದರು. ಸುಮಾರು 284ಕ್ಕೂ ಅಧಿಕ ಮರಗಳು ಇಂದು ಸಾಕ್ಷಿಯಾಗಿ ನೆರಳು ನೀಡುತ್ತಿವೆ. **ಶ್ರೀಮತಿ ಸಾಲುಮರದ ತಿಮ್ಮಕ್ಕ**ನವರ ರಾಷ್ಟ್ರ ಹೆಮ್ಮೆಯ ಪ್ರಶಸ್ತಿಯಾದ **ಪದ್ಮಶ್ರೀ ಪ್ರಶಸ್ತಿ**ಗೆ ಭಾಜನರಾಗಿರುತ್ತಾರೆ. ರಾಷ್ಟ್ರ ಪ್ರಶಸ್ತಿಗಳಿಗೆ ಮಾರು ಹೋಗದೆ ತಮ್ಮ ಕೈಂಕರ್ಯವನ್ನು, ಸಮಾಜ ಸೇವೆಯನ್ನು ಇನ್ನೂ ಮುಂದುವರೆಸುತ್ತಿದ್ದಾರೆ. ಇಂತಹವರ ಜೀವನ ಮಾರ್ಗ 'ಪ್ರೇರಣಾ'ಕ್ಕೆ ಮಹತ್ವದ ಮೈಲಿಗಲ್ಲಾಗಲಿವೆ. ಯುವತಿಯರಿಗೆ ಪ್ರೇರಣವಾಗಲಿದೆ.

(ix) ಉದ್ಯಮ-ಉದ್ಯಮಿ

ಇತ್ತೀಚೆಗೆ ಬದುಕಿನ ಪರಿ ನಾಗಾಲೋಟದಲ್ಲಿ ಬದಲಾಗುತ್ತಿದೆ. ಹೊಸ ಉದ್ಯೋಗಗಳನ್ನು ಆವಿಷ್ಕರಿಸುವುದು, ತಮ್ಮನ್ನು ಅದರಲ್ಲಿ ತೊಡಗಿಸಿಕೊಳ್ಳುವುದು ಸಾಮಾನ್ಯವಾಗಿದೆ. ನವೀಕರಿಸಿದ ಉದ್ಯಮಗಳ ಸ್ಥಾಪನೆಗಳಿಗೆ ಹೆಚ್ಚಿನ ಬೇಡಿಕೆಯಿದೆ. ಸ್ವಂತ ದುಡಿಮೆಗೆ ಹೆಚ್ಚು ಒತ್ತು ಕೊಡಲಾಗುತ್ತಿದೆ. ಸಾರ್ವಜನಿಕರ ಒಲವು ಹೆಚ್ಚುತ್ತಿದೆ. ಬೇರೆಯವರ ಕಂಪನಿಯಲ್ಲಿ ಅಥವಾ ಸಂಸ್ಥೆಗಳಲ್ಲಿ ದುಡಿಯುವುದಕ್ಕಿಂತ ತಮ್ಮ ಜ್ಞಾನ ಮತ್ತು ಪರಿಶ್ರಮದಿಂದ ತಾವೇ ಉದ್ಯಮ ಆರಂಭಿಸುವಲ್ಲಿ ಜಗತ್ತಿನ ಅನೇಕರು ಆ ದಿಶೆಯಲ್ಲಿ ದಾಪುಗಾಲು ಹಾಕುತ್ತಿದ್ದಾರೆ. ಅಂತೆಯೇ ನಮ್ಮ ದೇಶದವರು ಹೆಚ್ಚಿನ ಲಾಭವನ್ನು, ಆರ್ಥಿಕ ಮುನ್ನಡೆಯನ್ನು ಸಾಧಿಸಲು, ಅತೀ ಶೀಘ್ರದಲ್ಲಿ ಹೆಚ್ಚಿನ ಹಣ ಗಳಿಸಲು ಉದ್ಯಮಗಳನ್ನು ಸ್ಥಾಪಿಸುತ್ತಿದ್ದಾರೆ. ಸಣ್ಣ ಪ್ರಮಾಣದ ಅಥವಾ ದೊಡ್ಡ ಪ್ರಮಾಣದ ಕೈಗಾರಿಕೆಗಳು, ಕರಕುಶಲ ವಸ್ತು ನಿರ್ಮಾಣ, ಮಾರಾಟ ಮಳಿಗೆಗಳು, ಆಹಾರ ಪದಾರ್ಥಗಳು, ಸರಕು ಸಾಗಾಣಿಕೆಗಳು ಇತ್ಯಾದಿ ತೀವ್ರಗತಿಯಲ್ಲಿ ಸಾಗುತ್ತಿವೆ. ಸರ್ಕಾರವೂ ಕೂಡ ಸ್ವಂತ ಉದ್ಯೋಗ ಆರಂಭಿಸುವವರಿಗೆ ಆರ್ಥಿಕ ಸಹಾಯವನ್ನು, ಮೂಲ ಧನವನ್ನು ನೀಡಿ ಪ್ರೋತ್ಸಾಹಿಸುತ್ತಿದೆ. ಹಾಗಾಗಿ ಗಂಡಸರಂತೆ ಹೆಂಗಸರೂ ಉದ್ಯಮದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಇಂತಹ ಮಾಹಿತಿಯನ್ನು, ಪ್ರೇರಣಾ ಕಾರ್ಯಕ್ರಮಗಳಲ್ಲಿ ತಿಳಿಸಲಾಗುತ್ತದೆ. ಯುವಜನಾಂಗಕ್ಕೆ 'ವೃತ್ತಿ ಶಿಕ್ಷಣ'ದ ಮಾರ್ಗವೂ ಇದಾಗಿದೆ ಎನ್ನಲು ಹರ್ಷವಾಗುತ್ತದೆ.

ಇಲ್ಲೊಬ್ಬ ಸಾಧಕಿಯ ಪರಿಚಯು ನಿಮ್ಮ ಮುಂದೆ-ಬೆಂಗಳೂರಿನ ಬಯೋಕಾನ್ ಸಂಸ್ಥೆಯ ಮುಖ್ಯಸ್ಥರಾದ ಭಾರತೀಯ ಹೆಸರಾಂತ ಉದ್ಯಮಿ **ಶ್ರೀಮತಿ ಕಿರಣ್ ಮಜುಂದಾರ್**. ಆ ಸಂಸ್ಥೆಯ ಮೂಲಕ ಮಾಡಿರುವ ಅಪಾರ ಸಾಧನೆಗಾಗಿ ಪ್ರಸಿದ್ಧಿ ಪಡೆದಿದ್ದಾರೆ. ಮಾರ್ಚ್ 23, 1953ರಲ್ಲಿ ಬೆಂಗಳೂರಿನಲ್ಲಿ ಜನನ, ಬೆಂಗಳೂರಿನಲ್ಲಿ ಕಾಲೇಜುವರೆಗಿನ ಶಿಕ್ಷಣ ಮುಗಿಸಿ ನಂತರ ಆಸ್ಟ್ರೇಲಿಯಾದಲ್ಲಿ ಹೆಚ್ಚಿನ ಶಿಕ್ಷಣ ಪಡೆದಿದ್ದಾರೆ. ನಂತರ ಅವರು ಹೆಜ್ಜೆಯಿಟ್ಟಿದ್ದು ಉದ್ಯಮ ಕ್ಷೇತ್ರಕ್ಕೆ.

ಅವರು ಉದ್ಯಮವನ್ನು ಆರಂಭಿಸಿದ್ದು ಸುಲಭದ ಮಾತಾಗಿರಲಿಲ್ಲ. ಕೇವಲ ಹತ್ತು ಸಾವಿರ ರೂಪಾಯಿಗಳ ಬಂಡವಾಳದ ಮೂಲಕ ತಮ್ಮ ಮನೆಯ ಶೆಡ್ ಒಂದರಲ್ಲಿ ಆರಂಭಿಸಿದ್ದರು. ಅಂದಿನ ದಿನಗಳಲ್ಲಿ ಅವರಿಗೆ ಬೆನ್ನೆಲುಬಾಗಿದ್ದವರು ಯಾರೂ ಇರಲಿಲ್ಲ. ಆದರೂ ಸ್ವಂತ ಶ್ರಮ ಮತ್ತು ಆಸಕ್ತಿಯಿಂದ, ಇಟ್ಟ ಹೆಜ್ಜೆಯನ್ನು ಮುನ್ನಡೆಸಿದರು. ಅವರ ಆತ್ಮ ವಿಶ್ವಾಸ ಅವರನ್ನು ಹಿಂದೆ ತಿರುಗಿ ನೋಡಲು ಬಿಡದೆ ಮುಂದಿನ ಬೃಹತ್ ಗುರಿಯತ್ತ ಸಾಗಿಸಿತ್ತು.

ವೈದ್ಯಕೀಯ ಕ್ಷೇತ್ರಕ್ಕೆ ವಿಶೇಷ ಉತ್ಪನ್ನಗಳನ್ನು ಒದಗಿಸುತ್ತಿರುವ ಬಯೋಕಾನ್ ಸಂಸ್ಥೆ ಇಂದು ವಿಶ್ವದ ಪ್ರತಿಷ್ಠಿತ ಸಂಸ್ಥೆಯಾಗಿ ಬೆಳೆದಿದೆ. ಹೆದರಿಕೆಯಿಂದ ಕೈ ಕಟ್ಟಿ ನಿಲ್ಲದೆ ದೃಢ ಸಂಕಲ್ಪದ ಮಹೋನ್ನತ ಸಾಧನೆಯ ದಿಕ್ಕಿಗೆ ಉದ್ಯಮ ಚಕ್ರ ಸಾಗಿದ್ದು, ಯಶಸ್ಸಿನ ಶಿಖರವೇರಿದ್ದು ಹಾಗೂ ಇಂತಹ ಮಾದರಿ ಸಂಸ್ಥೆಗಳಲ್ಲಿ ವಿಶ್ವದಲ್ಲಿ ಏಳನೇ ಅತಿ ದೊಡ್ಡ ಸಂಸ್ಥೆಯಾಗಿ ಬೆಳೆಯಲು **ಶ್ರೀಮತಿ ಕಿರಣ್ ಮಜುಂದಾರ್**‌ರವರ ಕೊಡುಗೆ ಅಪಾರ.

ಸಾಧನೆಗೆ ಪ್ರಶಸ್ತಿ ಸಮ್ಮಾನಗಳು ಸರ್ವೇ ಸಾಮಾನ್ಯ. ಭಾರತ ಸರ್ಕಾರದ **ಪದ್ಮಶ್ರೀ, ಪದ್ಮಭೂಷಣ** ಪ್ರಶಸ್ತಿಗಳೂ ಸಂದಿವೆ. ಕೇವಲ ಪ್ರಶಸ್ತಿಗಳಿಗೆ ಯೋಚಿಸದೆ ಗ್ರಾಮೀಣ ಪರಿಸರದ ಉನ್ನತಿಗಾಗಿ, ಅವರಿಗೆ ಉದ್ಯೋಗ ಮತ್ತು ಶಿಕ್ಷಣ ಸೌಲಭ್ಯ ಒದಗಿಸುವ ನಿಟ್ಟಿನಲ್ಲಿ ಕಿರಣ್ ಮಜುಂದಾರ್ ಗಣನೀಯ ಕೊಡುಗೈ ದಾನಿಗಳಾಗಿದ್ದಾರೆ. ಇಂತಹ ಸಾಧಕಿಯರ ಬದುಕು 'ಪ್ರೇರಣಾ'ಗೆ ಒಂದು ಶಕ್ತಿ, ಯುವತಿಯರ ಸಾಧನೆಗೆ ಅದ್ಭುತ ಪ್ರೇರಕ.

(x) ಸಾಮಾಜಿಕ, ಭಾವನಾತ್ಮಕ ಸಂಬಂಧ

ಕುಟುಂಬಗಳ ಸಮ್ಮಿಲನವೇ ಸಮಾಜ. ಕುಟುಂಬದಲ್ಲಿನ ಸದಸ್ಯರ ಹೊಂದಾಣಿಕೆ, ಸಹಭಾಗಿತ್ವ, ಸಹಕಾರ ಮನೋಭಾವ, ಸಹ ಜೀವನ, ಸೋದರಭಾವತ್ವ, ಸಂತಸದ ಪರಿಸರವು ಸಾಮಾಜಿಕ ಸಂಬಂಧಗಳನ್ನು ಅವಿರತ ಬೆಸೆದಿರುತ್ತದೆ, ಗಟ್ಟಿಗೊಳಿಸುತ್ತದೆ ಹಾಗೂ ಸಂತೋಷದಾಯಕವಾಗಿರಿಸುತ್ತದೆ.

ಮನುಷ್ಯ ಕೇವಲ ಒಬ್ಬಂಟಿಯಾಗಿರಲಾರ. ಸಮಾಜ ಜೀವಿಯಾಗಿ ಜೀವನ ನಡೆಸುತ್ತಾನೆ ಅದು ಅನಿವಾರ್ಯತೆಯೂ ಹೌದು. ಆತನ ಕುಟುಂಬದ, ಜೀವನದ ಆಗು-ಹೋಗುಗಳಿಗೆ ಸಮಾಜವು ಪುಷ್ಠಿ ನೀಡುತ್ತದೆ. ಶಕ್ತಿ ತುಂಬುತ್ತದೆ. ಆಶ್ರಯತಾಣವಾಗುತ್ತದೆ. ನಮ್ಮ ದೇಶದಲ್ಲಿ ಮಾನವ ಸಂಬಂಧ ಸರಪಣಿಯು ಅವಿಚ್ಛಿನ್ನವಾದುದು, ಭದ್ರವಾದುದು. **"Unity in Diversity"** ಆದರೆ ಈಗೀಗ ಹೊಸ ಬದುಕಿನ ಜಾಡಿನಲ್ಲಿ, ಪಾಶ್ಚಿಮಾತ್ಯ ಬದುಕಿನ ದಾರಿಯ ಅನುಸರಣೆಯಲ್ಲಿ ತನ್ನ ನಿಲುವನ್ನು ಕಳೆದುಕೊಳ್ಳುವುದೇನೋ ಎಂಬ ಅಳುಕಿನ ಸ್ಥಿತಿಯಲ್ಲಿ ನಾವಿದ್ದೇವೆ. ಆದರೆ ಭಾವನಾತ್ಮಕ ಸಂಬಂಧಗಳು, ಆ ಸುಖದ ಬದುಕಿನ ಆನಂದಗಳು ಬೆಲೆ ಕಟ್ಟಲಾಗದ್ದು, ಊಹೆಗೂ ಮೀರಿದ್ದು. ಇಂದಿನ ಯುವ ಪೀಳಿಗೆಯವರಲ್ಲಿ ಬದಲಾಗುತ್ತಿರುವ ಮನೋಭಾವವು ಸಾಮಾಜಿಕ ಸಂಬಂಧಗಳನ್ನು ಅಲ್ಪ ಸ್ವಲ್ಪ ನಿರ್ಲಕ್ಷಿಸುತ್ತಿದೆ. ಅದಕ್ಕೆ ನಮ್ಮ ಜೀವನ ವಿಧಾನ, ಪರಿಸರ, ಆಸೆ-ಆಕಾಂಕ್ಷೆಗಳು ಕಾರಣವೆಂಬುದು ಸರ್ವ ವಿದಿತ. ಆದರೂ ಇವೆಲ್ಲವನ್ನೂ ಮೀರಿ ಹೊಸ ನಿಟ್ಟಿನತ್ತ ಸಾಗುವ ಹೊಸ ಅರಿವನ್ನು ಹುಟ್ಟು ಹಾಕುವ ಜೀವನ ಶಿಕ್ಷಣವು ನಮ್ಮದಾಗಬೇಕಾಗಿದೆ. **"ಒಳಿತನ್ನು ಮರೆಯದಿರು ಹೊಸತನವನ್ನು ಅಳೆದಳೆದು ನೋಡುತಿರು"** ಎಂಬ ಉಕ್ತಿಯಂತೆ ನಾವು ಯುವಜನತೆಯತ್ತ, ಸಮಾಜ ಸಂಬಂಧದ ಬಗ್ಗೆ ಮುಖ ಮಾಡಬೇಕಿದೆ. ಸಮಚಿತ್ತದಿಂದ ಸಮರಸ ಸಂಬಂಧದ ಸೆಲೆಯನ್ನು ಉಳಿಸಿಕೊಳ್ಳಬೇಕಿದೆ. ಈ ಬಗ್ಗೆ ರೇಂಜರ್‌ಗಳು ಸತ್ಯಾಸತ್ಯತೆಯನ್ನು ಗುರುತಿಸುವ ನೋಟದತ್ತ ದೃಷ್ಟಿಹರಿಸಬೇಕಿದೆ. ಈ ಮೂಲಕ 'ಪ್ರೇರಣಾ' ಪ್ರಯತ್ನವು ಸಾಕಾರಗೊಳ್ಳುವಂತಾಗಬೇಕಿದೆ.

ಸ್ತ್ರೀಗೆ ಭಾವಾನಾತ್ಮಕ ಸಂಬಂಧದ ಶಕ್ತಿ ಅಧಿಕವಾಗಿರುತ್ತದೆ. ಸಂಸಾರದ ಕಣ್ಣು, ಸಮಾಜದ ಹೊನ್ನು, ಬಾಂಧವ್ಯಕ್ಕೆ ಬೆನ್ನು ಇದ್ದಂತೆ! ನಮ್ಮ ಯುವತಿಯರಿಗೆ ಭಾವನಾತ್ಮಕ ಸಂಬಂಧದ ಸುಪ್ತ ಸೊಗಸನ್ನು ಮತ್ತೊಮ್ಮೆ ಗುನುಗುನಿಸುವ ಕೆಲಸ ರೇಂಜರ್‌ಗಳಿಗೆ ಒದಗಬೇಕಿದೆ. ಈ ಭಾವನಾತ್ಮಕ ಸಂಬಂಧವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿಡಲು ಸಹಕಾರಿಯಾಗುತ್ತದೆ.

ಉದಾಹರಣೆಗೆ ತನ್ನ ಕುಟುಂಬದವರೊಂದಿಗೆ ಸಹಕರಿಸಿ ಬಾಳುವುದು, ಸೋದರ ಸೋದರಿಯರ ನಡುವಿನ ಅಕ್ಕರೆಯ ಪ್ರೀತಿಯಲ್ಲಿ ಭಾಗಿಯಾಗುವುದು. ಹಾಗೆಯೇ ಊರು, ಜನರು, ಸಮಾಜದವರೊಂದಿಗೆ ಬದುಕನ್ನು ನಡೆಸುವುದರಿಂದ ಶಾಂತಿ ನೆಮ್ಮದಿಯ ಬಾಳು ತಾನಾಗಿಯೇ ಮೂಡುತ್ತದೆ. ಹೆಣ್ಣು ಮಕ್ಕಳು ಇತರರಿಗೆ ಮಾದರಿಯಾಗಲು ಪ್ರಯತ್ನಿಸಬೇಕು. ಸಂಬಂಧ ನಿರಂತರ ಸಾಗಬೇಕು. ನಂತರದ ಬಾಳ್ವೆ ಎಲ್ಲರದಾಗಬೇಕು. ಹೀಗೊಮ್ಮೆ ನಮ್ಮ ಕಣ್ಣೋಟ ಇತ್ತ ಸರಿಸೋಣ –

ಗಂಗಳ್ಳಿ ಗ್ರಾಮವೆಂಬಲ್ಲಿ ಅನುಕೂಲಸ್ಥರ ಮನೆಯಲ್ಲಿ ಬೆಳೆದ **ಶೀಲಾ** ಒಳ್ಳೆಯ ವಿದ್ಯಾಭ್ಯಾಸ ಪಡೆದು ಈಗ ಉತ್ತಮ ಉದ್ಯೋಗದಲ್ಲಿದ್ದು ತನ್ನ ಕಾಲಮೇಲೆ ನಿಂತು ಉತ್ತಮ ಸಂಸಾರವನ್ನು ನಡೆಸುತ್ತಿದ್ದಾಳೆ. ಒಮ್ಮೆ ತನ್ನ ಊರಿಗೆ ಹೋದಾಗ, ಆ ಊರಿನ ಒಂದು ಬಡಕುಟುಂಬದ **ಕುಸುಮಾಳಿಗೆ** ಪಿ.ಯು.ಸಿ.ಯಲ್ಲಿ ಉತ್ತಮ ಅಂಕ ಬಂದಿದ್ದು ಮೆಡಿಕಲ್ ಓದಲು ಸೀಟು ದೊರಕಿತ್ತು. ಆದರೆ ಮನೆಯ ಬಡತನದ ಸ್ಥಿತಿಯಿಂದ ಬೇರೆ ಊರಿನಲ್ಲಿ ಉಳಿದುಕೊಂಡು, ಊಟ, ವಸತಿಯ ಖರ್ಚನ್ನು ನಿಭಾಯಿಸಿ ಎಂ.ಬಿ.ಬಿ.ಎಸ್. ಮುಗಿಸುವ ಆಸೆ ಕಮರಿ ಹೋಗಿತ್ತು. ಅದೃಷ್ಟವಶಾತ್ ಅದೇ ಸಮಯಕ್ಕೆ ಶೀಲಾ ತನ್ನೂರಿಗೆ ಮದುವೆ ಸಮಾರಂಭಕ್ಕೆ ಬಂದಳು. ಹಾಗೂ ಹೀಗೂ ಮಾತನಾಡುತ್ತಾ ಕುಸುಮಾಳ ಹೆಚ್ಚಿನ ವಿದ್ಯಾಭ್ಯಾಸದ ಕುರಿತು ಜನರು ಚರ್ಚಿಸುತ್ತಿದ್ದ ಮಾತು ಶೀಲಾಳ ಕಿವಿಗೆ ಬಿದ್ದಿತು. ಆ ಕೂಡಲೇ ಕುಸುಮಾಳ ಕಷ್ಟವನ್ನರಿತು ಅವರ ಮನೆಯವರನ್ನು ಕರೆಯಿಸಿ, ಖುದ್ದಾಗಿ ಅವರೊಂದಿಗೆ ಮಾತನಾಡಿ, ಆಕೆಯ ವಿದ್ಯಾಭ್ಯಾಸದ ಖರ್ಚನ್ನು ತಾನು ನಿಭಾಯಿಸುವುದಾಗಿ ತಿಳಿಸಿ ಹಣವನ್ನು ನೀಡಿದಳು. ಇಂದಿನ ದಿನಗಳಲ್ಲಿ ಹಳ್ಳಿ ಮಕ್ಕಳಿಗೆ ಸೀಟುಗಳು ಸಿಗುವುದೇ ಕಷ್ಟ. ಆದ್ದರಿಂದ ಆಕೆಯ ಆಸೆಯಂತೆ ಓದಲಿ, ತಾನು ಜವಾಬ್ದಾರಳೆಂದು ಹೇಳಿದಳು. ಹೀಗೆ ಮುಂದುವರೆದ ಕುಸುಮಳ ವಿದ್ಯಾಭ್ಯಾಸದಿಂದಾಗಿ ಇಂದು ಸ್ಟೆತಾಸ್ಕೋಪ್ ಹಿಡಿದು ವೃತ್ತಿ ನಿರ್ವಹಿಸುತ್ತಿರುವುದನ್ನು ಕಂಡಾಗ ಮನೆಯವರಿಗೆ ಹೆಮ್ಮೆ, ಊರಿನವರಿಗೆ ಅಭಿಮಾನ ಹಾಗೂ ಶೀಲಾಳಿಗೂ ಸಂತೋಷ. ಇಂತಹ ಭಾವನಾತ್ಮಕ ಸಂಬಂಧ ಸಮಾಜದ ಉದ್ಧಾರಕ್ಕೆ ನಿದರ್ಶನವಲ್ಲವೇ? ಇಂತಹ ಭಾವನೆ ಇನ್ನಷ್ಟು 'ಪ್ರೇರಣಾ' ಕಾರ್ಯಕ್ರಮದ ಮೂಲಕ ಬೆಳೆಯುವುದು ಸಾರ್ಥಕತೆಯ ಸಂಕೇತ.

(xi) ಗೃಹಿಣಿ–ತಾಯ್ತನ

'ಗೃಹಿಣಿ ಗೃಹಮುಚ್ಯತೆ' ಎಂಬ ಉಕ್ತಿ ಸ್ತ್ರೀಯ ಶ್ರೇಷ್ಠತೆಯನ್ನು ತಿಳಿಸುತ್ತದೆ. ಆಕೆ ಒಂದು ಕುಟುಂಬವನ್ನು ಬೆಳೆಸುವ ಕಣ್ಮಣಿ. ಕೌಮಾರ್ಯದಿಂದ ವಿವಾಹ ನಂತರದ ಬದುಕೇ ಸ್ತ್ರೀಗೆ ಗೃಹಿಣಿ ಪಟ್ಟವನ್ನು ನೀಡುತ್ತದೆ. ಒಂದು ಮನೆಗೆ ಶೋಭೆ ಬರುವುದೇ ಹೆಣ್ಣಿನಿಂದ ಗೃಹಿಣಿಯ ಪ್ರಭಾವವು ನೇರವಾಗಿ ಇಡೀ ಕುಟುಂಬದ ಮೇಲಿರುತ್ತದೆ. ಮಣ್ಣು–ಮರಳು, ಇಟ್ಟಿಗೆಗಳು ಗೃಹವನ್ನು ಕಟ್ಟಲು ನೆರವಾಗುವ ವಸ್ತುಗಳಾದರೆ, ಗೃಹಿಣಿಯು ಗೃಹದೊಳಗಿನ ಸಂಬಂಧ ಹಿಡಿದಿಡುವ ಬೆಸುಗೆ–ಬಂಧವಾಗಿರುತ್ತಾಳೆ. ಆದ್ದರಿಂದ ಗೃಹಿಣಿಯ ಮೌಲ್ಯಯುತ ಬದುಕಿನ ನಿದರ್ಶನಗಳನ್ನು ಇಂದಿನ ಯುವತಿಯರಿಗೆ ಮನದಟ್ಟುಮಾಡುವ ಕಾರ್ಯವಿಧಾನಗಳು ಪ್ರೇರಣಾದ ಮೂಲಕ ಕಲಿಸಬೇಕಾಗುತ್ತದೆ. ಗೃಹಿಣಿಯು ಗೃಹಜ್ಯೋತಿಯಾಗಬೇಕು ಎಂಬುದು ಆಶಯ.

ಗೃಹಿಣಿಯ ಮುಂದಿನ ವಂಶವೃದ್ಧಿಯ ಬದುಕೇ 'ತಾಯ್ತನ'. ಅಬ್ಬೆ, ತಾಯಿ–ಅವ್ವ, ಜನನಿ, ಅಮ್ಮ – ಇವೆಲ್ಲವೂ ಮಾತೆಗೆ ಸಲ್ಲುವ ನಲ್ಮೆಯ ಪದಗಳು. ಆಕೆಯು ತನ್ನ ಮಕ್ಕಳ ಆರೋಗ್ಯ, ಆಹಾರ, ಆಟ, ಓಟ, ಪಾಠ, ಹೀಗೆ ಜೀವನದ ಪ್ರತಿಯೊಂದು ಮೆಟ್ಟಿಲುಗಳಲ್ಲೂ ಹೆಚ್ಚಿನ ಕಾಳಜಿ ವಹಿಸುತ್ತಾಳೆ. ಹಾಗಾಗಿ ತಾಯಿಯ ಪಾತ್ರಹಿರಿದಾದುದು. ತಾಯ್ತನದ ಮಹತ್ವ ಪ್ರಮುಖವಾದುದು.

ಪ್ರಸ್ತುತ ಸಮಾಜದಲ್ಲಿ ಉದ್ಯೋಗಸ್ಥ ಮಹಿಳೆಯರ ಜಂಜಾಟದ ಬದುಕಿನಲ್ಲಿ 'ಗೃಹಿಣಿಯಾಗಿ ತಾಯ್ತನ'ದ ಸಂತಸವನ್ನು ಸವಿಯುವ ಮನೋಭಾವವು ನಿಧಾನವಾಗಿ ಕುಸಿಯುತ್ತಿರುವಂತೆ ಭಾಸವಾಗುತ್ತಿದೆ. ಗೃಹದೊಳಗಿನ ಸೀಮಿತ ಯಾಂತ್ರಿಕ ಬದುಕು ಹೆಣ್ಣು ಮಕ್ಕಳಿಗೆ ಬೇಸರ ತರುತ್ತಿದೆ. ದುಡಿಯುವುದು ಅನಿವಾರ್ಯವೂ ಆಗಿದೆ. ಈ ಕಾರಣ ಸಂಸಾರದಲ್ಲಿ ಸಾಮರಸ್ಯ ಹದಗೆಡುತ್ತಿದೆ. ಮನೆಯವರೊಂದಿಗೆ \ ಗಂಡನೊಂದಿಗೆ ಹೊಂದಿಕೊಂಡು ಹೋಗುವ ಮನಸ್ಸು ದೂರಾಗುತ್ತಿದೆ. ಕಾರಣಗಳು ಏನೇ ಇದ್ದರೂ ಆ ಬಗ್ಗೆ ಚಿಂತನೆ ನಡೆಸಿ, ಹೆಣ್ಣು ಮಕ್ಕಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಅವರ ವ್ಯಕ್ತಿತ್ವದಲ್ಲಿ 'ಗೃಹಿಣಿ' ಪಾತ್ರದ ಅಗತ್ಯತೆಯ ಬಗ್ಗೆ ಅರಿವು ಮೂಡಿಸಬೇಕಾಗುತ್ತದೆ. ವಂಶದ ಕುಡಿಗಳ ಹಿತದೃಷ್ಟಿಯಿಂದಲೂ ಆಕೆಯು ಜಾಗೃತಳಾಗಬೇಕಿರುವ ಸತ್ಯತೆಯನ್ನು 'ಪ್ರೇರಣಾ' ಮನವರಿಕೆ ಮಾಡಬೇಕಾಗುತ್ತದೆ. **"ಇಂದಿನ ಮಕ್ಕಳೇ ನಾಳಿನ ಪ್ರಜೆಗಳು"**, ಭವಿಷ್ಯದ ಮಾನವ ಸಂಪತ್ತು. ಮಕ್ಕಳ ಲಾಲನೆ, ಪೋಷಣೆ, ಸರಿಯಾದ ಬೋಧನೆ, ಶಿಸ್ತು, ನಿಸ್ವಾರ್ಥತೆ, ಗುರು ಹಿರಿಯರ ಬಗ್ಗೆ ಗೌರವ, ನಿರಂಹಕಾರಗಳನ್ನು ಕಲಿಸುವ

ಆದರ್ಶ ಮನೆಗಳಾಗಬೇಕು. ಗೃಹಿಣಿ ಮೊದಲ ಸತ್ಪಥ ತೋರುವ ಗುರುವಾಗಿ, ತಂತ್ರಜ್ಞಾನದ ಸದ್ಬಳಕೆಗೆ ಚಿತ್ತಹರಿಸುವತ್ತ ಮಕ್ಕಳನ್ನು ಪ್ರೇರೇಪಿಸುವ ಶಕ್ತಿಯಾಗಬೇಕು. ಎಳೆ ಮನಸ್ಸುಗಳಿಗೆ ಉತ್ತಮ ಜೀವನ ಕಲೆ ತಿಳಿಸುವ 'ತಾಯಿ'ಯಾಗಬೇಕು. ಹಾಗೆಯೇ ಮನೆಯ ಹಿರಿಯರು, ವೃದ್ಧರಿಗೆ ತೃಪ್ತಿಕರ ಬದುಕನ್ನು ಕಲ್ಪಿಸಬೇಕು. ಅವರ ಕೊನೆಯ ಹಂತದ ಬದುಕಿಗೆ ನೆಮ್ಮದಿ ಮೂಡುವ ಪರಿಸರ ಒದಗಿಸಬೇಕು. ಕುಟುಂಬ, ಮಕ್ಕಳು ಮತ್ತು ವೃದ್ಧರ ಯೋಗಕ್ಷೇಮವನ್ನುನೋಡುವತ್ತ ಗಮನಹರಿಸುವ ಸುಶಿಕ್ಷಣ ಪ್ರೇರಣಾದಿಂದ ರೇಂಜರ್‌ಗಳ ಹೊಸ ನಡಿಗೆಗೆ ಹೊಸ ಬದುಕಿಗೆ ನಾಂದಿಯಾಗಬೇಕಾಗಿದೆ. **"ತೊಟ್ಟಿಲು ತೂಗುವ ಕೈ ದೇಶವನ್ನಾಳುತ್ತದೆ"** ಎಂಬ ಉಕ್ತಿಗೆ ಸೂಕ್ತ ಅರ್ಥ ನೀಡುವ ಅಗತ್ಯ ಕಲಿಕೆ ಇಂದಿನದಾಗಬೇಕಾಗಿದೆ.

ಸ್ತ್ರೀಯ ಸಮರ್ಥ ಬದುಕಿನ ನಡೆಯ ನಿರ್ಧಾರದ ನುಡಿಗಳನ್ನು ಈ ಕೆಳಗಿನ ಪದ್ಯಭಾಗದಿಂದ ತಿಳಿಯೋಣ. ಹಳ್ಳಿ ಹೆಣ್ಣು ಮಗಳೊಬ್ಬಳು ಎದುರಿಸಿದ ಕಷ್ಟ ಕೋಟಲೆಯ ಸನ್ನಿವೇಶವನ್ನು, ಮನೋಸ್ಥಿತಿಯನ್ನು ಸ್ಥಿಮಿತದಲ್ಲಿಟ್ಟುಕೊಂಡು ದೃಢ ನಿರ್ಧಾರದ ಸಕಾರಾತ್ಮಕ ಸಂದೇಶವನ್ನು ತಿಳಿಸುವ ಈ ಕವಿತೆಯಿಂದ ಗೃಹಿಣಿ ಮತ್ತು ತಾಯ್ತನದ ಅರ್ಥವನ್ನು ಮನವರಿಕೆ ಮಾಡಿಕೊಳ್ಳೋಣ. ಜಾನಪದ ದಾಟಿಯಲ್ಲಿ ಹಾಡಬಹುದು.

ಕೇಳು ಮಗಳೇ ನನ್ನ ಜೀವನದ ಕಥೆಯಾ
ಕಣ್ಣೀರ ಕೋಡಿಯ ಬಾಳಿನ ವ್ಯಥೆಯಾ । ಬಲು
ಮನಸಿಟ್ಟು ಆಲಿಸು ನನ್ನೀ ನುಡಿಯಾ ॥

ಬಡತನದ ತವರಿನಲಿ ಸೋದರರೊಡಗೂಡಿ
ಹರಕು ಬಟ್ಟೆಯ ತೊಟ್ಟು ಬೀದಿಯಲಿ । ಆಡಿ
ಬಳಪ ಪುಸ್ತಕ ಹಿಡಿಯೋ ಕನಸ ಕಟ್ಟಿ ॥

ಗೆಳತಿಯರು ಕಲಿಸಿದ ಅಲ್ಪ ವಿದ್ಯೆಯ ಕಲಿತು
ಹಾಡು ಹಸೆ ಚಂದ ರಂಗೋಲಿ ಬಿಡಿಸಿ । ನಗುತ
ಕುಣಿದಾಡಿ ಕಳೆದ ಬಾಲ್ಯವನು ॥

ಹೊಲದ ಬಯಲಲಿ ಹಕ್ಕಿಯ ಹಿಂಡು
ಮೈಮರೆತು ನಲಿದೆ ನವಿಲನು ಕಂಡು । ಚಂದದಿ
ನಾಳಿನ ಯೋಚನೆ ಮನದಲ್ಲಿ ಮರೆತು ॥

ತಂದೆ–ತಾಯಿಯರ ನುಡಿಗೆ ತಲೆಬಾಗಿ ನಡೆದು
ಒಂದೆ ಮನದಿ ಪತಿ ಕೈಯನು ಹಿಡಿದು । ಮತ್ತೆ
ಮೌನದಿ ಅಡಿಯಿಟ್ಟೆ ಬಾಳನು ನೆನೆದು ॥

ಅತ್ತೆಮಾವರ ಬೈಗುಳ ಗಂಡನ ಕಿರುಕುಳ
ಕುಡಿದು ಬರುವ ಪತಿಯು ಮನೆಯೊಳಗೆ । ಇರಲು
ಪುಡಿಯಾಯ್ತು ನನ್ನ ಕನಸೆಲ್ಲಾ ॥

ಗಾಣದೆತ್ತಿನ ಹಾಗೆ ದುಡಿದುಡಿದು ಬೆಂದೆ
ಜೋಕಾಲಿ ಜೀವನ ಕಣ್ಣೀರ ಹಿಂದೆ । ಮೇಲಾಗಿ
ಕಳೆದಾವು ದಿನಗಳು ಯುಗದಂತೆ ॥

ಇರುಳಲ್ಲಿ ಚಂದ್ರಮ ಬಂದಂತೆ ನೀ ಬಂದೆ
ಬಾಳಿಗೆ ಬಂಗಾರ ಸಿಂಗಾರ ತಂದೆ । ಮಗಳೆ
ತಾಯ್ತನದ ಹಿರಿಮೆ ಮಡಿಲೊಳಗೆ ಬೆಸೆದೆ ॥

ಅತ್ತೆ ಮಾವರ ಮರಣ ಒಡನೆ ಗಂಡನ ಸಾವು
ಸಾವಿನ ಜಾತ್ರೆ ಮನೆಯೊಳಗೆ । ಬಂದಿರಲು
ಬಣ ಗುಟ್ಟಿದ ಮನೆಯು ಹಗಲಿರುಳು ॥

ಹೊಟ್ಟೆ ಬಟ್ಟೆಯ ಕಟ್ಟಿ ಬೆಳೆಸಿದೆ ನಿನ್ನನು
ಹುಟ್ಟೂರ ದಾರಿ ಮರೆಯಾಗಿ । ಹೋಗಿರಲು
ಕಂದ ನಿನಗಾಗಿ ನಾ ಬದುಕಿದೆ ॥

ಹಳ್ಳಿಯ ಮಂದಿಯ ನಿಂದೆಯ ಮಾತಿಗೆ
ಕಿವಿಗೊಡದೆ ನಡೆದೆ ನೀತಿಯಲಿ । ಬಾಳುತ್ತಾ
ಕಂದನ ಕಣ್ಣೀರ ಒರೆಸುತ್ತಾ ॥

ತಿದ್ದಿ ಬರೆಯಲು ಕಲೆಯ ವಿದ್ಯೆಯ ಕಲಿಸಿದೆ
ಬುದ್ಧಿಯಿಂದಲೆ ಬದುಕು ನ್ಯಾಯದಲಿ । ಇರಲೆಂದು
ಸತ್ಯದ ನುಡಿಗೆ ತಲೆಬಾಗು ॥

ಕಷ್ಟ ಬಂದರೂ ಎಷ್ಟು ಮರ್ಯಾದೆ ಮರಿಬೇಡ
ಮಾನವೇ ಹೆಣ್ಣಿಗೆ ಶೋಭೆಯು । ಎಂದೂ
ಪರಿಶುದ್ಧ ಆತ್ಮದಿ ಸಿರಿ ಕಾಣು ॥

ನೊಂದ ಹೆಣ್ಣಿನ ಪಾಡು ಯಾರಿಗೂ ಕೊಡಬೇಡ
ಬಂದ ದುಗುಡದುಃಖಗಳ ಕಳೆದು । ಶಿವನೆ
ಸಂತಸದ ಗೃಹಿಣಿ ಭಾಗ್ಯವ ಕರುಣಿಸು ॥

ತಾಯ್ತನದ ಮುದವು ಹೆಣ್ಣಿಗೆ ದೊರೆಯಲಿ
ತಾನೆಷ್ಟು ನೊಂದು ಬೆಂದರೂ । ಲೋಕಕ್ಕೆ
ನೆಮ್ಮದಿಯ ಬಾಳಿರಲಿ ಕಡೆತನಕ ॥

ಹುಟ್ಟು ಸಾವುಗಳು ತಪ್ಪದಲೆ ಬರುವವು
ಬೆಟ್ಟದಂತಹ ಮನವು ಸ್ಥಿರವಿರಲಿ । ಎಂದಿಗು
ತೊಟ್ಟ ತಾಳ್ಮೆಯ ಒಲವು ನಿನಗಿರಲಿ ॥

ಕೇಳವ್ವ ನನ ಮಗಳೆ, ಕೊನೆಗೊಂದು ಮಾತು
ಧೈರ್ಯದಿಂದಲಿ ಬದುಕ ಹೊಣೆ ಹೊತ್ತು । ಹೋರಾಡು
ನಿನಗೆ ಗೆಲುವು ಕಟ್ಟಿಟ್ಟ ಬುತ್ತಿ !

– ರಚನೆ : ಕಮಲಾಕ್ಷಿ ಹೆಗಡೆ

(xii) ತ್ಯಾಗಮಯಿ

ಸ್ತ್ರೀ ಶಕ್ತಿರೂಪಿಣಿ, ಮಾತೃಸ್ವರೂಪಿ, ಕರುಣಾಮಯಿ, ಮಮತಾಮಯಿ ಅಷ್ಟೇ ಅಲ್ಲ ತ್ಯಾಗಮಯಿ ಕೂಡ! ತನ್ನನ್ನಷ್ಟೆ ನೋಡಿಕೊಳ್ಳದೆ ಮನೆಯವರ, ನೆಂಟರಿಷ್ಟರ, ತನ್ನ ಪ್ರದೇಶದವರ, ನಾಡಿನ ಹಿತೈಶಿಂಯಾಗಿ, ಆದರ್ಶನಾರಿಂಯಾಗಿ ಬಾಳಿತೋರಿಸಿದಂತವಳು, ಬಾಳುತ್ತಿರುವಂತವಳು. ಲೋಕೋದ್ಧಾರಕ್ಕಾಗಿ ತನ್ನ ಸುಖವನ್ನು ಬದಿಗಿಟ್ಟು, ಬಲಿದಾನಗೈದ ಎಷ್ಟೆಷ್ಟೋ ಘಟನೆಗಳು ಇತಿಹಾಸದ ಪುಟಗಳಲ್ಲಿ ಸೇರಿಹೋಗಿವೆ. **"ಪರಾರ್ಥಂ ಇದಂ ಶರೀರಂ"** ಎನ್ನುವ ಉಕ್ತಿಗೆ ತನ್ನನ್ನು ಅರ್ಪಿಸಿಕೊಂಡವಳು. ಆಕೆಂಯು ವಿಶಾಲತೆಂಯು ಮನೋಭೂಮಿಕೆಂಯು ಸವಿಸ್ತಾರವಾದದ್ದು, ಅಸದೃಶವಾದದ್ದು. ಅಂತಹ ಸದ್ಗುಣ ಸಂಪನ್ನೆಯರು ನಮ್ಮ ನಾಡಿನ ಕಣ್ಮಣಿಗಳು. ದುಃಖಿತರಿಗೆ ಸಾಂತ್ವನವನ್ನು ನೀಡುತ್ತಾ, ಶೋಷಿತರ ಪಾಲನೆಗೈಯುತ್ತಾ, ಸಮಾಜಮುಖಿ ಶ್ರೇಯೋಭಿವೃದ್ಧಿಯ ಕಾರ್ಯಗಳಲ್ಲಿ ತೊಡಗಿಸಿಕೊಂಡು ನಿಸ್ವಾರ್ಥತೆಯ ಮೆರಗಿನಿಂದ ಮೆರೆದ ಸ್ತ್ರೀ ರತ್ನಗಳು ಅಗಣಿತ, ಅಮರ!

ತನ್ನ ಜೀವದ ಹಂಗನ್ನು ತೊರೆದು ತ್ಯಾಗಮಯಿಯಾಗಿ ಮೆರೆದ ಸ್ತ್ರೀ ದರ್ಪಣ ನಿಮ್ಮೊಂದಿಗೆ – ನೀರಜಾ ಬಾನೋಟ್

1986, ಸೆಪ್ಟೆಂಬರ್ 5 ರಂದು, ಮಧ್ಯರಾತ್ರಿ, 380 ಜನರನ್ನು ಹೊತ್ತು 13 ಕ್ಯಾಬಿನ್ ಕ್ರೂಗಳೊಂದಿಗೆ ಮುಂಬಯಿನಿಂದ ಹೊರಟ ಪ್ಯಾನ್ ಆಮ್ ಫ್ಲೈಟ್ 73, ಪಾಕಿಸ್ತಾನದ ಕರಾಚಿಯ ಮೂಲಕ ಬೆಳಗಿನ ಜಾವ 4.30ಕ್ಕೆ ಅಮೇರಿಕಾಕ್ಕೆ ತಲುಪಬೇಕಿತ್ತು. ಕರಾಚಿಯಲ್ಲಿ ವಿಮಾನ ನಿಲುಗಡೆಯಾದಾಗ 109 ಜನರು ಇಳಿದರು. ಆ ಸಮಯದಲ್ಲಿ ವಿಮಾನ ನಿಲ್ದಾಣದ ರಕ್ಷಣಾ ದಳದವರು ತೊಡುವ ತಿಳಿನೀಲಿ ಬಣ್ಣದ ಉಡುಗೆಯನ್ನು ಧರಿಸಿ, ಅಲ್ಲಿದ್ದ ವ್ಯಾನಿನಲ್ಲಿ ಇಬ್ಬರು ವಿಮಾನ ಅಪಹರಣಕಾರರು ಬಂದು ರಕ್ಷಣಾದಳದವರನ್ನು ಕೊಂದರು. ನೇರವಾಗಿ ವಿಮಾನ ನಿಂತ ಕಡೆ ಧಾವಿಸಿದರು. ವಿಮಾನದ ಒಳಗಡೆ ಬರುತ್ತಿರುವುದನ್ನು ಗಮನಿಸಿದ ಹಾಗೂ ಉಗ್ರರ ಚಹರೆಂಯುನ್ನು ಅರಿತು ಕೂಡಲೇ ವಿಮಾನ ಚಾಲಕ ಸಿಬ್ಬಂದಿಯವರು ಕೂಡಲೇ ಅಲ್ಲಿಂದ ಹೊರಹೋಗಲು ಸೂಚನೆ ನೀಡಿದಾಗ ವಿಮಾನ ಚಾಲಕರು ಮುಂಭಾಗದ ಬಾಗಿಲುಗಳಿಂದ ಹೊರ ನಡೆದರು. ಆಗಲೇ ಇನ್ನಿಬ್ಬರು ಉಗ್ರರೂ ಸೇರಿಕೊಂಡರು. ಒಟ್ಟು ನಾಲ್ಕು ಜನರು ವಿಮಾನದ ಒಳಗೆ ಶಸ್ತ್ರಧಾರಿಗಳಾಗಿ ಒಳ ನುಗ್ಗಿದರು. ಪ್ರಯಾಣಿಕರಿಗೆ ಭಯಹುಟ್ಟಿಸಿದರು. ಸಾವಿನ ದವಡೆಯಲ್ಲಿ ಪ್ರಯಾಣಿಕರು ಅಸಹಾಯಕರಾಗಿ ಕುಳಿತಿದ್ದರು.

ಧೀರೆ ನೀರಜಾ ಫ್ಲೈಟ್ ಅಟೆಂಡೆಂಟ್ ಮಾತ್ರ ಸ್ವಲ್ಪವೂ ಭೀತಿಗೊಳಗಾಗದೆ ಜನರಿಗೆ ಧೈರ್ಯ ತುಂಬುತ್ತಿದ್ದಳು. ಭಯೋತ್ಪಾದಕರು ಅಮೇರಿಕಾದ ಪ್ರಯಾಣಿಕರನ್ನು ಕೊಲ್ಲುವ ಉದ್ದೇಶ ಹೊಂದಿದ್ದರು. ವಿಮಾನದಲ್ಲಿ ನಾನಾ ದೇಶಗಳಿಗೆ ಹೋಗುವ ಪ್ರಯಾಣಿಕರಿದ್ದರು. ಅವರಿಗೆ ಅಮೆರಿಕಾದವರು ಯಾರೆಂದು ತಿಳಿಯಲಿಲ್ಲ. ಆ ಕೂಡಲೇ ಅವರು ಜನರ ಪಾಸ್ ಪೋರ್ಟ್ ಸಂಗ್ರಹಿಸಲು ತಿಳಿಸಿದರು. ನೀರಜಾ ಬಾನೋಟ್ ಒಂದು ಉಪಾಯ ಮಾಡಿ ಅಮೇರಿಕಾದವರ ಪಾಸ್ ಪೋರ್ಟ್‌ಗಳನ್ನು ಕುಳಿತ ಆಸನದ ಅಡಿ ಹಾಕಲು ಹೇಳಿಕೊಟ್ಟಳು. ಭಯೋತ್ಪಾದಕರಿಗೆ ಅಮೇರಿಕಾದವರು ಯಾರೆಂಬುದನ್ನು ತಿಳಿಯಲಾಗದೆ ಕೋಪಗೊಂಡರು, ಕಿರುಚಾಡುತ್ತಿದ್ದರು. ಅವರಲ್ಲೇ ಜಗಳವಾಯ್ತು. ವಿಮಾನ ಚಾಲಕರಿಗಾಗಿ ಬೇಡಿಕೆ ನೀಡಿದರು. ಆದರೆ ಸಿಗಲಿಲ್ಲ. ಕೂಡಲೇ ಎಲ್ಲರನ್ನು ಸಾಯಿಸಲಿಚ್ಛಿಸಿದರು. ಬೆಂಕಿ ಮಳೆಗರೆಯಲಾರಂಭಿಸಿದರು. ಆ ಸಮಯದಲ್ಲಿ ನೀರಜಾ ಬಾನೋಟ್ ತುರ್ತುಬಾಗಿಲುಗಳನ್ನು ತೆಗೆದು ಜನರು ಹೊರಹೋಗಲು ಅವಕಾಶ ಮಾಡಿಕೊಟ್ಟಳು. 51 ಪ್ರಯಾಣಿಕರು ಅಸುನೀಗಿದರು. ಕಡೆಯಲ್ಲಿ ಇಬ್ಬರು ಮಕ್ಕಳನ್ನು ರಕ್ಷಿಸುತ್ತಾಳೆ. ಮಕ್ಕಳಿಗೆ ಭಯೋತ್ಪಾದಕರು ಗುಂಡನ್ನು ಹಾರಿಸುತ್ತಿದ್ದುದನ್ನು ಕಂಡ ಧೀರೆ ನೀರಜಾ ಅವರನ್ನು ರಕ್ಷಿಸಲು ಮಕ್ಕಳಿಗೆ ಹಾರಿಸಿದ ಗುಂಡು ಅವಳಿಗೆ ತಗಲುತ್ತದೆ. ಆದರೂ ಮಕ್ಕಳನ್ನು ಧೈರ್ಯದಿಂದ ಕಾಪಾಡಿದಳು. ಅಷ್ಟು ಜನರನ್ನು ಕಾಪಾಡಿದ ನೀರಜಾಳು ತನಗೆ ಬಿದ್ದ ಗುಂಡುಗಳನ್ನು ಸಹನೆಯಿಂದಲೇ ಎದುರಿಸಿದಳು. ಆ ಸಮಯದಲ್ಲಿ ವಿಮಾನ ನಿಲ್ದಾಣದ ಸಿಬ್ಬಂದಿಯವರು ಆಕೆಯನ್ನು ಆಸ್ಪತ್ರೆಗೆ ಸೇರಿಸಿದರು. ಆದರೆ ಆಕೆಯ ಪ್ರಾಣ ಪಕ್ಷಿ ಹಾರಿ ಹೋಯಿತು.... ಪಂಚಭೂತಗಳಲ್ಲಿ ಲೀನವಾಯಿತು.

ಇಂತಹ ಅದ್ಭುತ, ಮಹಾನ್ ಧೀರೇ ನೀರಜಾಳನ್ನು ಇತಿಹಾಸ ನೆನಪಿಸಿಕೊಳ್ಳಲೇಬೇಕು. ಈ ಧೀರೆ ನೀರಜಾ 7ನೇ ಸೆಪ್ಟೆಂಬರ್ 1963ರಲ್ಲಿ ಚಂಧೀಗರ್ (ಭಾರತ)ನಲ್ಲಿ ತಂದೆ ಪತ್ರಕರ್ತ ಹರೀಶ್ ಬಾನೋಟ್ ಮತ್ತು ತಾಯಿ ರಮಾ ಬಾನೋಟ್ ಅವರ ಪುತ್ರಿಯಾಗಿ ಜನಿಸಿದ್ದಳು. ಆಕೆಗೆ ಅಖಿಲ್ ಮತ್ತು ಅನೀಶ್ ಬಾನೋಟ್ ಎಂಬ ಇಬ್ಬರು ಸಹೋದರರಿದ್ದರು. ಚಂಡೀಗರ್‌ನಲ್ಲಿ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ವಿದ್ಯಾಭ್ಯಾಸ ಮುಗಿಸಿದ್ದರು. ಮುಂಬೈಯಲ್ಲಿ, ಕಾಲೇಜ್ ವ್ಯಾಸಂಗ ಮಾಡಿದರು. ಆ ಸಮಯದಲ್ಲಿ ಮಾಡೆಲಿಂಗ್ ಹುದ್ದೆಗಾಗಿ ಮೊದಲು ಗುರುತಿಸಿಕೊಂಡರು. ನಂತರ ಪ್ಯಾನ್ ಆಮ್ ಅವರೊಂದಿಗೆ ಫ್ಲೈಟ್ ಅಟೆಂಡೆಂಟ್ ಕೆಲಸಕ್ಕಾಗಿ ಅರ್ಜಿಸಲ್ಲಿಸಿ, ಆಯ್ಕೆಯಾದರು. ತನ್ನ ವೃತ್ತಿ ಮತ್ತು ಮಾಡೆಲಿಂಗ್ ಎರಡನ್ನು ಚೆನ್ನಾಗಿಯೇ ನಿಭಾಯಿಸಿದರು. ಶ್ರೀ ನರೇಶ್

ಮಿಶ್ರಾರವರೊಂದಿಗೆ ವಿವಾಹವಾಗಿದ್ದರೂ ಸುಖ ಸಂಸಾರದಿಂದ ವಂಚಿತರಾಗಿದ್ದರು. ತಮ್ಮ 23ನೇ ಹುಟ್ಟು ಹಬ್ಬದ ಎರಡು ದಿನಗಳ ಮೊದಲು ನೀರಜಾ ಬದುಕಿನ ಪಯಣವನ್ನು ವೀರತೆಯಿಂದ ಮುಗಿಸಿದರು. ಅವರಿಗೆ ಭಾರತದ ಅತ್ಯುತ್ತಮ ಶಾಂತಿಯಿಂದ "ಶೌರ್ಯ, ಅಶೋಕ ಚಕ್ರ ಪ್ರಶಸ್ತಿ" ಮತ್ತು ಪಾಕಿಸ್ತಾನ ಮತ್ತು ಯುನೈಟೆಡ್ ಸ್ಟೇಟ್ಸ್ ಸರ್ಕಾರದಿಂದ ಹಲವಾರು ಪ್ರಶಸ್ತಿ ಪುರಸ್ಕಾರಗಳನ್ನು ಮರಣೋತ್ತರವಾಗಿ ನೀಡಲಾಯಿತು.

ಇಂತಹ ಧೀರ ನೀರಜಾಳ ಕೊನೆಯ ನುಡಿ **"I had rather die than run away"** ನಾನು ಸಾಯುತ್ತೇನೆಯೇ ಹೊರತು ಓಡಿ ಹೋಗುವುದಿಲ್ಲ ಎಂಬ ದೃಢ ನಿಲುವಿನ ಸಂದೇಶ ಎಂತಹವರ ಹೃದಯವನ್ನು ತಟ್ಟುತ್ತದೆ. ತ್ಯಾಗಮಯಿ ನೀರಜಾ ಬಾನೋಟ್ ಸೇವೆಗೆ ಯಾವ ಪ್ರಶಸ್ತಿ ಪುರಸ್ಕಾರಗಳೂ ಸಾಟಿಯಲ್ಲ. ತ್ಯಾಗಮೂರ್ತಿಗೆ ಸದಾ ನಮ್ಮ ನಮನಗಳು. ಧೀರೆ ನೀರಜಾಳ ಬದುಕು, ಸೇವೆ, ಧೈರ್ಯ, ಸ್ಥೈರ್ಯ, ಕರುಣೆ, ತ್ಯಾಗಗಳು ರೇಂಜರ್‌ಗಳಿಗೆ ಸ್ಫೂರ್ತಿಯ ಸೆಲೆಯಾಗಲಿ. ಸೇವಾ ಕಾರ್ಯಗಳಿಗೆ ತೆರೆದ ಮನಸ್ಸು ಮುನ್ನುಡಿ ಬರೆಯಲಿ ಎಂಬುದೇ ನಮ್ಮ ಆಶಯ.

(xiii) ಭಾರತೀಯ ಸಂಸ್ಕೃತಿ-ಸ್ತ್ರೀ

"Culture means, What we are" ಎಂಬ ಆಂಗ್ಲ ಉಕ್ತಿಗೆ **'ಸಂಸ್ಕೃತಿ'** ಎಂಬುದು ಸರಿಯಾಗಿ ಅರ್ಥೈಸುತ್ತದೆ. ಅಂದರೆ "ನಾವು ಏನಾಗಿದ್ದೇವೆ" ಎಂದು. ವಿಶಾಲಾರ್ಥದಲ್ಲಿ ಮನಸ್ಸಿನ ಪಕ್ವತೆ, ನಾಗರಿಕತೆಯ ಬೌದ್ಧಿಕ ಸಾಧನೆ, ಸಂಸ್ಕಾರಯುತ ಸದಾಚಾರ ಬದುಕು, ಉಡುಗೆ-ತೊಡುಗೆ ಒಟ್ಟಾರೆ ಸಂಸ್ಕೃತಿಯಾಗುತ್ತದೆ. ಸುಸಂಸ್ಕೃತತ್ವ ಭಾವವನ್ನು ಹೊಂದಿರುವುದು ಸಂಸ್ಕೃತಿ. ಭವ್ಯ ಸನಾತನ ಭಾರತೀಯ ಸಂಸ್ಕೃತಿಯ ಲಕ್ಷಣವು ಸಂಸ್ಕೃತಿಯ ಆಧಾರಸ್ಥಂಭವಾಗಿದೆ.

ಭಾರತೀಯ ಸನಾತನ ಸಂಸ್ಕೃತಿಗೆ ತನ್ನದೇ ಆದ ವಿಶೇಷ ಸೊಗಡಿದೆ, ಸೊಗಸಿದೆ, ಸತ್ಯ ಇದೆ, ಸತ್ವವಿದೆ. ಪ್ರಪಂಚದಾದ್ಯಂತ ಜನಪ್ರಿಯತೆ ಇದೆ. ವಿಶ್ವದ ಅತಿ ಹಳೆಯ ಸಂಸ್ಕೃತಿಯನ್ನು ಹೊಂದಿರುವ ದೇಶ 'ಭಾರತ' ಎಂಬ ಖ್ಯಾತಿಯಿದೆ. ಈ ಸಂಸ್ಕೃತಿಯ ಆಳದ ಅರಿವು ಅತೀ ಸೂಕ್ಷ್ಮದ್ದಾಗಿದೆ. ಕಾರಣ ವೈವಿಧ್ಯತೆಯಲ್ಲಿ ಏಕತೆಯನ್ನು ಕಾಣುವ ಸೊಬಗು ಕೇವಲ ಭಾರತೀಯ ಸಂಸ್ಕೃತಿಗಿರುವಂತಹುದು. ಅದೇ ಅದರ ಶ್ರೇಷ್ಠತೆ, ವಿಶಿಷ್ಠತೆ, ಪರಿಪಕ್ವತೆ.

ಭಾರತದಲ್ಲಿ ನಾನಾ ಸಂಪ್ರದಾಯಗಳು, ಧಾರ್ಮಿಕ ಆಚರಣೆಗಳು, ನಂಬಿಕೆಗಳು, ವೈವಿಧ್ಯಮಯ ಸಾಮಾಜಿಕ ಬದುಕು, ಭಾಷೆ, ಉಡುಗೆ-ತೊಡುಗೆ, ಕಲೆ, ಕ್ರೀಡೆ, ಆಹಾರ ಪದ್ಧತಿಗಳೆಲ್ಲವೂ ವಿಭಿನ್ನ. ಆದರೂ **"ನಾವೆಲ್ಲರೂ ಒಂದೇ"** ಎಂಬ ವಿಶಾಲ ಭಾವನೆಯೇ ಈ ಸಂಸ್ಕೃತಿಯ ಜೀವಾಳ. ಒಗ್ಗಟ್ಟಿನ ಶಾಂತಿ ಮಂತ್ರವೇ ಇದರ ಆಸ್ತಿ. ಜಾತಿ-ಭೇದಗಳ ನಡುವೆಯೂ ಸಾಮರಸ್ಯದ ಸಂತಸದ ಬದುಕಿದೆ. ಪ್ರಾದೇಶಿಕ ಭೇದಗಳ ಮಧ್ಯೆಯೂ ಪರಿಪೂರ್ಣ ಮಾನವೀಯ ಭಾವನೆಗಳ ಸಂಗಮವಿದೆ. ಆಧ್ಯಾತ್ಮಿಕ ಚಿಂತನೆಯ ಅಡಿಪಾಯದ ಮೇಲೆ ನಿಂತಿರುವ ಭಾರತೀಯ ಸಂಸ್ಕೃತಿಯ ಕಟ್ಟಡವು ಎಂದಿಗೂ ಅಲುಗಾಡದು. ಅಷ್ಟೊಂದು ಭದ್ರ ಬುನಾದಿ ಇದಕ್ಕೆ ಇದೆ. ವೇದ ಉಪನಿಷತ್ತುಗಳ, ಹಿಂದಿನವರ, ಹಿರಿಯರ ಜ್ಞಾನ ಭಂಡಾರದ ಬದುಕಿನ ಸತ್ಯ ಶೋಧನೆಯ ಆವಿಷ್ಕಾರವಿದೆ. ಕಾಲಕಾಲಕ್ಕೆ ಹೊಸಹೊಸ ಜೀವಚೇತನಗಳ, ಮಹಾಜ್ಞಾನದ, ಮಹಾನ್ ವ್ಯಕ್ತಿಗಳೇನೇಕರ, ತತ್ವಜ್ಞಾನಿಗಳ ಮಹಾಪೂರವೇ ಹರಿದು ಬಂದಿದೆ. ಈ ಸಂಸ್ಕೃತಿ ನಿಂತ ನೀರಲ್ಲ, ಹರಿಯುವ ಪವಿತ್ರ ಜಲ. ಆದ್ದರಿಂದಲೇ ಭಾರತೀಯ ಸಂಸ್ಕೃತಿಯು ತನ್ನತನವನ್ನು ಉಳಿಸಿಕೊಂಡಿರುವುದು, ಹೊಸತನವನ್ನು ಪಡೆದರೂ ಹಳೆಯ ನಂಟಿನ ಅಂಟನ್ನು ಉಳಿಸಿಕೊಂಡೇ ಹೋಗುತ್ತಿದೆ. ಹಾಗಾಗಿ ಅದು ಪ್ರಜ್ವಲಿಸುತ್ತಿದೆ, ಪ್ರಕಾಶಿಸುತ್ತಿದೆ, ಉಜ್ವಲವಾಗಿದೆ. ಇಂತಹ ಅದ್ಭುತ ಜ್ಞಾನಧಾರೆಯ ಸಂಸ್ಕೃತಿ ಸಂಪತ್ತನ್ನು ನಾವು ಉಳಿಸಿ ಬೆಳೆಸುವ ಅದಮ್ಯ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾ

ಮುಂದಿನ ಪೀಳಿಗೆಗೆ ಮೌಲ್ಯಯುತವಾದ ಸಂಸ್ಕೃತಿಯನ್ನು ಉಳಿಸುತ್ತಾ ಸಾಗುವ ಕರ್ತವ್ಯ ನಮ್ಮ ಮೇಲಿದೆ. ಈ ದಾರಿಯಲ್ಲಿ ರೇಂಜರ್‌ಗಳು ಇನ್ನು ಹೆಚ್ಚಿನ ರೀತಿಯಲ್ಲಿ ಭಾರತೀಯ ಸಂಸ್ಕೃತಿಯ ಭವ್ಯತೆಯನ್ನು ಅರಿತು, ಕಲಿತು ಉಳಿಸುವ, ಆದರ್ಶ ಬದುಕಿನತ್ತ ಸಾಗಬೇಕಿದೆ.

ಭಾರತೀಯ ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಇನ್ನೊಂದು ಮುಖವೇ ಸ್ತ್ರೀ. ನಮ್ಮ ದೇಶದ ಸಂಸ್ಕೃತಿಯ ಉಳಿವಿನಲ್ಲಿ ಹೆಣ್ಣಿನ ಪಾತ್ರ ಮಹತ್ವಪೂರ್ಣದ್ದಾಗಿದೆ. ಹಿಂದಿನಿಂದಲೂ ಸ್ತ್ರೀಯರು ಅದನ್ನು ಅನೂಚಾನವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಭಾರತೀಯ ಸಂಸ್ಕೃತಿಯ ಪರಂಪರೆಯ ಬದುಕನ್ನು ತನ್ನ ಒಡಲಲ್ಲಿಟ್ಟು ಕಾಪಿಟ್ಟು ಉಳಿಸಿ, ಬೆಳೆಸಿ, ಅದಕ್ಕೊಂದು ಅರ್ಥವನ್ನು ತುಂಬಿಸುತ್ತಿದ್ದಾಳೆ. ವಿಶಾಲ ಮನೋಭಾವ, ಕರುಣೆ, ಅನುಕಂಪ, ಮಾತೃತ್ವದ ಮನೋಭಾವ, ನಿಸ್ವಾರ್ಥತೆ, ಎಲ್ಲರನ್ನೂ ತನ್ನವರೆಂದು ಕಾಣುವ ಸ್ನೇಹಪೂರಿತ ನಡೆನುಡಿ, ಲೋಕಕ್ಕೆ ಕಲ್ಯಾಣವಾಗಲಿ ಎಂಬ ಆದರ್ಶಪ್ರಾಯ ಮನೋಭಾವವನ್ನು ಹೊಂದಿರುತ್ತಾಳೆ. ಇಂದಿಗೂ ಭಾರತೀಯ ನಾರಿಗೆ ಜಗತ್ತಿನಲ್ಲಿ ಮಾನ್ಯತೆ ಇದೆ. ಇಂದಿನ ಯುವತಿಯರು ಅದರ ಜಾಡಿನಲ್ಲಿ ಸಾಗುವುದರ ಜೊತೆಗೆ ಸಂಸ್ಕೃತಿಯ ಪ್ರತಿರೂಪವಾಗಬೇಕೆಂದು ನಮ್ಮೆಲ್ಲರ ಸದಾಶಯ ಅದಕ್ಕೆ 'ಪ್ರೇರಣಾ' ಸ್ಫೂರ್ತಿ ತುಂಬಬೇಕು.

ಅದಕ್ಕೆ ಉದಾಹರಣೆಯೆಂಬಂತೆ ನಮ್ಮೆಲ್ಲರ ಕಣ್ಣೆದುರಿಗೆ ಮೂಡಿ ಬರುವ ಸುಶೀಲ ಸಂಪನ್ನೆ ಸಚ್ಚಾರಿತ್ರ್ಯಮೂರ್ತಿಯೂ, ಸರಳತೆ ಸೌಜನ್ಯತೆಯ ಸಾಕಾರರೂಪಳೂ, ಮಾತು, ಕೃತಿ, ನಡತೆ, ಆಲೋಚನೆ, ನಯವಿನಯಗಳೊಂದಿಗೆ ಅಂತರಂಗ ಬಹಿರಂಗ ಶುದ್ಧವಾಗಿ, ಸಂಸ್ಕೃತಿಯ ಸ್ತ್ರೀಲೋಕಕ್ಕೆ ಸಮರ್ಥ ಆದರ್ಶ ನಾರಿಯೆಂದರೆ **ಶ್ರೀಮಾತೆ ಶಾರದಾ ದೇವಿಯವರು. ಶ್ರೀ ರಾಮಕೃಷ್ಣ ಪರಮಹಂಸರ** ಧರ್ಮಪತ್ನಿ.

ಕೊಲ್ಕೊತ್ತಾದ ಬಾಂಕುರ ಜಿಲ್ಲೆಯ ಜಯರಾಂಬಾಟಿ ಎಂಬ ಹಳ್ಳಿಯಲ್ಲಿ ಶ್ರೀಮಾತೆ ಶಾರದಾದೇವಿಯವರು ಜನಿಸಿದರು. ರಾಮಚಂದ್ರ ಮುಖರ್ಜಿ ಹಾಗೂ ಶ್ಯಾಮಸುಂದರಿದೇವಿ ದಂಪತಿಗಳ ಪ್ರಥಮ ಮಗಳಾಗಿದ್ದು ಒಬ್ಬ ಸೋದರಿ ಹಾಗೂ ಐದು ಸೋದರರೊಂದಿಗೆ ಬಡ ಕುಟುಂಬದಲ್ಲಿ ಬೆಳೆದರು. ಮನೆಕೆಲಸದಲ್ಲಿ ನಿಪುಣೆಯಾಗಿದ್ದು ಆಕೆ ಮನೆಯ ಹಸುಗಳಿಗೋಸ್ಕರ ಹಳ್ಳ ಕೊಳ್ಳಗಳಲ್ಲಿ ಬೆಳೆದ ಹಸಿರು ಹುಲ್ಲನ್ನು, ಕೊರಳಾಳದ ನೀರಿಗೆ ಇಳಿದು ಕೊಯ್ದು ತರುತ್ತಿದ್ದಳು. ಹೊಲದಲ್ಲಿ ಕೆಲಸ ಮಾಡುವ ಕೂಲಿಗಳಿಗೆ ಆಹಾರ ಪಾನೀಯಗಳನ್ನು ತೆಗೆದುಕೊಂಡು ಹೋಗಿ ಕೊಡುತ್ತಿದ್ದಳು. ಕಟಾವಿನ ನಂತರ ಹೊಲದಲ್ಲಿ ಉದುರಿದ ಬತ್ತದ ತೆನೆಗಳನ್ನು ಆಯ್ದು

ತರುತ್ತಿದ್ದಳು. ಹಸಿದು ಬಂದ ಬಡ ಜನರಿಗೆ, ಕೂಲಿಯವರಿಗೆ ಊಟೋಪಚಾರ ನಡೆಯುತ್ತಿದ್ದ ಮನೆಯಾಗಿತ್ತು. ಅವರಿಗೆ ಐದು ವರ್ಷ ತುಂಬಿದಾಗ ಶ್ರೀರಾಮಕೃಷ್ಣ ಪರಮಹಂಸರೊಂದಿಗೆ ವಿವಾಹವೂ ಆಯಿತು.

ಒಮ್ಮೆ ಮಾತೆಯವರು ಜಯರಾಂಬಾಟಿಯಿಂದ ದಕ್ಷಿಣೇಶ್ವರಕ್ಕೆ ಪ್ರಯಾಣಿಸಬೇಕಿತ್ತು. ಅಂದಿನ ದಿನಗಳಲ್ಲಿ ಆ ಊರಿನ ಸುತ್ತಮುತ್ತ ದರೋಡೆಕೋರರ ಹಾವಳಿ ಹೆಚ್ಚಾಗಿತ್ತು. ಮಾತೆಯವರು ತಮ್ಮೂರಿನ ಕೆಲವು ಜನರ ಜೊತೆಗೆ ಸಾಗುತ್ತಿದ್ದರು. ಸ್ವಲ್ಪ ಸಮಯದ ನಂತರ ಇತರರು ಮುಂದೆ ನಡೆದು ಹೊರಟುಹೋದರು. ಸೂರ್ಯನು ಮುಳುಗಿದನು. ಕತ್ತಲಾವರಿಸಿತು. ಕಾಡಿನ ಮಧ್ಯೆ ಏಕಾಂಗಿಯಾಗಿ ಉಳಿದರು ಮಾತೆ. ಅದೇ ಹೊತ್ತಿಗೆ ಒಬ್ಬ ಭೀಮಾಕಾರದ ಕರಾಳವ್ಯಕ್ತಿ ದೊಣ್ಣೆ ಹಿಡಿದು ಅವರ ಹತ್ತಿರ ಬಂದ. "ಏಯ್! ಯಾರದು ಇಷ್ಟು ಹೊತ್ತಿನಲ್ಲಿ ಇಲ್ಲಿ ನಿಂತಿರುವುದು? ಎಲ್ಲಿಗೆ ಹೋಗುತ್ತಿದ್ದಿ ನೀನು?" ಎಂದು ಗದರಿಸಿದನು. ಆಗ ಮಾತೆಯವರು ನಮ್ರತೆಯಿಂದ "ಅಪ್ಪಾ, ನನ್ನ ಜೊತೆಯವರೆಲ್ಲ ಮುಂದೆ ಹೊರಟು ಹೋದರು. ನಾನು ದಾರಿ ತಪ್ಪಿದಂತೆ ಕಾಣುತ್ತದೆ. ನಿನ್ನ ಅಳಿಯಂದಿರು ದಕ್ಷಿಣೇಶ್ವರದ ಕಾಳಿದೇವಾಲಯದಲ್ಲಿ ವಾಸವಾಗಿದ್ದಾರೆ. ನಾನು ಅಲ್ಲಿಗೆ ಹೋಗಬೇಕು. ನೀನು ನನ್ನನ್ನು ಅವರ ಬಳಿ ಕರೆದುಕೊಂಡು ಹೋಗಿ ಬಿಟ್ಟರೆ ಅವರು ನಿನ್ನನ್ನು ತುಂಬಾ ವಿಶ್ವಾಸದಿಂದ ನೋಡುತ್ತಾರೆ" ಎಂದು ಹೇಳಿದರು.

ಆ ವೇಳೆಗೆ ಡಕಾಯಿತನ ಹೆಂಡತಿಯೂ ಅಲ್ಲಿಗೆ ಬಂದಳು. ಶ್ರೀ ಮಾತೆಯವರು ಅವಳ ಕೈ ಹಿಡಿದುಕೊಂಡು ಅತ್ಯಂತ ವಿಶ್ವಾಸದಿಂದ ಹೀಗೆ ಹೇಳುತ್ತಾರೆ. "ಅಮ್ಮ, ನಾನು ನಿಮ್ಮ ಮಗಳು ಶಾರದೆ. ನನ್ನ ಜೊತೆಯವರೆಲ್ಲಾ ಮುಂದೆ ಹೊರಟುಹೋದರು. ನಾನು ಈ ಭಯದ ಸ್ಥಿತಿಗೆ ಸಿಕ್ಕಿಕೊಂಡೆ. ಪುಣ್ಯಕ್ಕೆ ನನ್ನ ಅದೃಷ್ಟ ಚೆನ್ನಾಗಿತ್ತು, ನೀನೂ ತಂದೆಯೂ ಬಂದುಬಿಟ್ಟಿರಿ. ಇಲ್ಲದೆ ಹೋಗಿದ್ದರೆ ನನ್ನ ಗತಿ ಏನಾಗುತ್ತಿತ್ತೋ ಏನೋ ಹೇಳಲಾರೆ" ಎಂದರು. "ಮಾತೆಯವರ ಮುಗ್ಧ ಸರಳ ವಿಶ್ವಾಸಯುತ ನಡವಳಿಕೆಯು ಡಕಾಯಿತ ದಂಪತಿಗಳ ಹೃದಯವನ್ನು ಕರಗಿಸಿತು. ಹಿಂಸೆ ಮಾಡಲು ಬಂದ ಕಟುಕರನ್ನು ತಂದೆ ಎಂದು ಸಂಬೋಧಿಸಿದ ಶಾರದಾದೇವಿಯವರ ಸರಳತೆ–ಪ್ರೇಮಗಳನ್ನು ಅಳೆಯಲು ಸಾಧ್ಯವೇ? ಇಂತಹ ಪ್ರೀತಿಯ ಸೆಲೆ ಭಾರತೀಯ ಸಂಸ್ಕೃತಿಯ ಪ್ರತೀಕವಲ್ಲವೇ? **"ಶೀಲವಂತರಿಗೆ ಶಿಲೆಯೊಲಿಯಿತು"** ಎಂಬಂತೆ ಮಾತೆಯ ಗುಣಸ್ವಭಾವವಾಗಿತ್ತು. ಶ್ರೀ ಮಾತೆಯವರು ಶ್ರೀ ರಾಮಕೃಷ್ಣರಿಂದ ವಿದ್ಯೆ ಕಲಿತರು ಪತಿಯ ಸೇವೆಯಲ್ಲಿ ಪರಮಾತ್ಮನನ್ನೇ ಕಾಣುತ್ತಿದ್ದರು. ಹಾಗೆಯೇ ಶ್ರೀರಾಮಕೃಷ್ಣರೂ ಮಾತೆಯವರು 'ದೇವಿಸ್ವರೂಪಿಣಿ'

ಎಂದು ಪೂಜಿಸುತ್ತಿರುತ್ತಾರೆ. ಇದೆಂತಹ ಅದ್ಭುತಗುಣ ಅಲ್ಲವೇ? ಒಮ್ಮೆ ಶಾರದಾ ದೇವಿಯವರು ತಾನು ತಾಯಿಯಾಗುವ ಇಚ್ಛೆಯನ್ನು ಪತಿಗೆ ತಿಳಿಸಿದಾಗ ನೀನು ನಿನ್ನ ಮಕ್ಕಳಿಗೆ ಮಾತ್ರ ಮಾತೆಯಾಗಲಿಚ್ಛಿಸುವೆಯೋ ಅಥವಾ ಜಗತ್ತಿಗೇ ಮಾತೆಯಾಗಲು ಇಚ್ಛಿಸುವೆಯೋ' ಎಂದಾಗ ಮಾತೆಯವರ ಮನಪರಿವರ್ತನೆ-ಗೊಂಡಿತು. ಗುರು-ಶಿಷ್ಯೆಯರ ಸಂಬಂಧದಂತೆ ಅವರ ಬದುಕು ಸಾಗಿದ್ದು, ದಿವ್ಯಜ್ಞಾನದ ಬೆಳಕನ್ನು ಕಂಡು, ದಿವ್ಯಪ್ರೇಮದ ಸುಧೆಯನ್ನುಂಡು ತಪಸ್ವಿನಿಯೇ ಆದರು. ತಮ್ಮ ಬಳಿಗೆ ಬಂದ ಬಡಜನರು, ವಿಧವಾಸ್ತ್ರೀಯರು, ಅನಾಥರನ್ನು ಪ್ರೀತಿ ಗೌರವದಿಂದ ಕಂಡು ಅವರ ಬಾಳಿಗೆ ದೀಪವಾಗಿದ್ದರು. ಸಾಂತ್ವನ ನೀಡುತ್ತಿದ್ದರು. ಊಟೋಪಚಾರಗಳನ್ನು ಮಾಡುತ್ತಿದ್ದರು.

ಶ್ರೀ ಮಾತೆಯವರ ಸಮಗ್ರ ಬದುಕು ಒಂದು ಮಹಾ ಯಾತ್ರೆಯಂತೆ ಸಾಗಿದ್ದು, ಮಾತೃಭಾವದ ಅಸಾಧಾರಣ ವ್ಯಕ್ತಿತ್ವ ಹೊಂದಿದ್ದು ಇಂದಿಗೂ ಜಗನ್ಮಾತೆಯಾಗಿರುವುದು ಭಾರತೀಯ ಸಂಸ್ಕೃತಿ ಮತ್ತು ಸ್ತ್ರೀ ಲೋಕಕ್ಕೆ ಕಿರೀಟಪ್ರಾಯವಾಗಿರುವುದು ನಮ್ಮೆಲ್ಲರ ಸೌಭಾಗ್ಯ. **'ಪ್ರೇರಣಾ'** ಭಾರತೀಯ ಸಂಸ್ಕೃತಿಯ ಮೆರಗನ್ನು ಹೆಚ್ಚಿಸಲಿ ಎಂದು ಆಶಿಸೋಣ.

ಅತಿಥಿಗಳಿಗೆ ಸನ್ಮಾನ

(xiv) ಸಭ್ಯ–ನಾಗರಿಕ

ನಾಗರಿಕ ಶಬ್ದಕ್ಕೆ ಸುಸಂಸ್ಕೃತ ಪೌರ, ಸಂಸ್ಕಾರವಂತ ವ್ಯಕ್ತಿ, ತಿಳಿವಳಿಕಸ್ಥ, ಶಿಷ್ಟತೆವುಳ್ಳವನು ಎಂದು ಅರ್ಥೈಸಬಹುದು. ಸಭ್ಯ ನಾಗರಿಕನು ಒಂದು ಪ್ರದೇಶದ ಅಥವಾ ರಾಷ್ಟ್ರದ ಉತ್ತಮ ಪ್ರತಿನಿಧಿ. ಸಭ್ಯ ನಾಗರಿಕ ಒಂದು ದೇಶದ ಅಮೂಲ್ಯ ಆಸ್ತಿ. ದೇಶದ ಉಳಿವು, ಪ್ರಗತಿ, ಅಭಿವೃದ್ಧಿ ಹಾಗೂ ಪ್ರಸಿದ್ಧಿ ಈ ವ್ಯಕ್ತಿಯ ಮೇಲೆ ನಿಂತಿರುತ್ತದೆ. ಇಂತಹ ನಾಗರಿಕರಿಂದ ಉತ್ತಮ ಸಮಾಜ ಕಟ್ಟಲು ಸಾಧ್ಯವಾಗುತ್ತದೆ. ಅರಿವಿನ ಅಡಿಪಾಯದ ಮೇಲೆ ಶ್ರೇಷ್ಠ ನಾಗರಿಕತೆ ಬೆಳೆಯುತ್ತದೆ, ಮೆರೆಯುತ್ತದೆ, ಉಳಿಯುತ್ತದೆ.

ಸಭ್ಯ ನಾಗರಿಕನಾಗಲು, ಪಠ್ಯಕ್ರಮ ವಿದ್ಯಾಭ್ಯಾಸ, ಸರ್ಟಿಫಿಕೇಟ್, ಡಿಗ್ರಿಗಳ ಅವಶ್ಯಕತೆಗಳಿಲ್ಲ. ಆದರೆ ಉತ್ತಮ ಗುಣಸ್ವಭಾವ, ನಡೆನುಡಿ, ನಿಸ್ವಾರ್ಥ ಮನೋಭಾವ, ಗ್ರಹಣಶಕ್ತಿ, ತನ್ನಂತೆ ಇನ್ನೊಬ್ಬನನ್ನು ಅರ್ಥ ಮಾಡಿಕೊಳ್ಳುವಿಕೆ, ತತ್ವಾಧಾರ ಬದುಕು, ಆದರ್ಶ ಮೌಲ್ಯಗಳ ಪಾಲನೆ, ಒಳಿತು ಕೆಡುಕುಗಳ ಚಿಂತನೆ ಇವೆಲ್ಲವೂ ಸೇರಿದ ವ್ಯಕ್ತಿತ್ವ ಹೊಂದಿರಬೇಕು. ಒಂದು ಉತ್ತಮ ಸಮಾಜವು ಒಬ್ಬ ವ್ಯಕ್ತಿಯನ್ನು ಸಭ್ಯನಾಗರಿಕನನ್ನಾಗಿ ಬೆಳೆಸುವಲ್ಲಿ ಅಗಾಧ ಶಕ್ತಿಯನ್ನು ಪಡೆದಿರುತ್ತದೆ. ಎಂತಹ ಅಹಿತ ಪರಿಸರದಲ್ಲೂ ಚಂಚಲತೆಗೆ ಸಿಲುಕದೆ, ಅಸ್ಥಿರ ಆಲೋಚನೆಗಳಿಗೆ ಒಳಗಾಗದೆ, ತನ್ನ ಸ್ವಂತಿಕೆ, ತನ್ನತನವನ್ನು ಉಳಿಸಿ, ಬೆಳೆಸಿಕೊಳ್ಳುವ ಜವಾಬ್ದಾರಿಯು ಸಭ್ಯನಾಗರಿಕನದ್ದಾಗಿರುತ್ತದೆ, ಹಾಗೂ ರಾಷ್ಟ್ರಭಕ್ತಿ ಹೊಂದಿರುವುದು ಅವಶ್ಯಕವಾಗಿರುತ್ತದೆ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರೇಂಜರ್ ವಿಭಾಗದಲ್ಲೂ ಈ ಮಾಹಿತಿಯನ್ನು ಪಠ್ಯಕ್ರಮದ ನಿಯಮದ ಮೂಲಕ ಸ್ಪಷ್ಟೀಕರಿಸಿದೆ. 'ಪ್ರೇರಣಾ' ಅದನ್ನು ವಿಶದವಾಗಿ ವಿವರಿಸುತ್ತದೆ. ದೇಶದ ಕಾನೂನು ಕಟ್ಟಳೆಗಳನ್ನು, ಕರ್ತವ್ಯಗಳನ್ನು, ಕೂಲಂಕಷವಾಗಿ ಅರ್ಥ ಮಾಡಿಕೊಂಡು ಪಾಲಿಸುತ್ತಾ ಉಪಯುಕ್ತ ಪ್ರಜೆಯಾಗುವುದೇ ಸಭ್ಯ ನಾಗರಿಕನ ಲಕ್ಷಣ. ಪ್ರೇರಣಾ ಕಾರ್ಯಕ್ರಮದ ಮೂಲಕ ಯುವತಿಯರಲ್ಲಿ ಸಭ್ಯ ನಾಗರಿಕತೆಯ ಕುರಿತು ಸಾಕಷ್ಟು ವಿವರಣೆಗಳನ್ನು ಉದಾಹರಣೆಗಳನ್ನು ನೀಡಲಾಗುವುದು. ದೊಡ್ಡಬಳ್ಳಾಪುರದ ಸ್ಕೌಟ್ ತರಬೇತಿ ಕೇಂದ್ರದಲ್ಲಿ ಸ್ಕೌಟ್ ಆಯುಕ್ತರ ತರಬೇತಿ ಪಡೆದು **ಕರ್ನಾಟಕದ ಗೌರವಾನ್ವಿತ ಮುಖ್ಯ ಮಂತ್ರಿಗಳಾಗಿ ಸೇವೆ ಸಲ್ಲಿಸಿದ ಶ್ರೀ ಎಸ್. ನಿಜಲಿಂಗಪ್ಪನವರ ಚಿಂತನೆಯಂತೆ** "ಸ್ಕೌಟ್ ಗೈಡ್ ಇದು ಮೂಲತಃ ಚಾರಿತ್ರ್ಯ ಬೆಳೆಸುವ ಒಂದು ಚಳವಳಿಯಾಗಿದ್ದು, ನಮ್ಮ ರಾಷ್ಟ್ರದ ಅಷ್ಟೇ ಏಕೆ, ಇಡೀ ಪ್ರಪಂಚದ ಪ್ರಜಾಪ್ರಭುತ್ವ ಸಮಾಜದ ಭಾರವನ್ನು ಹೊರಲು ಹಾಗೂ ನಾವು ಯೋಗ್ಯ ನಾಗರಿಕರಾಗಲು ತರಬೇತಿ ನೀಡುತ್ತದೆ".

ಸಭ್ಯ ನಾಗರಿಕನ ಸಾಮಾನ್ಯ ಕರ್ತವ್ಯಗಳನ್ನು ಈ ರೀತಿಯಲ್ಲಿ ಗಮನಿಸಬಹುದು –

- ದೇಶಭಕ್ತಿ ಹೊಂದಿರುವುದು.
- ಸಾರ್ವಜನಿಕ ಆಸ್ತಿ ಪಾಸ್ತಿ ನಾಶಮಾಡದಿರುವುದು.
- ಮೂಲಭೂತ ಕಾನೂನು ಮತ್ತು ಹಕ್ಕುಗಳನ್ನು ತಿಳಿದಿರುವುದು ಹಾಗೂ ಪಾಲಿಸುವುದು.
- ಸಮಾಜಘಾತುಕ ಕಾರ್ಯಕ್ರಮಗಳಲ್ಲಿ ಭಾಗಿಯಾಗದಿರುವುದು.
- ದೇಶಸೇವೆಗೆ ಸದಾಸಿದ್ಧರಾಗಿರುವುದು.
- ಕರ್ತವ್ಯ ಪಾಲನೆ ಮಾಡುವುದು.
- ವಿಶಾಲ ಮನೋಭಾವ ಹೊಂದಿರುವುದು.
- ಪ್ರಗತಿಪರ ಚಿಂತನೆ ಮತ್ತು ದೇಶಕ್ಕೆ, ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ನೀಡುವುದು. ನಾಗರಿಕನು ತಾನು ವಾಸಿಸುವ ದೇಶದ ಪೌರತ್ವವನ್ನು ಹೊಂದಿರಬೇಕು. ಅಲ್ಲಿಯ ಕಾಯಿದೆ ಕಾನೂನುಗಳನ್ನು ತಿಳಿದಿರಬೇಕು. ತಾನು ಮಾಡುವ ಕೆಲಸಗಳಲ್ಲಿ ಕಾನೂನಿನ ಪ್ರಕಾರ ಯಾವುದು ಸರಿ ಯಾವುದು ತಪ್ಪು ಎಂಬ ಪರಿಜ್ಞಾನವಿರಬೇಕು. ಆಡಳಿತ ಕ್ರಮದ ಬಗ್ಗೆ ಅರಿವಿರಬೇಕು. ಕಾನೂನುಗಳಿಗೆ ತಲೆಬಾಗಬೇಕು, ಪರಿಪಾಲಿಸಬೇಕು. **'ಪ್ರೇರಣಾ'** ಮೇಲ್ಕಂಡ ಹೇಳಿಕೆಗಳಿಗೆ ಸೂಕ್ತ ಸಲಹೆಗಳನ್ನು ನೀಡುವುದು, ಪ್ರಾತ್ಯಕ್ಷಿಕೆಗಳನ್ನು ನಿಯೋಜಿಸುವುದು, ಸಂಪನ್ಮೂಲ ವ್ಯಕ್ತಿಗಳಿಂದ ಸಮರ್ಪಕ ಮಾಹಿತಿಗಳನ್ನು ಯುವತಿಯರಿಗೆ ನೀಡಲು ಸಹಾಯವಾಗುವುದು. ಇದು ಪ್ರೇರಣಾದ ಮಹತ್ವದ ಹೆಜ್ಜೆಯಾಗಿದೆ.

(xv) ಭಾರತದ ಸಂವಿಧಾನ ಕಾನೂನುಗಳು ಮತ್ತು ಮೂಲಭೂತ ಹಕ್ಕುಗಳು

ಭಾರತದ ರಾಜಕೀಯ ವ್ಯವಸ್ಥೆಯುನ್ನೊಳಗೊಂಡ, ಕಾನೂನಿಗೆ ಸಂಬಂಧಿಸಿದ ಮಹತ್ವದ ಪುಸ್ತಕ. ಭಾರತದ ಇತಿಹಾಸದಲ್ಲಿ ಮೈಲಿಗಲ್ಲು. ಅದರಲ್ಲಿ ಒಂದು ರಾಜ್ಯ ಅಥವಾ ದೇಶ ಹೇಗಿರಬೇಕು ಹಾಗೂ ಭಾರತದ ರಾಜಕೀಯ ವ್ಯವಸ್ಥೆ, ಆರ್ಥಿಕ ಸದೃಢತೆ, ನೈತಿಕ ಸ್ಥಿರತೆ, ಕಾನೂನು ಸುವ್ಯವಸ್ಥೆ, ಜಾತ್ಯತೀತತೆ, ವ್ಯಕ್ತಿಗತ ಸ್ವಾತಂತ್ರ್ಯ, ಹಕ್ಕುಗಳು, ಕರ್ತವ್ಯಗಳು ಎಲ್ಲವುಗಳಿಗೂ ಮೂಲ ಅಡಿಪಾಯವಾಗಿದೆ. ಈ ರಾಷ್ಟ್ರದ ಪ್ರಜೆಯಾಗಿರುವ ನಮಗೆ ನಮ್ಮ ದೇಶದ ಸಂವಿಧಾನದ ಅರಿವಿನ ಅಗತ್ಯತೆ ಖಂಡಿತಾ ಇದೆ. ಪ್ರತಿಯೊಬ್ಬ ನಾಗರಿಕನೂ ತನ್ನ ದೇಶದ ಕಾನೂನುಗಳ ಸಾಮಾನ್ಯ ಜ್ಞಾನವನ್ನಾದರೂ ಪಡೆದಿರಬೇಕು.

'ವಿವಿಧತೆಯಲ್ಲಿ ಏಕತೆ'ಯನ್ನು ಹೊಂದಿರುವುದು ಭಾರತ ದೇಶದ ವೈಶಿಷ್ಟ್ಯ. ಇಲ್ಲಿ ನಾನಾ ಮತ, ಧರ್ಮ, ಜಾತಿ, ಭಾಷೆ ಹಾಗೂ ಕೆಲಸಗಳನ್ನು ಕಾಣುತ್ತೇವೆ. ಈ ರೀತಿಯ ವೈವಿಧ್ಯ ನಾಗರಿಕರಿಗೆ ನಂಬಿಕೆ ನೀಡುವ ಸುವ್ಯವಸ್ಥಿತ ಕಾನೂನುಗಳಿರಬೇಕಾಗುತ್ತದೆ. ಎಲ್ಲಾ ವರ್ಗದ ಮನೋಭೂಮಿಕೆಯವರು ಒಪ್ಪುವ ಮೂಲಭೂತ ಹಕ್ಕುಗಳನ್ನು ಮತ್ತು ಕಾನೂನುಗಳನ್ನು ಹೊಂದಲು ಸಂವಿಧಾನದ ಅಗತ್ಯತೆ ಇದೆ. ಈ ಎಲ್ಲರ ಹಿತಕಾಯುವಲ್ಲಿ ಕಾನೂನುಗಳನ್ನು ಕಾರ್ಯರೂಪವಾಗಿ ತರಲು ಸಂವಿಧಾನವಿರಬೇಕು. ಜನರಿಗೆ ಪ್ರತಿಕೂಲವಾಗದಂತೆ ಸಂವಿಧಾನ ಕಾರ್ಯ ನಿರ್ವಹಿಸಬೇಕಾಗುತ್ತದೆ. ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಹಿಂದುಳಿದವರ ಆಶಯಗಳು ಗುರಿಯನ್ನು ಸಾಧಿಸಲು ಸಂವಿಧಾನವಿರಬೇಕಾಗುತ್ತದೆ. ನಮ್ಮ ದೇಶಕ್ಕೆ ಸೇರಿದವರು ಕಾನೂನಿಗೆ ಒಳಪಡುವುದು, ಕಾನೂನಿನ ಚೌಕಟ್ಟಿನಲ್ಲಿ ಸರಿ ತಪ್ಪುಗಳ ತೀರ್ಮಾನ ಕೈಗೊಳ್ಳುವುದು ಪ್ರಮುಖವಾಗುತ್ತದೆ.

ಭಾರತದ ಮುಖ್ಯಸ್ಥರು ಸಂವಿಧಾನವನ್ನು ಸ್ವಾತಂತ್ರ್ಯ ಪೂರ್ವದಲ್ಲೇ ಬ್ರಿಟಿಷರ ಮೇಲೆ ಒತ್ತಡ ಹೇರಿ ಎಲ್ಲ ವಿಧದ ಜನರಿಗೆ ಹೊಂದಿಕೊಳ್ಳುವ ಹಾಗಿರಬೇಕೆಂದು ಯೋಜನೆ ಹಾಕಲಾರಂಭಿಸಿದ್ದರು. ಸ್ವಾತಂತ್ರ್ಯಾನಂತರ ಮುಂಚೂಣಿಯ ನಾಯಕರೆಲ್ಲಾ ಒಮ್ಮತದಿಂದ ವಿಶ್ಲೇಷಿಸಿ **'ಭಾರತದ ಸಂವಿಧಾನ ಶಿಲ್ಪಿ'** ಎಂದೇ ಹೆಸರಾದ **ಡಾ। ಬಿ.ಆರ್. ಅಂಬೇಡ್ಕರ್**ರವರ ನೇತೃತ್ವದಲ್ಲಿ ಇದು ಪ್ರಾಯೋಗಿಕವಾಗಿ ಜಾರಿಗೆ ಬಂದಿತು. ಭಾರತೀಯರು ಸಂವಿಧಾನವನ್ನು ಒಪ್ಪಿಕೊಳ್ಳಬೇಕೆಂಬ ಆಶಯದ ಮೇರೆಗೆ ತುಂಬಾ ಆಳವಾಗಿ ಅಧ್ಯಯನಮಾಡಿ ಪ್ರಜಾಪ್ರಭುತ್ವ ಸರ್ಕಾರದ ನಮ್ಮ ನಾಡಿಗೆ ಹೊಸ ರೂಪದ ಕಾನೂನುಗಳನ್ನು ತರ್ಕಬದ್ಧವಾಗಿ ಚರ್ಚಿಸಿ, ಕಾರ್ಯರೂಪಕ್ಕೆ ತರಲು ಶ್ರಮಿಸಿತು, ಕಾರ್ಯಗತಗೊಳಿಸಿತು.

ಕಾನೂನುಗಳ ಮತ್ತು ಮೂಲಭೂತ ಹಕ್ಕುಗಳ ಬಗ್ಗೆ ನಾವೆಲ್ಲಾ ತಿಳಿದು ಅದರ ವಿವರವನ್ನು ನಮ್ಮ ಯುವ ಪೀಳಿಗೆಗೆ ಪರಿಚಯಿಸಬೇಕಾಗುತ್ತದೆ. ಹಾಗೆಯೇ ರೇಂಜರ್‌ಗಳು ಆ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಜೊತೆಗೆ ಪ್ರೇರಣಾ ಕಾರ್ಯಕ್ರಮದಲ್ಲಿ ಈ ವಿಧಿವಿಧಾನಗಳನ್ನು ಪ್ರಾಯೋಗಿಕವಾಗಿ ತಿಳಿಸಲು ಪ್ರಯತ್ನ ನಡೆಯುತ್ತದೆ. "Mock Parliment" ಗಳಂತಹ ಕಾರ್ಯಕ್ರಮಗಳು ಮೂಡಿ ಬರುತ್ತಿದೆ.

ಉದಾ: ತಂದೆ ತಾಯಿಯರ ಆಸ್ತಿಯಲ್ಲಿ ಗಂಡು ಮಕ್ಕಳಿಗೆ ದೊರೆಯುವ ಎಲ್ಲಾ ಪಾಲುಗಳ ಹಕ್ಕುಗಳು ಹೆಣ್ಣು ಮಕ್ಕಳಿಗೂ ಸಿಗಬೇಕೆಂಬ ಕಾನೂನು ಈಗಾಗಲೇ ಸರ್ವರಿಗೂ ತಿಳಿದಿದೆ. ಹೀಗೆ ಒಂದು ಮಸೂದೆಯು ರಾಷ್ಟ್ರಮಟ್ಟದಲ್ಲಿ ಕಾನೂನಾಗಿ ಅಧಿಕೃತವಾಗಿ ಕಾರ್ಯಗತವಾಗಬೇಕಾದರೆ ಮೊದಲಿಗೆ ಲೋಕಸಭೆಯಲ್ಲಿ ನಂತರ ರಾಜ್ಯಸಭೆಯಲ್ಲಿ ಚರ್ಚಿಸಿ, ಎರಡೂ ಕಡೆಗಳಲ್ಲಿ ಸರ್ವಾನುಮತದ ಒಪ್ಪಿಗೆ ಪಡೆದನಂತರವೇ ಗೌರವಾನ್ವಿತ ರಾಷ್ಟ್ರಪತಿಗಳ ಒಪ್ಪಿಗೆಗೆ ಕಾಯುವಂತಹುದು. ಅಲ್ಲಿ ಅದರ ಗುಣಾವಗುಣಗಳನ್ನು ಗಮನಿಸಿ ರಾಷ್ಟ್ರಪತಿಗಳು ಮನ್ನಿಸಿದಲ್ಲಿ ಕಾನೂನಾಗಿ ಹೊರಹೊಮ್ಮುತ್ತದೆ. ನಂತರ ಪ್ರಕಟಣಾ ಮಾಧ್ಯಮಗಳ ಮೂಲಕ ಹೊರ ಜಗತ್ತಿಗೆ ಕಾನೂನಿನ ಸಮರ್ಪಕ ವಿವರಣೆಯು ತಿಳಿಯಲ್ಪಡುತ್ತದೆ. ಹೀಗೆ ಒಂದು ಮಸೂದೆಯು ಕಾನೂನಾಗಿ ಹೊರಹೊಮ್ಮುತ್ತದೆ. ದೇಶದಲ್ಲಿ ಜಾರಿಯಾಗುವ ಕಾನೂನುಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳಲು ಸಂವಿಧಾನದ ಅರಿವು ಸಹಕಾರಿಯಾಗುತ್ತದೆ, ಸಂವಿಧಾನದ ಅಡಿಪಾಯದ ಮೇಲೆ ಕಾನೂನುಗಳು ನಿಂತಿರುತ್ತವೆ.

ಮೂಲಭೂತ ಕಾನೂನುಗಳು ಮತ್ತು ಮೂಲಭೂತ ಹಕ್ಕುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳದಿದ್ದರೆ ಜನರು ಅನೇಕ ತಪ್ಪುಗಳನ್ನು ಮಾಡಿ ಶಿಕ್ಷೆಗೆ ಒಳಪಡಬೇಕಾಗುತ್ತದೆ. ಇಂದಿನ ಶಿಕ್ಷಿತರಿಗೂ ನಮ್ಮ ದೇಶದ ಸಂವಿಧಾನದ ಮಾಹಿತಿಯು ಸಂಪೂರ್ಣ ಅರ್ಥ ಆಗದೆ ಇರುವುದು ಖೇದಕರ ವಿಷಯವೆನ್ನ-ಬಹುದು. ಅದೇ ಕಾರಣ ಅನೇಕ ಯುವಕರೂ, ಅಕ್ಷರಸ್ಥರು ಗೊತ್ತಿಲ್ಲದೆ ತಪ್ಪುಗಳನ್ನು ಎಸಗಿ ಕಾರಾಗೃಹ ಸೇರುವ ದುಸ್ಥಿತಿ ಬಂದೊದಗುತ್ತಿರುವುದು ಸಾಮಾನ್ಯವಾಗುತ್ತಿದೆ. ಆದ್ದರಿಂದ ಯುವಪೀಳಿಗೆಯು ಭಾರತದ ಸಂವಿಧಾನದ ವಿಧಿವಿಧಾನಗಳನ್ನು ತಿಳಿದು ಪ್ರಜ್ಞಾವಂತರಾಗಿ ಅದನ್ನು ಪಾಲಿಸಲು ಸಿದ್ಧರಾಗಬೇಕು. ರೇಂಜರ್‌ಗಳು ತಾವೂ ಸಂವಿಧಾನದ ಮಹತ್ವವನ್ನು ತಿಳಿದು ಇತರರಿಗೂ ಅದರ ಸಂದೇಶವನ್ನು ನೀಡುವಲ್ಲಿ ಪ್ರಮುಖ ಪಾತ್ರವನ್ನು ವಹಿಸಬೇಕು. ಈ ಕ್ಷೇತ್ರದಲ್ಲಿ **ಪ್ರೇರಣಾದ** ಪ್ರಯತ್ನ ಸರಿಯಾದ ಮಾಹಿತಿಯೊಂದಿಗೆ ನಡೆಯುತ್ತಲೇ ಇರಬೇಕೆಂಬುದು ನಮ್ಮೆಲ್ಲರ ಸದಾಶಯ.

(xvi) ರಾಷ್ಟ್ರ ಭಕ್ತಿ

'ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸಿ' ಎಂಬ ಉಕ್ತಿಯಂತೆ ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲು, ಶ್ರೇಷ್ಠವಾದುದು. ರಾಷ್ಟ್ರಭದ್ರವಾಗಿದ್ದರೆ, ಶಾಂತತೆಯಿಂದ ಕೂಡಿದ್ದರೆ ನಮ್ಮ ಬದುಕೂ ನೆಮ್ಮದಿ ಕಾಣುತ್ತದೆ. ನಮ್ಮ ಮನೆಯನ್ನು ನಾವು ಎಷ್ಟು ಪ್ರೀತಿಯಿಂದ, ಗೌರವದಿಂದ ಮತ್ತು ಕಾಳಜಿಯಿಂದ ನೋಡಿಕೊಳ್ಳುತ್ತೇವೆಯೋ ಹಾಗೆ ರಾಷ್ಟ್ರವನ್ನು ನೋಡಿಕೊಳ್ಳಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಿದೆ. ಸೈನಿಕರು ಹಗಲು ರಾತ್ರಿ ಗಡಿಗಳನ್ನು ಕಾಯ್ದರೆ, ದೇಶದೊಳಗಿನ ಸ್ಥಿತಿಗತಿಗಳನ್ನು ನಾಗರಿಕರು ನೋಡಿಕೊಳ್ಳಬೇಕಾಗುತ್ತದೆ. ಸಾಮಾಜಿಕ ಹಿತಾಶಕ್ತಿಯನ್ನು, ಒಗ್ಗಟ್ಟನ್ನು, ಅಭಿವೃದ್ಧಿಯನ್ನು ಸಾಧಿಸಲು ಕಂಕಣಬದ್ಧರಾಗಿರಬೇಕಾಗುತ್ತದೆ. ಮಣ್ಣಿನ ಒಂದೊಂದು ಕಣವು, ಒಂದೊಂದು ಹಸಿರೆಲೆಯೂ, ಒಂದೊಂದು ಬಿಂದೂ, ರಾಷ್ಟ್ರದಂಶವಾಗಿ ಕಾಣುವ ಮನಸ್ಸು ನಮ್ಮದಾಗಬೇಕು. **"ಜನಗಣಮನ ಅಧಿನಾಯಕ ಜಯ ಹೇ"** ರಾಷ್ಟ್ರಗೀತೆಗೆ ತಲೆಬಾಗಿ **"ನಾವೆಲ್ಲರೂ ಒಂದೇ"** ಎಂಬ ಉದ್ಘೋಷದ ಹೆಜ್ಜೆಯನ್ನಿಡಬೇಕು. ದೇಶದ ರಕ್ಷಣೆ, ಸಂರಕ್ಷಣೆಗೆ ತಲೆಬಾಗಿ ನಿಸ್ವಾರ್ಥ ಮನೋಭಾವದ ನಡಿಗೆ ನಮ್ಮದಾಗಬೇಕು. ಹಾಗಾದಲ್ಲಿ ಮಾತ್ರ "ರಾಷ್ಟ್ರ ಪ್ರೇಮ"ಕ್ಕೆ ಸಮರ್ಪಕ ಅರ್ಥ.

ಭಾರತ ದೇಶ ಪರಕೀಯರ ದಬ್ಬಾಳಿಕೆಯ ಕುಲುಮೆಯಲ್ಲಿ ನೊಂದು, ಬೆಂದು, ಬಸವಳಿದಿದ್ದರೂ ಭಾರತೀಯರ ರಾಷ್ಟ್ರ ಪ್ರೇಮ ಎಲ್ಲಾ ಸಂಕೋಲೆಗಳನ್ನೂ ಕಳಚಿಕೊಂಡು ವಿಶ್ವದಲ್ಲೇ ತನ್ನ ಛಾಪನ್ನು ಮೂಡಿಸಿದೆ. ಪ್ರಗತಿಪಥದತ್ತ ದಾಪುಗಾಲನ್ನಿಡುತ್ತಿದೆ. ತಂತ್ರಜ್ಞಾನ, ವಿಜ್ಞಾನ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರಗತಿ ಸಾಧಿಸುತ್ತಿದೆ. ಹಾಗೆಯೇ ಅಗಾಧ ಯುವ ಪೀಳಿಗೆಯನ್ನು ಹೊಂದಿದ ದೇಶವೆಂಬ ಅಗ್ಗಳಿಕೆಗೆ ಪಾತ್ರವಾಗಿದೆ.

ರಾಷ್ಟ್ರ ಪ್ರೇಮವನ್ನು ನಾವು ಹಿಂದಿನ ಅನೇಕ ತಲೆಮಾರುಗಳಿಂದಲೂ ನೋಡಿದಾಗ, ಪರಕೀಯರನ್ನು ಹೊರಗಟ್ಟುವುದರಲ್ಲಿ ಧೈರ್ಯ ಸಾಹಸ ಮೆರೆದಿರುವ ರಾಜ ಮಹಾರಾಜರುಗಳು, ಸಂಸ್ಥಾನಗಳು, ಅರಸು ಮನೆತನಗಳು, ಸೈನಿಕರು, ವೀರರು ಯುದ್ಧ ಸಾಹಸ ಮೆರೆದಿದ್ದಾರೆ. ಜೀವದ ಹಂಗನ್ನು ತೊರೆದು ಕದನಗಳಲ್ಲಿ ವೀರಸ್ವರ್ಗವನ್ನಪ್ಪಿದ್ದಾರೆ. ರಕ್ತದ ಕೋಡಿಗಳೇ ಹರಿದಿವೆ. ಇದರಲ್ಲಿ ಪುರುಷರು ತಮ್ಮ ಸಾಹಸವನ್ನು ರಾಷ್ಟ್ರ ಪ್ರೇಮವನ್ನು ಮೆರೆದಂತೆ ಅನೇಕ ಸ್ತ್ರೀಮಣಿಯರು, ರಾಣಿ–ಮಹಾರಾಣಿಯರು, ವೀರಾಗ್ರಣಿಯರು, ಕೈಯಲ್ಲಿ ಶಸ್ತ್ರ ಹಿಡಿದು ಯುದ್ಧಭೂಮಿಯಲ್ಲಿ ಕಾಳಿಮಾತೆಯಾಗಿ ಮೆರೆದಿದ್ದಾರೆ. ವಿದೇಶಿಯರನ್ನು

ಬಗ್ಗುಬಡಿದಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಂತೂ ಸಾಮಾನ್ಯ ಮಹಿಳೆಯರು ಕೂಡ ಮನೆಮಠ ತೊರೆದು ದೇಶಕ್ಕಾಗಿ ಕಣ್ಣೀರು ಸುರಿಸಿದ್ದಾರೆ. ಹೋರಾಡಿದ್ದಾರೆ. ರಾಷ್ಟ್ರಭಕ್ತಿ ಮೆರೆದಿದ್ದಾರೆ.

ಇಂತಹ ರಾಷ್ಟ್ರ ಪ್ರೇಮವನ್ನು ನಮ್ಮ ನಾಡು, ನುಡಿ, ನೆಲೆ, ಸೆಲೆಯ ಬಗ್ಗೆ ಅಭಿಮಾನವನ್ನು ಹೆಚ್ಚಿಸುವ ಕೆಲಸ ಸದಾ ನಡೆಯುತ್ತಿರಲೇಬೇಕು. **"ನನ್ನ ದೇಶಕ್ಕೆ ನನ್ನ ಕರ್ತವ್ಯವನ್ನು ಮಾಡುತ್ತೇನೆ"** ಎಂಬ ಸ್ಕೌಟ್ಸ್ ಮತ್ತು ಗೈಡ್ಸ್ ಪ್ರತಿಜ್ಞೆಯನ್ನು ಸದಾ ಪಾಲಿಸಬೇಕು. ರೇಂಜರ್ಸ್ ರಾಷ್ಟ್ರ ಪ್ರೇಮವನ್ನು **ಪ್ರೇರಣಾ** ಕಾರ್ಯಕ್ರಮಗಳ ಮೂಲಕ ಇನ್ನಷ್ಟು ಕಲಿತು ಹೊಳೆವ ವಜ್ರದಂತೆ ಪ್ರಕಾಶಿಸುವಂತಾಗಬೇಕು.

ಬೆಳವಡಿ ಮಲ್ಲಮ್ಮ–1

ಕ್ಷಾತ್ರ ತೇಜಸ್ಸನ್ನು ಮೆರೆದ ಶೂರ ರಾಣಿಯಾಗಿ ಮರಾಠರ ವಿರುದ್ಧ ಹೋರಾಡಲು **ವಿಶ್ವದಲ್ಲೇ ಪ್ರಥಮ ಬಾರಿಗೆ ಮಹಿಳಾ ಸೈನ್ಯವನ್ನು ಸಂಘಟಿಸಿದ ಮಹಿಳೆಯೆಂಬ ಹೆಗ್ಗಳಿಕೆಗೆ ಹೆಸರಾದವರೆ ಬೆಳವಡಿ ಮಲ್ಲಮ್ಮ.**

ಬೆಳವಡಿ ಮಲ್ಲಮ್ಮ ಕರ್ನಾಟಕದ ಬೆಳಗಾವಿ ಜಿಲ್ಲೆಯ ಬೆಳವಡಿ ಸಂಸ್ಥಾನದ ವೀರರಾಣಿ! ಇತಿಹಾಸಕಾರರ ಪ್ರಕಾರ ಅವಳು ಸೋಂದೆಯ ರಾಜ ಮಧುಲಿಂಗ ನಾಯಕನ ಮಗಳು. ಸಾವಿತ್ರಿಬಾಯಿ ಎಂದೂ ಹೆಸರಾಗಿದ್ದಳು.

17ನೇ ಶತಮಾನದಲ್ಲಿ ವೀರಾಗ್ರಣಿಯಾಗಿ ಮೆರೆದ ರಾಣಿ ಮಲ್ಲಮ್ಮ ಮತ್ತು ಶಿವಾಜಿಯ ನಡುವೆ 27 ದಿನಗಳ ಯುದ್ಧದಲ್ಲಿ ಶಿವಾಜಿಯು ತಾನೇ ಮುಂದೆ ನಿಂತು ಕೋಟೆಗೆ ಮುತ್ತಿಗೆ ಹಾಕಿದ. "ಎಷ್ಟೊ ರಾಜರುಗಳನ್ನು ಗೆದ್ದ ಶಿವಾಜಿಗೆ ಬೆಳವಡಿಯ ದೇಸಾಯಿ ವಂಶದ ಹೆಣ್ಣು ಮಲ್ಲಮ್ಮನನ್ನು ಸೋಲಿಸಲಾಗದಂತಾಗಿತ್ತು. ಯುದ್ಧದಲ್ಲಿ ಶಿವಾಜಿಯ ಸೈನಿಕನು ಅವಳು ಸವಾರಿ ಮಾಡುತ್ತಿದ್ದ ಕುದುರೆಯ ಕಾಲನ್ನು ಕತ್ತರಿಸಿದಾಗ ಅವಳು ಕೆಳಗೆ ಬಿದ್ದಳು. ಆದರೂ ಎದೆಗೆಡದೆ ಎದ್ದು, ವೀರಗಚ್ಚೆ ಹಾಕಿ ಹೋರಾಟವನ್ನು ಮುಂದುವರೆಸಿದಳು. ಸೈನಿಕರು ಆಕೆಯನ್ನು ಬಂಧಿಸಿದರು. ನಂತರ ಶಿವಾಜಿಯ ಬಳಿ ಕರೆದುಕೊಂಡು ಹೋದರು. ಶಿವಾಜಿಯು ಆಕೆಯನ್ನು ಹೊಗಳಿ ಈ ರೀತಿ ಹೇಳಿದನು. **"ನಾನು ತಪ್ಪು ಮಾಡಿದೆ, ತಾಯಿ, ದಯವಿಟ್ಟು ನನ್ನನ್ನು ಕ್ಷಮಿಸಿ. ನನಗೆ ನಿಮ್ಮ ರಾಜ್ಯ ಬೇಕಿಲ್ಲ"** ಎಂದು ಹೇಳುತ್ತಾ ಬಿಡುಗಡೆ ಮಾಡಿದನು. ಇಂತಹ ಸ್ತ್ರೀ ರತ್ನದ ರಾಷ್ಟ್ರಭಕ್ತಿಯನ್ನು ಪ್ರೇರಣಾ ಮಕ್ಕಳು ಅರಿತು, ರಾಷ್ಟ್ರಪ್ರೇಮವನ್ನು ವಿಧವಿಧ ಸನ್ನಿವೇಶಗಳಲ್ಲಿ, ವಿವಿಧ ರೀತಿಯಲ್ಲಿ ತೋರ್ಪಡಿಸಿದರೆ ಅದೆಂತಹ ಸೌಭಾಗ್ಯ. ಇದೇ ಭಾರತ ಮಾತೆಗೆ ತೋರುವ ರಾಷ್ಟ್ರಪ್ರೇಮ!

ಮಹಾದೇವಿ ತಾಯಿ–2

ಅರಸು ಮನೆತನದ ಹಿನ್ನೆಲೆಯಿಲ್ಲದ, ಅಧಿಕಾರದ ಶಕ್ತಿ ಸಾಮರ್ಥ್ಯವಿಲ್ಲದ, ಪ್ರಭಾವಿ ಮನೆತನವಲ್ಲದ ಒಬ್ಬ ಸಾಮಾನ್ಯ ಹಳ್ಳಿ ಹೆಣ್ಣುಮಗಳೊಬ್ಬಳು ಧೀರೆಯಾಗಿ, ದಿಟ್ಟತನದಿಂದ ಸ್ವಾತಂತ್ರ್ಯ ಪೂರ್ವ ಭಾರತದ ಹೋರಾಟಗಾರ್ತಿಯೊಬ್ಬರ ರಾಷ್ಟ್ರಪ್ರೇಮದ ಜೀವನದ ಗಾಥೆಯನ್ನು ನೋಡೋಣ.

ಬೆಂಗಳೂರಿನ ಹೆಸರಾಂತ ಗಾಂಧಿ ಭವನದ ಪಕ್ಕದಲ್ಲೊಂದು ಪ್ರಶಾಂತ ಆಶ್ರಮ–ವಲ್ಲಭ ನಿಕೇತನ. ಈ ಆಶ್ರಮ ವಲ್ಲಭನಿಕೇತನ ವಿನೋಬ ಆಶ್ರಮವೆಂದು ಪ್ರಸಿದ್ಧವಾಗಿದೆ. ಈ ಆಶ್ರಮದ ಒಡತಿ ದೇಶಭಕ್ತಳಾದ ಓರ್ವ–ಸ್ತ್ರೀ, ಸನ್ಯಾಸಿನಿ. ಈಕೆಯೇ **'ಮಹಾದೇವಿ ತಾಯಿ'** ಆಶ್ರಮದವರಿಗೆ ಈಕೆ **'ತಾಯಿಯೇ'** ಆಗಿದ್ದರು.

ಮಹಾದೇವಿ ತಾಯಿಯವರು 1–10–1906ರಲ್ಲಿ ಜನಿಸಿದರು. ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ದೊಡ್ಡಮನೆ ಕುಟುಂಬ ಸಿದ್ಧಾಪುರಕ್ಕೆ ಸೇರಿದವರು. ಇವರ ವಿದ್ಯಾಭ್ಯಾಸ 5ನೇ ತರಗತಿವರೆಗೆ ನಡೆದಿದ್ದು, ಸಂಸ್ಕೃತ, ಹಿಂದಿ, ಮರಾಠಿ ಭಾಷೆಯಲ್ಲಿ ಉತ್ತಮ ಪಾಂಡಿತ್ಯ ಹೊಂದಿದ್ದರು.

ಹಳ್ಳಿಯ ಸುಸಂಸ್ಕೃತ ಪರಿಸರದಲ್ಲಿ ಬೆಳೆದು ಹತ್ತು ವರ್ಷದವಳಾಗಿರುವಾಗ ಮದುವೆಯಾಗಿ ಗಂಡನನ್ನು ಕಳೆದುಕೊಂಡು ವಿಧವೆಯಾದರು. ಸಮಾಜದ ಅಂಕು ಡೊಂಕುಗಳನ್ನು ತಿದ್ದುವ ಮನೋಭಾವದೊಂದಿಗೆ ಸಮಾಜಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುವ ಪ್ರೇರಣಾ ಶಕ್ತಿಯನ್ನು ಪಡೆದು ದೇಶಸೇವೆಗಾಗಿ ಮುಂದಾದರು.

ಆಂದೋಲನವನ್ನು ನಿಲ್ಲಿಸುವಂತೆ ಆಜ್ಞೆ ಹೊರಡಿಸುತ್ತಿದ್ದ ಬ್ರಿಟಿಷರ ಶಿಕ್ಷೆಗೆ ಮೊದಮೊದಲು ಹೆದರಿ, ಬೇಕಾದಷ್ಟು ಹೊಡೆತ ತಿಂದು, ಒಂದು ಸಲ ಜೈಲಿಗೆ ಹೋಗಿ ಬಂದ ಮೇಲೆ, ಧೈರ್ಯವಂತರಾಗಿ ಮಹಾದೇವಿಯವರು ಹೆಚ್ಚಿನ ಜವಾಬ್ದಾರಿಯೊಂದಿಗೆ ಮುಖಂಡತ್ವ ವಹಿಸಿದರು.

1943ರಲ್ಲಿ ಹರಿಜನ ಯಾತ್ರೆಯ ನಿಮಿತ್ತವಾಗಿ ಬಾಪೂಜಿ ಕರ್ನಾಟಕಕ್ಕೆ ಬಂದಾಗ ಮಹಾದೇವಿಯ ಆನಂದಕ್ಕೆ ಪಾರವೇ ಇಲ್ಲವಾಯ್ತು. ಬಾಪೂಜಿಯವರನ್ನು ಭೇಟಿಯಾಗಲು ಕಾದು ಕುಳಿತ ಜನರೊಂದಿಗೆ ರಾತ್ರಿಯೆಲ್ಲ ಜಾಗರಣೆ ಮಾಡಿ, ಬೆಳಗಿನ ಜಾವ ನಾಲ್ಕು ಗಂಟೆಗೆ ಪ್ರಾರ್ಥನಾ ಸಮಯಕ್ಕೆ ಘಂಟೆ ಹೊಡೆಯಲು ಹೊರಬಂದಾಗ, ನೂಲುತ್ತಾ ಕುಳಿತ ಮಹಾತ್ಮರನ್ನು ಕಂಡು ವಂದಿಸಿ, ತಮ್ಮ ಪರಿಚಯ ತಿಳಿಸಿದರು. ಆಗ ಗಾಂಧೀಜಿಯವರು "ವರ್ಧಾಕ್ಕೆ ಬರುತ್ತೀಯಾ?

ಎಂದರಷ್ಟೆ. ಮುಂದೆ ವರ್ಧಾಕ್ಕೆ ತೆರಳಿ ಗಾಂಧೀಜಿಯವರ ಎಲ್ಲ ಪರೀಕ್ಷೆಗಳಲ್ಲೂ ಇವರು ಉತ್ತೀರ್ಣರಾದರು. ಕಠಿಣವಾದ ಶಿಸ್ತಿನ ಜೀವನಕ್ಕೆ ಒಗ್ಗಿಸಿಕೊಂಡರು. ನೂಲು ತೆಗೆಯುವುದು, ಜನರ ಶುಶ್ರೂಷೆ, ಹರಿಜನಸೇವೆ ಮಾಡಿದರು.

ಮಹಾದೇವಿಯವರು ತಮ್ಮ ಜೈಲು ವಾಸದ ಅನುಭವಗಳನ್ನು ಹೀಗೆ ಹೇಳುತ್ತಾರೆ. "ಎರಡನೆಯ ಸಲ ಹಿಂಡಲಗಿ ಜೈಲಿಗೆ ಹಾಕಿದಾಗ, ಕರ್ನಾಟಕದವರು ಕೆಲವೇ ಕೆಲವು ಜನರಿದ್ದರು. ನಮ್ಮ ಜೊತೆಗೆ ಕ್ರಿಮಿನಲ್ ಖೈದಿಗಳನ್ನು ತಂದು ತುಂಬಿದರು. ಇವರು ನಮ್ಮ ಪ್ರಾರ್ಥನೆ, ಶ್ಲೋಕ, ಪಠಣಗಳಿಗೆ ಅಡ್ಡಿಯಾಗಿದ್ದು, ಅವರಿಂದ ಬೇರೆಯಾಗಲು ನಾವು ಇಚ್ಛಿಸಿದೆವು. ಆದರೆ ಜೈಲಿನ ಅಧಿಕಾರಿಗಳು ಆಕ್ಷೇಪಿಸಿದರು. ಬ್ರಿಟಿಷ್ ಸರ್ಕಾರದ ವಿರುದ್ಧ ಉದ್ವೇಗಗೊಂಡು ಕೈಬೊಕ್ಕೆ ಬಂದರೂ ದಪ್ಪ ಉಡುಪುಗಳನ್ನು ಎಂಟು ಗಂಟೆಗಳ ಕಾಲ ಹೊಲೆದು ಕೊಟ್ಟು, ಸರ್ಕಾರದ ನಿಯಮದ ಪ್ರಕಾರ ನಾವು ಮಜೂರಿ ತೀರಿಸುತ್ತೇವೆ. ಆದರೆ ಕ್ರಿಮಿನಲ್ ಖೈದಿಗಳೊಂದಿಗೆ ಒಂದೇ ಕೊಠಡಿಯಲ್ಲಿರಲು ಹಿಂಸೆ ಆಗುತ್ತದೆ, ನಾವು ದೇಶಕ್ಕಾಗಿ ಮಡಿಯಲು ಬಂದ ಖೈದಿಗಳು" ಎಂದಾಗ, ಜೈಲಿನ ಅಧಿಕಾರಿ ಈಕೆಯದು ಪ್ರತಿಷ್ಠೆಯ ಮಾತು ಎಂದುಕೊಂಡರು. ಮಾರನೆ ದಿನ "ನನ್ನನ್ನು ಕಠಿಣ ಶಿಕ್ಷೆಗೆ ಒಳಪಡಿಸಿ, ಗಾಳಿ ಬೆಳಕಿಲ್ಲದ ಸಣ್ಣ ಸೆಲ್ಲಿಗೆ ಹಾಕಿದರು. ಮಲ ಮೂತ್ರ ವಿಸರ್ಜನೆಗೆ ಅಲ್ಲಿರುವ ಅನಾನುಕೂಲತೆಯನ್ನು ನೆನಪಿಸಿಕೊಳ್ಳಲೂ ಅಸಹ್ಯ. ಅಲ್ಲಿದ್ದ ಹದಿನೆಂಟು ದಿನಗಳೂ ನಾನು ಒಂದು ತೊಟ್ಟು ನೀರೂ ಕುಡಿಯದೆ, ಕೊಟ್ಟ ಆಹಾರವನ್ನು ನಿರಾಕರಿಸಿದೆ." ಎನ್ನುವ ಮಾತಿನಲ್ಲಿ ಇದೆಂತಹ ರಾಷ್ಟ್ರಭಕ್ತಿ ಇವರದು! ಸ್ವಾಭಿಮಾನ ಮೆಚ್ಚುವಂತಹುದು. ಸ್ವಾತಂತ್ರ್ಯಾನಂತರ ಆಚಾರ್ಯ ವಿನೋಬಾರವರ ಭೂದಾನ ಆಂದೋಲನದಲ್ಲಿ ಪಾಲ್ಗೊಂಡು ಭಾರತಾದ್ಯಂತ ಪಾದಯಾತ್ರೆ ಮಾಡಿದರು. ದಿನಾಂಕ 6–8–2006ರಲ್ಲಿ ದೈವಾಧೀನರಾದರು. ಅನೇಕ ಪ್ರಶಸ್ತಿ ಬಿರುದುಗಳು ಇವರಿಗೆ ಸಂದಿವೆ. 'ವಿಶ್ವನೀಡಂ'

ಆಶ್ರಯವು ಬೆಂಗಳೂರಲ್ಲಿದ್ದು ಇವರ ಮಾರ್ಗದರ್ಶನ ಪಡೆದಿದೆ. ಇಂತಹ ದೇಶಭಕ್ತಿ ಚೇತನ ಮಹಾದೇವಿ ತಾಯಿಯು ನಮ್ಮ ಯುವತಿಯರಿಗೆ ಪ್ರೇರಣೆಯಾಗಲಿ. **'ಪ್ರೇರಣಾ'** ರಾಷ್ಟ್ರಪ್ರೇಮವನ್ನು ಬೆಳೆಸಲಿ.

9. ಪ್ರೇರಣಾ ಕಾರ್ಯಕ್ರಮಕ್ಕೆ ಮಾರ್ಗಸೂಚಿ

ಸಂಪನ್ಮೂಲ ವ್ಯಕ್ತಿಗಳ ಆಯ್ಕೆ :

ಸಂಪನ್ಮೂಲ ವ್ಯಕ್ತಿಗಳು ವಾಗ್ಮಿಗಳಾಗಿರಬೇಕು ಮತ್ತು ರೇಂಜರ್ ವಯಸ್ಸಿನ ಯುವತಿಯರಿಗೆ ಮನಮುಟ್ಟುವಂತೆ ಮಾತನಾಡುವವರಾಗಿರಬೇಕು.

ವ್ಯಕ್ತಿತ್ವ / ವೃತ್ತಿ ವಿಕಾಸ :

ವ್ಯಕ್ತಿತ್ವ ವಿಕಾಸ : ಆತ್ಮ ವಿಶ್ವಾಸ, ಪ್ರೇರಣೆ, ವಿಷಯಗಳ ವಿಶ್ಲೇಷಣೆ, ಉತ್ತಮ ಸಂವಹನ, ಆಲಿಸುವಿಕೆ, ಕೌಶಲ್ಯಗಳು, ಭಾಷಣ ಕಲೆ, ನಾಯಕತ್ವ, ಇವುಗಳಲ್ಲಿ ಮಾಹಿತಿ ನೀಡುವುದು.

ವೃತ್ತಿ ವಿಕಾಸ :

ಯುವತಿಯರಿಗೆ ಅವಕಾಶವಿರುವ ಗ್ರಾಮದಿಂದ ಅಂತಾರಾಷ್ಟ್ರೀಯ ಮಟ್ಟದವರೆಗಿನ ವೃತ್ತಿ ಅವಕಾಶಗಳು. ಅದರ ತಯಾರಿಯ ಬಗ್ಗೆ ತಿಳಿದಿರುವ ಗ್ರಾಮೀಣ / ನಗರವಾಸಿಯಾದ ಮಹಿಳೆ / ಗೃಹಿಣಿ, ಅಂತೆಯೆ ಯುವತಿಯು ಗೃಹಿಣಿಯಾಗಲು ನಿರ್ಧರಿಸಿದಲ್ಲಿ, ಅಲ್ಲಿಯ ನಡವಳಿಕೆಯ ಬಗ್ಗೆ, ಕಿವಿಮಾತು ನೀಡುವ ಮಹಿಳೆ / ಗೃಹಿಣಿಯಾಗಿರಬೇಕು. ಈ ಬಗ್ಗೆ ವಿಶೇಷ ಮಾಹಿತಿ.

ಸಾಧಕ ಮಹಿಳೆ :

ಶೂನ್ಯದಿಂದ ಸಾಧನೆ ಮಾಡಿದವರು – ಜೀರೋ–ಟು–ಹೀರೋ ಗುಡಿಸಲಿನಿಂದ ಅರಮನೆಗೆ

- ಕೌಶಲದಲ್ಲಿ ಸಾಧನೆ – ಆಹಾರ ಸರಬರಾಜು, ಉಡುಪುಗಳ ವಿನ್ಯಾಸಕಿ ಇತ್ಯಾದಿ
- ಉನ್ನತ ಹುದ್ದೆಯ ಸಾಧನೆ – ಪೋಲೀಸ್, ಸೈನ್ಯ, ಲಾಯರ್ (ಜಡ್ಜ್)

ಇತ್ಯಾದಿ

- ವಿವಿಧ ಕ್ಷೇತ್ರಗಳಲ್ಲಿ ಸಾಧನೆ – ವಿಜ್ಞಾನಿ, ಸಾಹಿತ್ಯ, ಕಲೆ, ರಾಜಕೀಯ, ಸಾಂಸ್ಕೃತಿಕ, ಜನಪದ
- ಸಾಹಸ – ಪರ್ವತಾರೋಹಣ, ಚಾರಣ, ಈಜುಗಾರರು, ಅನ್ವೇಷಕರು ಇತ್ಯಾದಿ
- ಸಮಾಜ ಸೇವೆ – ಗಿಡಮರ ನೆಡುವುದು, ಸ್ವಚ್ಛತೆ, ಅಂಗವಿಕಲರ ಸೇವೆ, ಅನಾಥಾಶ್ರಮ ಭೇಟಿ, ಸಂಘ ಸಂಸ್ಥೆಗಳಲ್ಲಿ ಉನ್ನತ ಸಾಧನೆ.
- ಆಟೋಟ
- ವಾಣಿಜ್ಯ ವ್ಯಾಪಾರ
- **ಆಪ್ತ ಸಲಹೆ** : ಪೌಷ್ಟಿಕ ಆಹಾರ, ಸಾಮಾನ್ಯ ರೋಗಗಳು ಮತ್ತು ನ್ಯೂನತೆಗಳು, ಮಾನಸಿಕ ಅಸ್ವಸ್ಥತೆ, ಯೋಗ, ಆಯುರ್ವೇದ, ಪ್ರಕೃತಿ ಚಿಕಿತ್ಸೆ ಆರೋಗ್ಯ ರಕ್ಷಣೆಯ ಆವಿಷ್ಕಾರಗಳು, ಋತುಚಕ್ರ"ಹ್ಯಾಪಿ ಪಿರಿಯಡ್ಸ್", ಲೈಂಗಿಕ ಶಿಕ್ಷಣ ಮುಂತಾದವುಗಳ ಬಗ್ಗೆ ಮಾತನಾಡಬಲ್ಲ ವೈದ್ಯಕೀಯ ತಜ್ಞೆ,
- **ಕಾನೂನಿನಲ್ಲಿರುವ ಸೌಲಭ್ಯಗಳು** : ಗ್ರಾಹಕರ ಹಕ್ಕುಗಳು, ನಾಗರಿಕನ ಹಕ್ಕುಗಳು, ಹೆಣ್ಣು ಶಿಶುಹತ್ಯೆ, ಬಾಲ್ಯ ವಿವಾಹ, ವರದಕ್ಷಿಣೆ, ವಿವಾಹ ವಿಚ್ಛೇದನ, ಜಾತಿ, ವೃತ್ತಿಯಲ್ಲಿ ಲೈಂಗಿಕ ಕಿರುಕುಳ, ದತ್ತು ತೆಗೆದುಕೊಳ್ಳುವುದು – ಇವುಗಳ ಬಗ್ಗೆ ಮಾತನಾಡಬಲ್ಲ, ಮಹಿಳಾ ವಕೀಲರು
- **ಸ್ವರಕ್ಷಣೆಯ ವಿಧಾನಗಳು** : ಸ್ವರಕ್ಷಣೆಗೆ ಬೇಕಾದ ಕೌಶಲಗಳು (ಕರಾಟೆ, ಜೂಡೊ, ಇತ್ಯಾದಿ), ಆರಕ್ಷಕರ ಸಹಾಯ ಪಡೆಯುವ ವಿಧಾನಗಳ ಬಗ್ಗೆ ತಿಳಿಸಬಲ್ಲ ಮಹಿಳಾ ಪೊಲೀಸ್
- **ಗುಂಪು ಸಂಭಾಷಣೆ** : ಗುಂಪುಗಳಿಗೆ ವಿಷಯದ ಚೀಟಿಯನ್ನು ನೀಡಿ 10 ನಿಮಿಷ ಆ ವಿಷಯದ ಬಗ್ಗೆ ಮುಕ್ತವಾಗಿ ಆಲೋಚಿಸಲು, ಚರ್ಚಿಸಲು ಅವಕಾಶ ನೀಡುವುದು.

ಒಂದೊಂದು ನಿರ್ಣಯವನ್ನು ಗುಂಪಿನಲ್ಲಿ ಒಬ್ಬೊಬ್ಬರು ಒಂದು ನಿಮಿಷ ಮಂಡಿಸಬಹುದು – (20 ನಿಮಿಷ)

ರೇಂಜರ್ ನಾಯಕಿಯರನ್ನು ಒಂದೊಂದು ಗುಂಪಿನಲ್ಲಿ ಸಲಹೆಗಾರ್ತಿ/ ವೀಕ್ಷಕರಾಗಿ ನೇಮಿಸುವುದು.

ವಿಜೇತರನ್ನು ಕೆಳಗಿನಂತೆ ನಿರ್ಣಯಿಸಬಹುದು

ವಿಷಯ ಪ್ರಭುತ್ವಕ್ಕೆ : 5 ಅಂಕ

ಮಂಡಿಸಿದ ವೈಖರಿಗೆ : 2 ಅಂಕ

ಒಂದೊಂದು ಉತ್ತಮ ಮಂಡನೆಗೆ : 1/2 ಅಂಕ (ಅರ್ಧ)

- **ಲಿಖಿತ ರಸಪ್ರಶ್ನೆ :** ಮಹಿಳೆಯರ ಕುರಿತಾದ 25 ರಸ ಪ್ರಶ್ನೆಗಳನ್ನು ನೀಡಲಾಗುವುದು. (ಉತ್ತರಿಸಲು ಸಮಯ 1/2 ಗಂಟೆ) ಉತ್ತರಿಸಿದ ನಂತರ ಸಂಗ್ರಹಿಸಿ ಪ್ರಥಮ 3 ಸ್ಥಾನಗಳನ್ನು ಪ್ರಕಟಿಸುವುದು.
- **ಯುವ ಧ್ವನಿ :** ಒಂದೊಂದು ವಿಷಯುವನ್ನು ಪ್ರತಿಗುಂಪಿಗೂ ನೀಡಲಾಗುವುದು, ಗುಂಪುಗಳು ಸೂಚನೆಯನ್ನು ಅನುಸರಿಸಿ ಕಾರ್ಯ ನಿರ್ವಹಿಸಬೇಕು.

ಸೂಚನೆಗಳು :

1. ವಿಷಯವನ್ನು ಓದಿ ಅರ್ಥ ಮಾಡಿಕೊಳ್ಳಿ – 2 ನಿಮಿಷ
2. ವಿಷಯ ಕುರಿತಾಗಿ ಸ್ಫೂರ್ತಿಯಿಂದ ಚರ್ಚಿಸಿ – 5 ನಿಮಿಷ
3. ವಿಷಯ ಕುರಿತು ನಿಮ್ಮ ಪಾತ್ರ ಯೋಚಿಸುತ್ತಾ ನೀವೇನು ಮಾಡುವಿರಿ ಎಂದು ಹೇಳುತ್ತಾ ಹೋಗಿ. ವರದಿಗಾರರು ಅದನ್ನು ಬರೆದುಕೊಳ್ಳುವರು,
4. ಭಿತ್ತಿ ಚಿತ್ರ (ಪೋಸ್ಟರ್) ತಯಾರಿಸಿ – ಬಣ್ಣವನ್ನು ತುಂಬಬಹುದು. (10 ನಿಮಿಷ)
5. ಭಿತ್ತಿ ಚಿತ್ರ ಮತ್ತು ನಿಮ್ಮ ನಿರ್ಣಯಕ್ಕೆ ಅನುಗುಣವಾಗಿ ಘೋಷಣಾ ವಾಕ್ಯವನ್ನು ರಚಿಸಿ ಭಿತ್ತಿ ಚಿತ್ರದಲ್ಲೇ ಬರೆಯಿರಿ – 3 ನಿಮಿಷ
6. ಸಾಹಿತ್ಯದಲ್ಲಿ ಅಭಿರುಚಿ ಇದ್ದವರು ಈ ವಿಷಯದ ಬಗ್ಗೆ ಅದೇ ಸಮಯದಲ್ಲಿ ಒಂದು ಲೇಖನ ಬರೆಯಬಹುದು.

ಸೂಚನೆ : ಲಿಖಿತ ಯುವಧ್ವನಿಯನ್ನು ಸಂಗ್ರಹಿಸಿ. ತೀರ್ಪುಗಾರರನ್ನು ನಿರ್ಧರಿಸಿ

ಅ) ನಿರ್ಣಯಕ್ಕೆ 10 ಅಂಕಗಳು

ಆ) ಭಿತ್ತಿ ಚಿತ್ರ 7 ಅಂಕಗಳು

ಇ) ಘೋಷಣೆ 3 ಅಂಕಗಳು

ಈ) ಲೇಖನಕ್ಕೆ 5 ಅಂಕಗಳು

ಎಲ್ಲಾ ಬರಹಗಳನ್ನು ಪ್ರದರ್ಶಿಸಲಾಗುವುದು. ಅದರಲ್ಲಿ ಉತ್ತಮವಾದ 3 ಬರಹಗಳನ್ನು ಪ್ರಕಟಿಸಲಾಗುವುದು.

- **ಚರ್ಚೆ** : ಚರ್ಚೆಯ ವಿಷಯವನ್ನು ಮೊದಲನೆ ದಿನವೇ ಪ್ರಕಟಿಸಬೇಕು ವಿಷಯ **ಪರ** ಮತ್ತು **ವಿರೋಧ** ಮಾತನಾಡುವವರ ಹೆಸರುಗಳನ್ನು (ಸಮ ಸಂಖ್ಯೆಯಲ್ಲಿ) ಸಂಗ್ರಹಿಸಬೇಕು. ಈ ಚರ್ಚೆಗೆ ಬಂದಿರುವ ರೇಂಜರ್‌ಗಳಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಮಾಡುವುದು,

  ಇಬ್ಬರು ನಿರ್ಣಾಯಕರನ್ನು ನೇಮಿಸುವುದು.

  ಅಧ್ಯಕ್ಷರು ವೇದಿಕೆಯ ಮೇಲೆ ಪರ ಮತ್ತು ವಿರೋಧ ಮಾತನಾಡುವ ಅಭ್ಯರ್ಥಿಗಳೊಂದಿಗೆ ಕುಳಿತುಕೊಳ್ಳುವರು.

  ಚರ್ಚಾ ವಿಷಯವನ್ನು ಅಧ್ಯಕ್ಷರು ಘೋಷಿಸುವರು ಮತ್ತು ಪರ, ವಿರೋಧ ಚರ್ಚೆಯನ್ನು ನಿಯಂತ್ರಿಸುವರು. ಒಬ್ಬ ಅಭ್ಯರ್ಥಿಗೆ ಮಾತನಾಡಲು 2 ನಿಮಿಷ ಅವಕಾಶ.

  ಅಧ್ಯಕ್ಷರು ಚರ್ಚಾಕೂಟ ಕುರಿತು ಮಾತನಾಡುವುದು.

  ನಿರ್ಣಾಯಕರು ಮೂರು ಬಹುಮಾನಗಳನ್ನು ಪ್ರಕಟಿಸುವರು.

  ಮೇಲ್ಕಂಡ ಎಲ್ಲಾ 4 ಚಟುವಟಿಕೆಗಳಿಗೂ ತಲಾ 3 ಬಹುಮಾನಗಳನ್ನು ವಿತರಿಸಬೇಕು.

- **ಶಿಬಿರಾಗ್ನಿ** : ಶಿಬಿರಾಗ್ನಿಗೆ ವಿಷಯಗಳನ್ನು ಆಯ್ದು ಮೊದಲನೇ ದಿನವೆ ಗುಂಪುಗಳಿಗೆ ನೀಡಿ, ಅವರುಗಳು ಕಿರು ನಾಟಕವನ್ನು ತಯಾರು ಮಾಡಿ ಪ್ರದರ್ಶಿಸುವಂತೆ, ಹಾಗೂ ಒಂದು ದೇಶಭಕ್ತಿ ಗೀತೆಗೆ ನೃತ್ಯ ಮಾಡಲು ಹೇಳುವುದು.

10. ಮೂರು ದಿನಗಳ ಪ್ರೇರಣಾ ಕಾರ್ಯಕ್ರಮಗಳು (ಶಿಬಿರ ವಾಸ)

ಮೊದಲನೆಯ ದಿನ

9.00 ಆಗಮನ ಮತ್ತು ನೋಂದಣಿ

11.0 ಧ್ವಜಾರೋಹಣ

11.30 ಪ್ರಸ್ತಾವನೆ, ದಿನಚರಿ, ನಿಯಮ & ಕರ್ತವ್ಯಗಳು, ಗುಂಪು ರಚನೆ ನಿರೀಕ್ಷಿತ ಉದ್ದೇಶ (ಪ್ರಶಿಕ್ಷಣಾರ್ಥಿಗಳಿಂದ) ಕಾರ್ಯಕ್ರಮದ ಉದ್ದೇಶ

1.00. ಭೋಜನ ವಿರಾಮ

2.00. ಧ್ವಜಾರೋಹಣ

2.30. ಗುಂಪು ಸಂಭಾಷಣೆ

3.30. ಪ್ರವಚನ – ಸಂಪನ್ಮೂಲ ವ್ಯಕ್ತಿ, ವೃತ್ತಿ, ವ್ಯಕ್ತಿತ್ವ ವಿಕಾಸ

4.30. ಚಹಾ ವಿರಾಮ

5.00. ಯುವ ಧ್ವನಿ

6.00. ಪ್ರವಚನ – ಸಾಧಕ ಮಹಿಳೆಯಿಂದ

6.30. ಶಿಬಿರಾಗ್ನಿಗೆ ತಯಾರಿ

7.30. ಭೋಜನ ವಿರಾಮ

8.30. ಶಿಬಿರಾಗ್ನಿ

10.00. ಶುಭರಾತ್ರಿ

ಎರಡನೆಯ ದಿನ

6.30. ಬಿ.ಪಿ. ವ್ಯಾಯಾಮ/ಯೋಗ/ಏರೋಬಿಕ್ಸ್/ಕರಾಟೆ/ಧ್ಯಾನ

7.45. ಧ್ವಜಾರೋಹಣ

8.00. ಉಪಾಹಾರ

8.30. ದಿನದ ಸುವಿಚಾರ

9.00. ಪ್ರವಚನ– ಆಪ್ತ ಸಲಹೆ

10.00. ರಸಪ್ರಶ್ನೆ

10.45. ಚಹಾ ವಿರಾಮ

11.00. ಸ್ವರಕ್ಷಣೆ ಮತ್ತು ಸಬಲೀಕರಣ

1.00. ಭೋಜನ ವಿರಾಮ

2.00. ನೈಸರ್ಗಿಕ ವಸ್ತುಗಳಿಂದ ಸೌಂದರ್ಯ ವರ್ಧನೆ ತರಬೇತಿ

3.30. ಸೌಂದರ್ಯ ಸ್ಪರ್ಧೆ ಮತ್ತು ಸಾಂಪ್ರದಾಯಕ ಉಡುಗೆಯೊಂದಿಗೆ ಪ್ರದರ್ಶನ

4.30. ಚಹಾ ವಿರಾಮ

5.00. ವಿಶೇಷ ಆಟಗಳು

6.00. ಶಿಬಿರಾಗ್ನಿಗೆ ತಯಾರಿ

7.30. ಭೋಜನ ವಿರಾಮ

8.30. ಶಿಬಿರಾಗ್ನಿ

10.00. ಶುಭರಾತ್ರಿ

ಮೂರನೆಯ ದಿನ

7.00. ಸರ್ವ ಧರ್ಮ ಪ್ರಾರ್ಥನೆ

7.45. ಧ್ವಜಾರೋಹಣ

8.00. ಉಪಾಹಾರ

9.00. ಪ್ರವಚನ–ಮಹಿಳಾ ಆರಕ್ಷಕರಿಂದ

11.00. ಚಹಾ ವಿರಾಮ

11.30. ಪ್ರವಚನ–ಕಾನೂನಿನಲ್ಲಿ ಮಹಿಳೆಯರಿಗೆ ಇರುವ ಸೌಲಭ್ಯಗಳು

12.30. ಭೋಜನಾ ವಿರಾಮ

2.00 ಮುಕ್ತ ಸಂವಾದ

2.30 ಸಮಾರೋಪ

4.00 ಧ್ವಜ ಅವರೋಹಣ ಮತ್ತು ವಿದಾಯ

ಕೈಗೊಳ್ಳಲಿರುವ ಯೋಜನೆಗಳ ಅವಲೋಕನ–ಚಿಂತನೆ

1. ಈಗಾಗಲೇ ಕೈಗೊಂಡ ಯೋಜನೆಗಳ ಪುನರ್ಪರಿಶೀಲನೆ
2. ಜಿಲ್ಲಾ ಮಟ್ಟದಿಂದ ರಾಷ್ಟ್ರಮಟ್ಟದವರೆಗೆ ಪ್ರೇರಣಾ
3. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೊಸ ಹೆಜ್ಜೆ
4. ಹೆಣ್ಣುಮಕ್ಕಳ ಸಮಸ್ಯೆಗಳ ಸಿಂಹಾವಲೋಕನ
5. ಜಾಗತಿಕ ಮಟ್ಟದಲ್ಲಿ ಯುವತಿಯರ ಸಬಲತೆ ಮತ್ತು ಪುನಶ್ಚೇತನ.
6. ಹಿಂದುಳಿದ ವಿಶ್ವ ಸ್ತ್ರೀ ಸಮಾಜದ ಅವಲೋಕನ
7. ಶೈಕ್ಷಣಿಕ, ಬೌದ್ಧಿಕ, ಭಾವನಾತ್ಮಕ ಬೆಳವಣಿಗೆಗಾಗಿ ಚಿಂತನೆ.
8. ವ್ಯಕ್ತಿ ಮತ್ತು ಸಾಮಾಜಿಕ ಮೌಲ್ಯಗಳ ಉಳಿವು
9. ಪರಿಸರ ಕಾಳಜಿ
10. ಆರ್ಥಿಕ ದೃಢತೆ
11. ಸಭ್ಯ ನಾಗರಿಕಳಾಗುವಿಕೆ
12. ಮದ್ಯಪಾನ, ಮಾದಕ ವಸ್ತುಗಳಿಂದ ಹಾನಿಕರ ಪರಿಣಾಮಗಳ ಮಾಹಿತಿ.
13. ಸಂವಿಧಾನದ ಮೂಲಭೂತ ಹಕ್ಕುಗಳು ಮತ್ತು ಕರ್ತವ್ಯಗಳ ಅರಿವು ಹಾಗೂ ಪರಿಪಾಲಿಸುವುದು.

11. ರೇಂಜರ್‌ಗಳ – ಅನಿಸಿಕೆಗಳು

ಪ್ರೇರಣಾ ಶಿಬಿರಗಳು ಕರ್ನಾಟಕದಲ್ಲಿ ಸತತವಾಗಿ ಐದು ವರ್ಷಗಳಿಂದ ನಡೆದು ಬರುತ್ತಿದ್ದು, ಪ್ರಭಾವ ಪೂರ್ಣವಾಗಿದ್ದು, ಅರ್ಥಪೂರ್ಣ ಹಾಗೂ ಸತ್ವಪೂರ್ಣ ಯಶಸ್ಸನ್ನು ಸಾಧಿಸುತ್ತಿರುವುದು ಸ್ವಾಗತಾರ್ಹ!

ಈ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದ ರೇಂಜರ್‌ಗಳು ತಮ್ಮ ಅನಿಸಿಕೆಗಳನ್ನು, ಭಾವನೆಗಳನ್ನು ಅಭಿವ್ಯಕ್ತಿಗೊಳಿಸಿರುವುದು **ಪ್ರೇರಣಾದ ಯಶಸ್ಸಿಗೆ** ದರ್ಪಣವಾಗಿದೆ. ಅಂತಹ ಕೆಲವು ಯುವಧ್ವನಿಗಳನ್ನು ಈ ಕೆಳಗೆ ಅವರ ನುಡಿಗಳಲ್ಲೇ ಹಿಡಿದಿಡಲಾಗಿದೆ.

ಅಭಿಪ್ರಾಯಗಳು :

☞ ಶಿಸ್ತು, ಸಮಯಪ್ರಜ್ಞೆ, ಮಹಿಳೆಯರ ಸ್ಥಾನಮಾನದ ಅರಿವನ್ನು ಪಡೆದೆವು. ಸಾಧನೆಯ ಮಹಿಳೆಯರ ಉಪನ್ಯಾಸಗಳಿಂದ ಧೈರ್ಯ, ಗೌರವ ನಮ್ಮಲ್ಲಿ ಮೂಡಿದೆ. ಮಹಿಳೆ ಮತ್ತು ಪುರುಷರ ಬಗ್ಗೆ ಸಮಾನತೆಯ ಚರ್ಚೆ ನಡೆಸಿದೆವು.

☞ ಜಾಗತಿಕ ಮಟ್ಟದಲ್ಲಿ ರಫ್ತು ಆಮದುಗಳ ಸರಕು ಸಾಮಗ್ರಿಗಳ ಬಗ್ಗೆ ವಿಶೇಷ ಚರ್ಚೆಯಲ್ಲಿ ಭಾಗಿಯಾಗಿದ್ದು ಜಾಗತೀಕರಣದಿಂದ ಅನುಕೂಲ ಮತ್ತು ಅನನುಕೂಲಗಳ ಬಗ್ಗೆ ಮಾಹಿತಿ ಪಡೆದೆವು.

☞ ಆದರ್ಶ ಪುರುಷ ಮತ್ತು ಮಹಿಳೆಯರ ಬಗ್ಗೆ ಮಾಹಿತಿ ಪಡೆದೆವು. ಅವರ ಸಾಧನೆಯ ಅವಲೋಕನ ಮತ್ತು ಯಶಸ್ಸಿನ ಅರಿವನ್ನು ಪಡೆದೆವು.

☞ ಹಿಂದಿನ ಮತ್ತು ಇಂದಿನ ಮಹಿಳೆಯರ ಪಾತ್ರ ಮನೆಯೊಳಗೆ, ಮನೆ ಹೊರಗೆ ಆಕೆಯ ಕೆಲಸ ಕಾರ್ಯಗಳ ವಿಮರ್ಶೆ ಚೆನ್ನಾಗಿ ನಡೆದು, ಬದಲಾಗುತ್ತಿರುವ ಸಮಾಜದ ಬಗ್ಗೆ ಚಿಂತನೆ ನಡೆಸಿದೆವು.

☞ ಸಮಯ ಪ್ರಜ್ಞೆಯ ಅರಿವು, ಅದು ಅತ್ಯಮೂಲ್ಯ ಎಂಬುದರ ಪರಿಚಯ ಮಾಡಿಕೊಂಡೆವು. ಅದರ ಸದ್ಬಳಕೆಯ ಬಗ್ಗೆ ವೇಳಾಪಟ್ಟಿಯನ್ನು ಸಿದ್ಧ ಮಾಡಿದೆವು.

- ಆರೋಗ್ಯವೇ ಭಾಗ್ಯ ಎಂಬುದನ್ನು ಆಹಾರ ಸೇವನೆ ಕ್ರಮ, ದೈಹಿಕ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ಹೆಚ್ಚಿನ ಮಾಹಿತಿ ಪಡೆದೆವು.
- ಯೋಗಾಭ್ಯಾಸದ ಅವಶ್ಯಕತೆಗಳನ್ನು ಅರಿತೆವು.
- ಶಿಸ್ತು ಮತ್ತು ಶಿಷ್ಟಾಚಾರ ಎಷ್ಟು ಮುಖ್ಯವೆಂಬುದು ನಮಗೆ ಅರ್ಥವಾಯಿತು.
- ಈ ಶಿಬಿರ ಉತ್ಸಾಹಪೂರ್ಣವಾಗಿತ್ತು. ನಮ್ಮ ಜ್ಞಾನವನ್ನು ಹೆಚ್ಚಿಸಿತು, ಪರಿಸರ ಜಾಗೃತಿ ಮೂಡಿತು.
- ಪರಸ್ಪರ ಸಾಮಾಜಿಕ ಹಾಗೂ ಭಾವನಾತ್ಮಕ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕೆಂದು ತಿಳಿದೆವು.
- ಆಟಗಳಿಂದ ಮನರಂಜನೆ, ವಿಶ್ರಾಂತಿ ಮತ್ತು ಸಂತೋಷ ಸಿಗುವುದೆಂಬುದನ್ನು ಚರ್ಚಿಸಿದೆವು.
- ಯೋಗ, ಧ್ಯಾನ, ವ್ಯಾಯಾಮ ಆಟಗಳಿಂದ ದೇಹ ಮತ್ತು ಮನಸ್ಸು ಆರೋಗ್ಯ ಪೂರಕವಾಗಿರುತ್ತದೆಯೆಂಬುದನ್ನು ಒಪ್ಪಿದೆವು.
- ಮದ್ಯಪಾನ, ಮಾದಕ ವಸ್ತುಗಳ ಸೇವನೆ ಇತರು ದುಷ್ಚಟಗಳಿಂದ ದೂರವಿರುವ ಅವಶ್ಯಕತೆಗಳನ್ನು ಚರ್ಚಿಸಿದೆವು, ಅದರ ಕೆಡಕುಗಳನ್ನು ತಿಳಿದೆವು.
- ಶರೀರ, ಮನಸ್ಸು ಮತ್ತು ಲೈಂಗಿಕ ಶಿಕ್ಷಣದ ಸಮರ್ಪಕ ಜ್ಞಾನದ ಅರಿವು ನಮಗೆ ಅವಶ್ಯಕವೆಂಬುದನ್ನು ಅರಿತೆವು.
- ಹಣದ ಮೌಲ್ಯದ ಮಾಹಿತಿ ಪಡೆದೆವು.
- ಕರಕುಶಲ ವಸ್ತುಗಳು ಮತ್ತು ಉದ್ಯಮಗಳ ಬಗ್ಗೆ ಮಾಹಿತಿ ಪಡೆದೆವು.
- ವಿವಿಧ ಉದ್ಯೋಗ ಕ್ಷೇತ್ರಗಳ ಮಾಹಿತಿ ಹಾಗೂ ಅದರಲ್ಲಿ ತೊಡಗಿಸಿ-ಕೊಳ್ಳುವ ವಿಧಾನಗಳನ್ನು ತಿಳಿದೆವು.
- ಭಾಷಣ ಕಲೆಯ ಬಗ್ಗೆ ಮಾಹಿತಿ ನೀಡಿ, ಮಾತನಾಡುವ ಕೌಶಲ್ಯವನ್ನು ಶಿಬಿರದಲ್ಲಿ ನೀಡಲಾಯಿತು.
- ಸಮಾಜ ನಮ್ಮನ್ನು ಸ್ತ್ರೀಯೆಂದು ನಿರ್ಲಕ್ಷಿಸಿದರೂ ಎದೆಗುಂದದೆ ಪರಿಶ್ರಮದಿಂದ ಗುರಿಸಾಧಿಸಬೇಕೆಂದು ನಿರ್ಧರಿಸಿದೆವು.
- ಹಳ್ಳಿ, ನಗರ ಜೀವನದ ಒತ್ತಡಗಳ ಬಗ್ಗೆ ಚರ್ಚಿಸಿ ಅದಕ್ಕೆ ಕೆಲವು ಪರಿಹಾರಗಳನ್ನು ಪಡೆದೆವು.
- ಒಟ್ಟಾರೆ ಆತ್ಮ ವಿಶ್ವಾಸ ಮತ್ತು ಆತ್ಮ ಸ್ಥೈರ್ಯಗಳ ಅರಿವಾಯಿತು.

ಗ್ರಂಥ ಋಣ :

1. A.P.R.O. Part-II & III
2. Scouting for Boys - Baden Powell
3. ಸ್ಕೌಟಿಂಗ್ ಪರಿಚಯ – ರಾ. ಚಂದ್ರಶೇಖರನ್, ಎಲ್.ಟಿ.(ಕಬ್ಸ್)
4. Pravesh - Ranger Hand Book
5. ಗೈಡ್ ಮಾರ್ಗದರ್ಶಿ – ಶ್ರೀಮತಿ ಎಸ್.ಕೆ. ಪ್ರಭ
6. Citizen - The Bharat Scouts and Guides National Headquarters

ಸ್ಫೂರ್ತಿನಿಧಿ ಶ್ರೀಮತಿ ಎಸ್.ಕೆ. ಪ್ರಭಾರವರು ದಳನಾಯಕ/ಕಿಯರು
ಮತ್ತು ಶಿಬಿರಾರ್ಥಿಗಳು

ನಿಮ್ಮ ಮಕ್ಕಳ ಪ್ರಪಂಚವನ್ನು ವಿಸ್ತರಿಸಲು
ಹಲವು ಚಿಕ್ಕ ಮಾರ್ಗಗಳಿವೆ. ಪುಸ್ತಕ ಪ್ರೀತಿ
ಎಲ್ಲಕ್ಕಿಂತ ಶ್ರೇಷ್ಠ....

– ಆಗ್ನೆಸ್ ಬೇಡನ್ ಪೊವೆಲ್

ನೆನಪಿಡಿ, ಅದು ನೀವು ಹೊಂದಿರುವಷ್ಟೇ ಅಲ್ಲ,
ಆದರೆ ನೀವು ಏನನ್ನು ಕೊಡುತ್ತೀರೋ
ಅದು ಸಂತೋಷವನ್ನು ತರುತ್ತದೆ.

– ಅಲೇವ್ ಲೇಡಿ ಬೇಡನ್ ಪೊವೆಲ್

ನಾವು ಜಗತ್ತನ್ನು ಉತ್ತಮ ಮತ್ತು
ಸಂತೋಷದ ಸ್ಥಳವನ್ನಾಗಿ ಮಾಡಬೇಕಾಗಿದೆ
ಮತ್ತು ನೀವು ಪ್ರತಿಯೊಬ್ಬರೂ ಅದನ್ನು ಮಾಡಬಹುದು.
ನಿಮ್ಮ ನಿಯಮ ಮತ್ತು ಪ್ರತಿಜ್ಞೆ
ಎಲ್ಲಾ ಸಮಯದಲ್ಲೂ ಇತರ ಜನರಿಗೆ
ಸಹಾಯ ಮಾಡುವುದು.
ಜಗತ್ತಿಗೆ ನಿನ್ನ ಅವಶ್ಯಕತೆ ಇದೆ.

– ಅಲೇವ್ ಲೇಡಿ ಬೇಡನ್ ಪೊವೆಲ್

ಪ್ರೇರಣಾದ ಉದ್ದೇಶ ಮತ್ತು ಗುರಿ

ಉದ್ದೇಶಗಳು :

- ಯುವತಿಯರು ದೈಹಿಕ, ಮಾನಸಿಕ, ಸಾಮಾಜಿಕ ಆರ್ಥಿಕ ಹಾಗೂ ಭಾವನಾತ್ಮಕವಾಗಿ ಸಬಲರಾಗುವಂತೆ ಪ್ರೇರಣೆ ನೀಡುವುದು
- ಸಕಾರಾತ್ಮಕ ಚಿಂತನೆಯ ಮೂಲಕ ತಾವು ಸಾಧನೆಯನ್ನು ಮಾಡಬಹುದೆಂಬ ಮನೋಸ್ಥೈರ್ಯವನ್ನು ನೀಡುವುದು
- ವಿವಿಧ ಚಟುವಟಿಕೆಗಳ ಮೂಲಕ ಅವರಲ್ಲಿ ಕಾರ್ಯ ಸಾಧನೆಗಾಗಿ ಪ್ರೇರಣೆ ನೀಡುವುದು
- ಜೀವನ ಕೌಶಲ, ಆರೋಗ್ಯ, ಸ್ವಾವಲಂಬನೆ, ಕರ್ತವ್ಯ, ಉತ್ತಮ ಸಮಾಜ ನಿರ್ಮಾಣ, ಜವಾಬ್ದಾರಿ, ಹಕ್ಕು, ರಾಷ್ಟ್ರೀಯತೆ, ಸ್ವ ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವುದು.
- ಸಮುದಾಯ ತನ್ನದೆಂಬ ಭಾವನೆ ಮೂಡಿಸುವುದು.
- ಉತ್ತಮ ನಾಗರಿಕತೆ ಮತ್ತು ನಾಯಕತ್ವದ ಅರಿವು ಮೂಡಿಸುವುದು.
- ಜಲ ಸಂಪನ್ಮೂಲ, ಪರಿಸರ ರಕ್ಷಣೆ, ಶಾಂತಿಯುತ ಬದುಕಿನತ್ತ ಚಿತ್ತ ಹಾಗೂ "ಪ್ಲಾಸ್ಟಿಕ್ ಬೇಡ" ಎಂಬುದರ ಬಗ್ಗೆ ಎಚ್ಚರಿಕೆ ನೀಡುವುದು.
- ಮದ್ಯಪಾನ ಮತ್ತು ಮಾದಕ ವಸ್ತುಗಳಿಗೆ ವಿದಾಯ ಹೇಳುವುದು.

ಗುರಿ:

- ಮೇಲೆ ತಿಳಿಸಿದ ಉದ್ದೇಶಗಳನ್ನು ಮನನ ಮಾಡಿಕೊಳ್ಳುವುದು.
- ಆಲೋಚಿಸುವವರ ವೈಯಕ್ತಿಕ ವಿಕಾಸಕ್ಕೆ ಸ್ಫೂರ್ತಿದಾಯಕವಾಗುತ್ತದೆ.
- ವ್ಯಕ್ತಿತ್ವ ವಿಕಸನದೊಂದಿಗೆ ಸಬಲರಾಗುತ್ತಾರೆ.
- ಹೆಚ್ಚಿನ ಜವಾಬ್ದಾರಿಯುತ ಬದುಕು ಸಾಧ್ಯವಾಗುತ್ತದೆ.
- ಆರೋಗ್ಯಕರ ಮತ್ತು ಆನಂದದ ಉಪಯುಕ್ತ ಪ್ರಜೆಗಳಾಗಿ ಬೆಳೆಯುವುದು.
- ಸ್ಕೌಟ್, ಗೈಡ್ ಪ್ರತಿಜ್ಞೆ ಮತ್ತು ನಿಯಮಗಳನ್ನು ಪಾಲಿಸುತ್ತ ಸತ್ಪಥದಲ್ಲಿ ಮುನ್ನಡೆಯುತ್ತಾರೆ.
- ಸಾಮಾಜಿಕ ಸಮಸ್ಯೆಗಳನ್ನು ತಿಳಿದು ಅದಕ್ಕೆ ಪರಿಹಾರಗಳನ್ನು ಕಂಡುಕೊಳ್ಳುತ್ತಾರೆ. ಉದಾ: ಮದ್ಯಪಾನ, ಮಾದಕವಸ್ತುಗಳ ಸೇವನೆ ಇತ್ಯಾದಿ.
- ಸಂಸ್ಕಾರಯುತ ಬದುಕಿನತ್ತ ಹೆಜ್ಜೆಗಳನ್ನಿಡಲು ನಿರ್ಧರಿಸುತ್ತಾರೆ.